ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 6 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 348 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ವಿಧಾನಸಭಾ ಚುನಾವಣೆಯಲ್ಲಿ ದೊರೆತ ಮತಗಳು ಈಗ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಲಭಿಸಲೇಬೇಕು; ತಪ್ಪಿದರೆ


ಕಪ್ಪು ಪಟ್ಟಿಗೆ ಸೇರಿಸ್ತೇವೆ...!

- ಕಾಂಗ್ರೆಸ್ ಮುಖಂಡರಿಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಎಚ್ಚರಿಕೆ
- ಆಮೇಲೆ ನೀವು ಯಾವುದೇ ಸ್ಥಾನಮಾನ, ಅಧಿಕಾರ ಕೇಳಲು ಸಾಧ್ಯವಾಗುವುದಿಲ್ಲ
- ಕಳೆದ ಬಾರಿಗಿಂತಲೂ ಅಧಿಕ ಮತ ಗಳಿಸಲು ಪ್ರಯತ್ನಿಸಿ; ಕನಿಷ್ಠ 20 ಕ್ಷೇತ್ರ ಗೆಲ್ಲುವ ಗುರಿ ನಮ್ಮದು

ಬೆಂಗಳೂರು, ಏ.5(ಕೆಎಂಶಿ)– ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪಕ್ಷಕ್ಕೆ ಲಭಿಸಿರುವ ಗೆಲುವಿನ ಮತಗಳು ಲೋಕಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಲಭ್ಯವಾಗಬೇಕು. ಇಲ್ಲದಿದ್ದರೆ ನಿಮ್ಮನ್ನು ಪಕ್ಷದಲ್ಲಿ ಕಪ್ಪು ಪಟ್ಟಿಗೆ ಸೇರಿಸಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಪಕ್ಷದ ಶಾಸಕರು ಹಾಗೂ ಮುಖಂಡರಿಗೆ ಎಚ್ಚರಿಕೆ ನೀಡಿದ್ದಾರೆ.

ಶನಿವಾರದಿಂದ ರಾಜ್ಯಾದ್ಯಂತ ಈ ಮುಖಂಡರು ಚುನಾವಣಾ ಪ್ರವಾಸ ಕೈಗೊಳ್ಳುವುದಕ್ಕೂ ಮುನ್ನಾ ದಿನ ಪಕ್ಷದ ಕಚೇರಿಯಲ್ಲಿ ದಿನವಿಡೀ ವಿವಿಧ ಹಂತದ ಮುಖಂಡರ ಸಭೆ ನಡೆಸಿ, ಅಭ್ಯರ್ಥಿಗಳ ಗೆಲುವಿನ ಗುರಿಯನ್ನು ಆಯಾಯ ಭಾಗದ ಮುಖಂಡರು ಮತ್ತು ಕಾರ್ಯಕರ್ತರ ಹೆಗಲಿಗೆ ಹಾಕಿದ್ದಾರೆ. ರಾಜ್ಯದ 28 ಕ್ಷೇತ್ರಗಳ ಪೈಕಿ ಕನಿಷ್ಠ 20 ಕ್ಷೇತ್ರಗಳನ್ನು ಗೆಲ್ಲಲೇಬೇಕು. ನಾವು ವಿಧಾನಸಭಾ ಚುನಾವಣೆಯಲ್ಲಿ ಸಾಧಿಸಿದ್ದನ್ನು ಇಲ್ಲಿಯೂ ಸಾಧಿಸಬೇಕು.

ಆಗ ನಮಗೆ ಬಂದಿರುವ ಮತಗಳ ಜೊತೆಗೆ ಇನ್ನೂ ಹೆಚ್ಚಿನ ಮತಗಳನ್ನು ಪಡೆಯಲು ಕಾರ್ಯಕ್ರಮ ರೂಪಿಸಿ, ಒಂದು ವೇಳೆ ನೀವುಗಳು ಇದರಲ್ಲಿ ವಿಫಲರಾದರೆ, ನೀವು ಮುಂದೆ ಪಕ್ಷದಲ್ಲಿ ಯಾವುದೇ



ಅಧಿಕಾರ ಕೇಳುವ ಹಕ್ಕು ಕಳೆದುಕೊಳ್ಳುತ್ತೀರಿ, ನಿಮ್ಮನ್ನು ಪಕ್ಷ ಕಪ್ಪು ಪಟ್ಟಿಗೆ ಸೇರಿಸುತ್ತದೆ. ಶಾಸಕರು ಮತ್ತು ಚುನಾವಣೆಯಲ್ಲಿ ಪರಾಭವಗೊಂಡವರು ಪಡೆದ ಮತಗಳಿಗಿಂತ ಹೆಚ್ಚಿನ ಮತಗಳನ್ನು ಗಳಿಸಲೇಬೇಕು ಎಂದು ತಾಕೀತು ಮಾಡಿದ್ದಾರೆ. ಮೊದಲ ಹಂತದಲ್ಲಿ ಚುನಾವಣೆ ನಡೆಯಲಿರುವ 14 ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡಿದೆ, ಎರಡನೇ ಹಂತಕ್ಕೆ ನಾಮಪತ್ರ ಸಲ್ಲಿಕೆಗೆ ಕ್ಷಣಗಣನೆ ಆರಂಭಗೊಂಡಿದೆ. ನಿಮಗೆ ಸಮಯಾವಕಾಶವಿದೆ. ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಿ, ಅಭ್ಯರ್ಥಿಗಳು ಮತ್ತು ಮುಖಂಡರು ತಮ್ಮ ಸಮಯ ವ್ಯರ್ಥ ಮಾಡಬೇಡಿ, ಸರ್ಕಾರದ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸಿ, ಕಾರ್ಯಕರ್ತರಲ್ಲಿ ಹುಮ್ಮಸ್ಸು ತುಂಬಿ. ಕೋಲಾರದ ಮುಳಬಾಗಿಲಿನ ಕುರುಡುಮಲೆ ಗಣೇಶನಿಗೆ ಪೂಜೆ ಸಲ್ಲಿಸಿ, ಅಲ್ಲಿಂದಲೇ ನಾನು, ಶಿವಕುಮಾರ್ ಹಾಗೂ ಇತರ ಮುಖಂಡರು ಚುನಾವಣಾ ಪ್ರಚಾರ ಕೈಗೊಳ್ಳುತ್ತೇವೆ ಎಂದು ಮುಖ್ಯಮಂತ್ರಿ ತಿಳಿಸಿದರು. ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲೂ ಮುಖಂಡರು ಪ್ರತ್ಯೇಕ ತಂಡಗಳಾಗಿ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸುತ್ತೇವೆ. ದೆಹಲಿಯ ಮುಖಂಡರು ಭಾಗಿಯಾಗುತ್ತಾರೆ, ನೀವು, ನಿಮ್ಮ ಕ್ಷೇತ್ರಗಳಲ್ಲಿ ವಿಶ್ರಮಿಸದೆ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಟೊಂಕ ಕಟ್ಟಿ ನಿಲ್ಲಿ ಎಂದಿದ್ದಾರೆ. ಮಾಜಿ ಸಚಿವ ಶಂಕರ್ ಹಾಗೂ ಇತರ ಕೆಲವು ಮುಖಂಡರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡ ನಂತರ ಎರಡನೇ ಹಂತದಲ್ಲಿ ನಡೆಯುವ ಎಲ್ಲಾ ಕ್ಷೇತ್ರಗಳ ಮುಖಂಡರ ಜೊತೆ ಸಭೆ ನಡೆಸಿದರು.

ತದನಂತರ ಕಾರ್ಯಾಧ್ಯಕ್ಷರಾಗಿ ನೇಮಕಗೊಂಡ ತನ್ವೀರ್ ಸೇಠ್, ವಿನಯ ಕುಮಾರ್ ಸೊರಕೆ, ಜಿ.ಸಿ.ಚಂದ್ರಶೇಖರ್, ವಿನಯ್ ಕುಲಕರ್ಣಿ, ಮಂಜುನಾಥ್ ಭಂಡಾರಿ, ವಸಂತಕುಮಾರ್ ಅವರ ಪದಗ್ರಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಚುನಾವಣೆಗೆ ಸಂಬಂಧಿಸಿದಂತೆ ಮಹಿಳಾ ಕಾಂಗ್ರೆಸ್ ಪದಾದಿಕಾರಿಗಳ ಜೊತೆಯೂ ಸಭೆ ನಡೆಸಿದ ನಾಯಕರು ಲೋಕಸಭಾ ಚುನಾವಣಾ ಗೆಲುವಿನ ಟಾರ್ಗೆಟ್ ನೀಡಿದರು.



ಸಂಸದೆ ಸುಮಲತಾ ಶುಕ್ರವಾರ ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಗೊಂಡರು. ಈ ವೇಳೆ ಮಾಜಿ ಸಿಎಂಗಳಾದ ಬಿ.ಎಸ್.ಯಡಿಯೂರಪ್ಪ, ಡಿ.ವಿ.ಸದಾನಂದಗೌಡ, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಚುನಾವಣಾ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರವಾಲ್, ವಿಪಕ್ಷ ನಾಯಕ ಆರ್.ಅಶೋಕ್ ಸೇರಿದಂತೆ ಹಲವು ನಾಯಕರು ಉಪಸ್ಥಿತರಿದ್ದರು.

ಸಂಸದೆ ಸುಮಲತಾ ಬಿಜೆಪಿ ಸೇರ್ಪಡೆ

- ಮಂಡ್ಯ ಹಾಗೂ ದೇಶದ ಹಿತದೃಷ್ಟಿ; ಜೊತೆಗೆ ಮೋದಿ ಅವರನ್ನು ಮತ್ತೆ ಪ್ರಧಾನಿ ಮಾಡಲು ಈ ನಿರ್ಧಾರ
- ಸುಮಲತಾ ಸೇರ್ಪಡೆಯಿಂದ ಮಂಡ್ಯದಲ್ಲಿ ಎನ್‌ಡಿಎ ಅಭ್ಯರ್ಥಿ ಗೆಲುವು ನಿಶ್ಚಿತ: ವಿಜಯೇಂದ್ರ
- ಮಾಜಿ ಕ್ರಿಕೆಟ್ ತಾರೆ ದೊಡ್ಡ ಗಣೇಶ್, ಕೊಪ್ಪಳ ಮಾಜಿ ಸಂಸದ ಶಿವರಾಮಗೌಡ ಸೇರಿ ಹಲವರು ಬಿಜೆಪಿ ಸೇರ್ಪಡೆ

ಬೆಂಗಳೂರು, ಏ.5(ಕೆಎಂಶಿ)– ಸಂಸದೆ ಸುಮಲತಾ ಅಂಬರೀಶ್ ಇಂದಿಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆ ಗೊಂಡಿದ್ದಾರೆ. ಪ್ರಸಕ್ತ ಲೋಕಸಭಾ ಚುನಾವಣಾ ಕಣದಿಂದ ಹಿಂದೆ ಸರಿದು, ಕಮಲದ ಚಿನ್ಹೆ ಹಿಡಿದ ಸುಮಲತಾ ಅವರಿಗೆ ಪಕ್ಷದ ಕಚೇರಿಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ಚುನಾವಣಾ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರವಾಲ್, ವಿಧಾನಸಭೆಯಲ್ಲಿನ ವಿರೋಧ ಪಕ್ಷದ ನಾಯಕ

● 10ನೇ ಪುಟಕ್ಕೆ

ಬಿಜೆಪಿಯಿಂದ ಮೋಸ ಆಗಿಲ್ಲ

ಬಿಜೆಪಿಯಿಂದ ನನಗೆ ಮೋಸ ಆಗಿಲ್ಲ. ಮೋಸ ಆಗಿದ್ದರೆ ನಾನು ಅದೇ ಪಕ್ಷವನ್ನು ಏಕೆ ಸೇರುತ್ತಿದ್ದೆ ಎಂದು ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಅವರು ಪ್ರಶ್ನಿಸಿದರು. ಬಿಜೆಪಿಗೆ ಸೇರ್ಪಡೆಯಾದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, ದೇಶದ ಅಭ್ಯುದಯಕ್ಕಾಗಿ ಹಗಲಿರುಳೆನ್ನದೇ ಶ್ರಮಿಸುತ್ತಿರುವ ಪ್ರಧಾನಿ ಮೋದಿ ಅವರಿಂದ ಪ್ರೇರಣೆಗೊಂಡು ಅವರ ಕೈ ಬಲಪಡಿಸಲು ಬಿಜೆಪಿಗೆ ಸೇರಿದ್ದೇನೆ ಎಂದು ಹೇಳಿದರು. ಬಿಜೆಪಿಯಲ್ಲಿ ಎಲ್ಲರೂ ಕಾರ್ಯಕರ್ತರೇ. ಪಕ್ಷದ ವರಿಷ್ಠರು ಯಾವ ಜವಾಬ್ದಾರಿ ಕೊಡುತ್ತಾರೋ ಅದನ್ನು ನಿರ್ವಹಿಸುತ್ತೇನೆ. ಆ ಬಗ್ಗೆ ನಾಯಕರು ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದರು. ಪುತ್ರ ಅಭಿಷೇಕ್ ಅಂಬರೀಷ್ ಸಿನಿಮಾ ರಂಗದಲ್ಲಿಯೇ ಮುಂದುವರೆಯುತ್ತಾರೆ. ಸದ್ಯಕ್ಕೆ ರಾಜಕೀಯಕ್ಕೆ ಬರುವುದಿಲ್ಲ. ಚಿತ್ರನಟರಾದ ದರ್ಶನ್, ಯಶ್ ಬೆಂಬಲ ಸದ್ಯಕ್ಕೆ ಅಪ್ರಸ್ತುತ. ಪಕ್ಷಕ್ಕಿಂತ ನಿಮ್ಮ ನಿರ್ಧಾರ ಮುಖ್ಯ ಎಂದು ಅವರು ನನಗೆ ತಿಳಿಸಿದ್ದಾರೆ ಎಂದರು.

ಅರಮನೆ ಗೋಡೆ ಹೊರಭಾಗದ ಮೈದಾನದಲ್ಲಿ ಆಕಸ್ಮಿಕ ಬೆಂಕಿ

ಮೈಸೂರು,ಏ.5(ಆರ್‌ಕೆ)– ಬೇಸಿಗೆ ದೆಗೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದರಿಂದ ಮೈಸೂರಿನ ಅರಮನೆ ಗೋಡೆ ಪಕ್ಕದ ಮೈದಾನದಲ್ಲಿ ಆಕಸ್ಮಿಕ ಬೆಂಕಿ ತಗುಲಿ ಒಣಗಿದ ಹುಲ್ಲು, ಗಿಡಗಂಟಿಗಳು ಸುಟ್ಟುಹೋಗಿವೆ.

ಹಾರ್ಡಿಂಗ್ ವೃತ್ತದ ಸಮೀಪ ಅರಮನೆ ಪೂರ್ವ ಭಾಗದಲ್ಲಿ ಇಂದು ಮಧ್ಯಾಹ್ನ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿತು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಅದರಿಂದ ಬೆಂಕಿ ಕೆನ್ನಾಲಿಗೆ ವಿಸ್ತಾರಗೊಂಡು ಸಂಭವಿಸಬಹುದಾದ ಅನಾಹುತ ತಪ್ಪಿದಂತಾಗಿದೆ.

ಕೆ.ಆರ್. ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಅಗ್ನಿಶಾಮಕ ಠಾಣೆ ಸಿಬ್ಬಂದಿಗೆ ಕಾರ್ಯಾಚರಣೆಗೆ ನೆರವಾದರು.

ಮೈಸೂರು–ಕೊಡಗು 4, ಮಂಡ್ಯ 8, ಚಾ.ನಗರ 3, ಹಾಸನದಲ್ಲಿ 3 ನಾಮಪತ್ರ ತಿರಸ್ಕೃತ

ಮೈಸೂರು–ಕೊಡಗು ಕ್ಷೇತ್ರದಲ್ಲಿ ಬಿಜೆಪಿಯ ಯದುವೀರ್, ಕಾಂಗ್ರೆಸ್‌ನ ಲಕ್ಷ್ಮಣ ಸೇರಿ 28, ಮಂಡ್ಯದಲ್ಲಿ ಕಾಂಗ್ರೆಸ್‌ನ ಸ್ಟಾರ್ ಚಂದ್ರು, ಎನ್‌ಡಿಎಯ ಕುಮಾರಸ್ವಾಮಿ ಸೇರಿ 19, ಚಾ.ನಗರದಲ್ಲಿ ಬಿಜೆಪಿಯ ಬಾಲರಾಜ್, ಕಾಂಗ್ರೆಸ್‌ನ ಸುನೀಲ್ ಬೋಸ್ ಸೇರಿ 22 ನಾಮಪತ್ರ ಕ್ರಮಬದ್ಧ

ಮೈಸೂರು, ಏ.5–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಗೆ ಸಲ್ಲಿಕೆಯಾಗಿದ್ದ 28 ಅಭ್ಯರ್ಥಿಗಳ ಪೈಕಿ ನಾಲ್ವರ ನಾಮಪತ್ರಗಳು ತಿರಸ್ಕೃತಗೊಂಡಿದ್ದು, ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಸೇರಿ ಒಟ್ಟು 24 ಅಭ್ಯರ್ಥಿಗಳ ನಾಮಪತ್ರ, ಚಾಮರಾಜನಗರದಲ್ಲಿ 3 ನಾಮಪತ್ರಗಳು ತಿರಸ್ಕೃತಗೊಂಡಿದ್ದು, ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಬೋಸ್, ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್ ಸೇರಿ 22 ಅಭ್ಯರ್ಥಿಗಳ ನಾಮಪತ್ರ, ಮಂಡ್ಯ ಕ್ಷೇತ್ರದಲ್ಲಿ 8 ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತಗೊಂಡು, ಕಾಂಗ್ರೆಸ್‌ನ ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ಜೆಡಿಎಸ್‌ನ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸೇರಿ 19 ಮಂದಿ ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧವಾಗಿವೆ. ಹಾಸನದಲ್ಲಿ ನಾಮಪತ್ರ ಸಲ್ಲಿಸಿದ್ದ 21 ಮಂದಿಯ ಪೈಕಿ ಮೂವರ ನಾಮಪತ್ರ ತಿರಸ್ಕೃತಗೊಂಡಿದ್ದು, ಕಾಂಗ್ರೆಸ್‌ನ ಶ್ರೇಯಸ್ ಎಂ.ಪಟೇಲ್ ಮತ್ತು ಜೆಡಿಎಸ್‌ನ ಪ್ರಜ್ವಲ್ ರೇವಣ್ಣ ಸೇರಿದಂತೆ 18 ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧವಾಗಿದೆ. ಮೈಸೂರು–ಕೊಡಗು ಕ್ಷೇತ್ರದಲ್ಲಿ ಬಹುಜನ ಸಮಾಜವಾದಿ ಪಕ್ಷದ ರೇವತಿ ರಾಜ್, ಪಕ್ಷೇತರ ಅಭ್ಯರ್ಥಿಗಳಾದ ಡಿ.ರಾಮಯ್ಯ, ಡಿ.ಎನ್.ನವೀನ್ ಕುಮಾರ್ ಹಾಗೂ ಜೆ.ಶಿವಕುಮಾರ್ ಅವರ ನಾಮಪತ್ರಗಳನ್ನು ತಿರಸ್ಕರಿಸಲಾಗಿದೆ.

ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಿದ್ದ 25 ಅಭ್ಯರ್ಥಿಗಳ ಪೈಕಿ ಮೂವರ, ಸಮಾಜವಾದಿ ಪಾರ್ಟಿ (ಕರ್ನಾಟಕ) ಅಭ್ಯರ್ಥಿ ಚಾಮದಾಸಯ್ಯ, ಪಕ್ಷೇತರರಾದ ಗುರು ಲಿಂಗಯ್ಯ ಮತ್ತು ಸಿ.ರಾಜು ನಾಮಪತ್ರಗಳು ತಿರಸ್ಕೃತಗೊಂಡಿದ್ದು, ಕಾಂಗ್ರೆಸ್ ಅಭ್ಯರ್ಥಿ ಸುನಿಲ್‌ಬೋಸ್ ಮತ್ತು ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಸೇರಿದಂತೆ 22 ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧವಾಗಿವೆ. ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಿದ್ದ 27 ಅಭ್ಯರ್ಥಿಗಳ ಪೈಕಿ 8 ಮಂದಿ ಪಕ್ಷೇತರ ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತಗೊಂಡಿದೆ. ಪಕ್ಷೇತರರಾದ ಅರುಣ್ ಕುಮಾರ್ ಟಿ.ವಿ., ಇಂದ್ರಕುಮಾರ್ ಎಂ., ಕೃಷ್ಣ ಜಿ., ಚಿಕ್ಕಯ್ಯ, ನಾರಾಯಣ ಹೆಚ್., ನಂದೀಶ್ ಎಲ್.ಡಿ., ಶಂಭುಲಿಂಗೇಗೌಡ, ಸತೀಶ್ ಕುಮಾರ್ ಟಿ.ಎನ್. ಅವರ ನಾಮಪತ್ರಗಳು ತಿರಸ್ಕೃತ ಗೊಂಡಿದ್ದು, ಕಾಂಗ್ರೆಸ್ ಅಭ್ಯರ್ಥಿ ವೆಂಕಟ ರಮಣೇಗೌಡ (ಸ್ಟಾರ್ ಚಂದ್ರು) ಮತ್ತು ಜೆಡಿಎಸ್ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರ ಸ್ವಾಮಿ ಸೇರಿದಂತೆ 19 ಮಂದಿ ಅಭ್ಯರ್ಥಿಗಳ ನಾಮಪತ್ರಗಳು ಕ್ರಮಬದ್ಧವಾಗಿವೆ. ಏಪ್ರಿಲ್ 8ರ ಮಧ್ಯಾಹ್ನ 3 ಗಂಟೆವರೆಗೆ ನಾಮಪತ್ರ ವಾಪಸ್ ಪಡೆಯಲು ಅವಕಾಶವಿದ್ದು, ಏಪ್ರಿಲ್ 26ರಂದು ಮತದಾನ ನಡೆಯಲಿದೆ.

ಜೂನ್ 4ರಂದು ಮತ ಎಣಿಕೆ ನಡೆದು ಅಂದೇ ಮಧ್ಯಾಹ್ನದ ವೇಳೆಗೆ ಚುನಾವಣಾ ಫಲಿತಾಂಶ ಹೊರಬೀಳುವ ನಿರೀಕ್ಷೆಯಿದೆ. ಉಮೇದುವಾರಿಕೆ ಹಿಂಪಡೆಯಲು ನಿಗದಿಯಾಗಿರುವ ಅವಧಿ ನಂತರ ಅಂತಿಮ ವಾಗಿ ಕಣದಲ್ಲಿ ಉಳಿದಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುವುದು.

ಗೋಪಿನಾಥಂ ಜಲಾಶಯದಲ್ಲಿ ಮುಳುಗಿ ತಾಯಿ, ಪುತ್ರಿಯರು ದುರ್ಮರಣ

- ಬಟ್ಟೆ ಒಗೆಯುತ್ತಿದ್ದಾಗ ಗೋಪಿನಾಥಂ ಜಲಾಶಯದಲ್ಲಿ ದುರ್ಘಟನೆ
- ಮುಳುಗುತ್ತಿದ್ದ ತಾಯಿ ರಕ್ಷಣೆಗೆ ಹೋದ ಪುತ್ರಿಯರು





ಹನೂರು, ಏ.5–ಬಟ್ಟೆ ಒಗೆದು ಜಾಲಾಡಿಸಲು ಹೋದಾಗ ಕಾಲು ಜಾರಿ ಜಲಾಶಯದಲ್ಲಿ ಮುಳುಗಿ ತಾಯಿ, ಇಬ್ಬರು ಪುತ್ರಿಯರು ಮೃತಪಟ್ಟಿರುವ ದುರ್ಘಟನೆ ತಾಲೂಕಿನ ಗೋಪಿನಾಥಂ ಜಲಾಶಯದಲ್ಲಿ ಶುಕ್ರವಾರ ಮಧ್ಯಾಹ್ನ ಸಂಭವಿಸಿದೆ.

ಗೋಪಿನಾಥಂ ಸಮೀಪದ ಪುದೂರು ಗ್ರಾಮದ ನಿವಾಸಿ ಅಯ್ಯನ್ ಅವರ ಪತ್ನಿ ಮೀನಾ (34), ಪುತ್ರಿಯರಾದ ಪವಿತ್ರಾ (14) ಹಾಗೂ ಕೀರ್ತಿ (11) ಮೃತಪಟ್ಟಿದ್ದಾರೆ.

ಶಾಲೆಗೆ ರಜೆ ಇದ್ದ ಕಾರಣ ತನ್ನ ಇಬ್ಬರು ಪುತ್ರಿಯರು ಹಾಗೂ ಪುತ್ರ ಸುರೇಂದ್ರನನ್ನು ಜೊತೆಯಲ್ಲಿ ಕರೆದುಕೊಂಡು ಮೀನಾ ಗ್ರಾಮದ ಬಳಿಯ ಗೋಪಿನಾಥಂ ಜಲಾಶಯಕ್ಕೆ ಬಟ್ಟೆ ಒಗೆಯಲು ತೆರಳಿದ್ದರು. ಬಟ್ಟೆ ಒಗೆದು, ನೀರಲ್ಲಿ ಜಾಲಾಡಿಸಲು ಹೋದಾಗ ಮೀನಾ ಕಾಲು ಜಾರಿ ನೀರಿಗೆ ಬಿದ್ದಿದ್ದಾರೆ. ಪಕ್ಕದಲ್ಲೇ ಇದ್ದ ಪವಿತ್ರಾ ಹಾಗೂ ಕೀರ್ತಿ ತಾಯಿಯನ್ನು ರಕ್ಷಿಸಲು ತಾವೂ ನೀರಿಗೆ ಧುಮುಕಿದ್ದಾರೆ. ಆದರೆ, ನೀರಿನ ಸೆಳೆತಕ್ಕೆ ಸಿಲುಕಿ ಮೂವರು ಜಲಸಮಾಧಿಯಾಗಿದ್ದಾರೆ. ಆದರೆ, ಮಗ ಸುರೇಂದ್ರ ತಕ್ಷಣ ಮನೆಗೆ ಓಡಿ ಹೋಗಿ ತನ್ನ ತಂದೆಗೆ ವಿಷಯ ತಿಳಿಸಿದ್ದಾನೆ. ಸ್ಥಳಕ್ಕೆ ಬರುವುದರೊಳಗೆ ಮೂವರು ನೀರಲ್ಲಿ ಮುಳುಗಿದ್ದರು. ಮಹದೇಶ್ವರಬೆಟ್ಟದ ಪೊಲೀಸರು, ಗ್ರಾಮಸ್ಥರ

● 10ನೇ ಪುಟಕ್ಕೆ

ಮೈಸೂರು–ಚೆನ್ನೈ ಎರಡನೇ ವಂದೇ ಭಾರತ್ ರೈಲು ಸಂಚಾರ ಆರಂಭ

ಗುರುವಾರ ಹೊರತುಪಡಿಸಿ ಪ್ರತಿದಿನ ಮುಂಜಾನೆ 6 ಗಂಟೆಗೆ ಮೈಸೂರಿನಿಂದ ಹೊರಡುವ ರೈಲು ಮಧ್ಯಾಹ್ನ 12.20ಕ್ಕೆ ಚೆನ್ನೈ ತಲುಪಲಿದೆ





ಮೈಸೂರು, ಏ.5(ಆರ್‌ಕೆ)– ಮೈಸೂರು–ಚೆನ್ನೈ ನಡುವೆ 2ನೇ ವಂದೇ ಭಾರತ್ ರೈಲು ಸಂಚಾರ ಇಂದಿನಿಂದ ಆರಂಭವಾಗಿದೆ.

ಮಾರ್ಚ್ 12 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೈಸೂರು ರೈಲು ನಿಲ್ದಾಣದಿಂದ ಎಂಜಿಆರ್ ಚೆನ್ನೈ ಸೆಂಟ್ರಲ್ ರೈಲು ನಿಲ್ದಾಣ ನಡುವೆ ಸಂಚರಿಸುವ 2ನೇ ವಂದೇ ಭಾರತ್ ರೈಲು ಸೇವೆಯನ್ನು ಉದ್ಘಾಟಿಸಿದ್ದರು. ಮಾರ್ಚ್ 14 ರಿಂದ ಏಪ್ರಿಲ್ 4ರವರೆಗೆ ಈ ರೈಲು ಗಾಡಿಯು ಬೆಂಗಳೂರಿನ ಬಯ್ಯಪ್ಪನಹಳ್ಳಿಯ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಚೆನ್ನೈನ ಎಂಜಿಆರ್ ಸೆಂಟ್ರಲ್ ರೈಲ್ವೆ ನಿಲ್ದಾಣದ ನಡುವೆ ಸಂಚರಿಸುತ್ತಿತ್ತು.

ಮೈಸೂರು ರೈಲು ನಿಲ್ದಾಣದಲ್ಲಿ ನಿರ್ವಹಣಾ ವ್ಯವಸ್ಥೆ ಕಲ್ಪಿಸುವುದು ತಡವಾಗಿದ್ದ ಕಾರಣ ಉದ್ಘಾಟನೆಯಾದ ದಿನದಿಂದ ಈವರೆಗೆ ಆ ರೈಲು ಮೈಸೂರಿನಿಂದ ಸಂಚರಿಸುತ್ತಿರಲಿಲ್ಲ. ಇದೀಗ ವ್ಯವಸ್ಥೆ ಪೂರ್ಣಗೊಂಡ ಕಾರಣ, ಇಂದಿನಿಂದ 2ನೇ ವಂದೇ ಭಾರತ್ ರೈಲು ಸೇವೆ ಆರಂಭವಾಗಿದೆ. ಮೈಸೂರಿನಿಂದ ಚೆನ್ನೈ ನಗರಕ್ಕೆ ಬೆಳಗಿನ ವೇಳೆ ವಂದೇ ಭಾರತ್ ಟ್ರೈನಿಗೆ ಭಾರೀ ಬೇಡಿಕೆ ಇರುವುದನ್ನು ಮನಗಂಡು ರೈಲ್ವೆ ಇಲಾಖೆಯು 2ನೇ ರೈಲು ಸಂಚಾರ ಆರಂಭಿಸಿದೆ. ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಯಾವುದೇ ಅಧಿಕೃತ ನಿಶಾನೆ ತೋರಿ ಚಾಲನೆ ನೀಡದೇ ಈ ರೈಲು ಇಂದು ಬೆಳಗ್ಗೆ ಚೆನ್ನೈಗೆ ಪ್ರಯಾಣ ಬೆಳೆಸಿತು.

ಬೆಳಗ್ಗೆ 6 ಗಂಟೆಗೆ ಹೊರಟ ಈ ರೈಲಿನಲ್ಲಿ ಶೇ. 60 ರಿಂದ 70ಕ್ಕೂ ಹೆಚ್ಚು ಆಸನಗಳು ಭರ್ತಿಯಾಗಿದ್ದವು.

ಈ ರೈಲು ಗಾಡಿಗೆ ಪ್ರಯಾಣಿಕರಿಂದ ಅಭೂತ ಪೂರ್ವ ಪ್ರತಿಕ್ರಿಯೆ ಕಂಡು ಬಂದಿದೆ ಎಂದು ರೈಲ್ವೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ರೈಲು ಗಾಡಿ ನಂ. 20663 ಮೈಸೂರು–ಎಂಜಿಆರ್ ಚೆನ್ನೈ ವಂದೇ ಭಾರತ್ ಎಕ್ಸ್‌ಪ್ರೆಸ್ ಬೆಳಗ್ಗೆ 6 ಗಂಟೆಗೆ ಮೈಸೂರು ರೈಲು ನಿಲ್ದಾಣದಿಂದ ಹೊರಟು, ಮಧ್ಯಾಹ್ನ 12.20 ಗಂಟೆಗೆ ಎಂಜಿಆರ್ ಚೆನ್ನೈ ರೈಲು ನಿಲ್ದಾಣ ತಲುಪಲಿದೆ. ಮಾರ್ಗಮಧ್ಯೆ ಮಂಡ್ಯ, ಎಸ್‌ಎಂವಿಟಿ ಬೆಂಗಳೂರು, ಕೃಷ್ಣರಾಜಪುರಂ ಮತ್ತು ಕಾಟ್ಪಾಡಿ ರೈಲು ನಿಲ್ದಾಣಗಳಲ್ಲಿ ಈ ರೈಲಿಗೆ ನಿಲುಗಡೆ ಇದೆ.

ಅದೇ ರೀತಿ, ಆ ಕಡೆಯಿಂದ ರೈಲು ಸಂಖ್ಯೆ 20664 ಸಂಜೆ 5 ಗಂಟೆಗೆ ಚೆನ್ನೈ ರೈಲು ನಿಲ್ದಾಣದಿಂದ ಹೊರಟು ಮೈಸೂರಿಗೆ ರಾತ್ರಿ 11.20 ಗಂಟೆಗೆ ತಲುಪಲಿದೆ. ಮಾರ್ಗ ಮಧ್ಯೆ ಕಾಟ್ಪಾಡಿ, ಕೃಷ್ಣರಾಜಪುರಂ, ಬೆಂಗಳೂರು, ಮಂಡ್ಯ ನಗರ ರೈಲು ನಿಲ್ದಾಣದಲ್ಲಿ ನಿಲುಗಡೆ ಇರುತ್ತದೆ.

ಈಗಾಗಲೇ ಚಾಲ್ತಿಯಲ್ಲಿರುವ ವಂದೇ ಭಾರತ್ ರೈಲು ಸಂಖ್ಯೆ 20607 ಮುಂಜಾನೆ 5.50 ಗಂಟೆಗೆ ಚೆನ್ನೈನಿಂದ ಹೊರಟು ಮಧ್ಯಾಹ್ನ 12.20 ಗಂಟೆಗೆ ಮೈಸೂರು ತಲುಪಲಿದೆ. ಮಾರ್ಗ ಮಧ್ಯೆ ಕಾಟ್‌ಪಾಡಿ, ಬೆಂಗಳೂರು ರೈಲು ನಿಲ್ದಾಣದಲ್ಲಿ ನಿಲುಗಡೆ ವ್ಯವಸ್ಥೆಯಿದೆ.

ಆ ರೈಲು ಗಾಡಿಯು ಮಧ್ಯಾಹ್ನ 1.05 ಗಂಟೆಗೆ ಮೈಸೂರಿನಿಂದ ಹೊರಟು, ರಾತ್ರಿ 7.20ಕ್ಕೆ ಚೆನ್ನೈ ರೈಲು ನಿಲ್ದಾಣ ತಲುಪಲಿದೆ. ಮಾರ್ಗ ಮಧ್ಯೆ ಬೆಂಗಳೂರು, ಕಾಟ್ಪಾಡಿಯಲ್ಲಿ ನಿಲುಗಡೆ ಇರಲಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರು To ಚೆನ್ನೈ	
ವಂದೇ ಭಾರತ್–1	
ಹೊರಡುವ ವೇಳೆ	ಬೆಳಗ್ಗೆ 6
ತಲುಪುವ ವೇಳೆ	ಮ.12.20
(ಮಂಡ್ಯ, ಬೆಂಗಳೂರು, ಕೃಷ್ಣರಾಜಪುರಂ, ಕಾಟ್ಪಾಡಿ ನಿಲುಗಡೆ)	
ವಂದೇ ಭಾರತ್–2	
ಹೊರಡುವ ವೇಳೆ	ಮ.1.05
ತಲುಪುವ ವೇಳೆ	ರಾತ್ರಿ.7.20
(ಬೆಂಗಳೂರು, ಕಾಟ್ಪಾಡಿ ನಿಲುಗಡೆ)	
ಚೆನ್ನೈ To ಮೈಸೂರು	
ವಂದೇ ಭಾರತ್–1	
ಹೊರಡುವ ವೇಳೆ	ಸಂಜೆ 5
ತಲುಪುವ ವೇಳೆ	ರಾತ್ರಿ 11.20
(ಕಾಟ್ಪಾಡಿ, ಕೃಷ್ಣರಾಜಪುರಂ, ಬೆಂಗಳೂರು, ಮಂಡ್ಯ ನಿಲುಗಡೆ)	
ವಂದೇ ಭಾರತ್–2	
ಹೊರಡುವ ವೇಳೆ	ಮುಂಜಾನೆ 5.50
ತಲುಪುವ ವೇಳೆ	ಮ. 12.20
(ಕಾಟ್ಪಾಡಿ, ಬೆಂಗಳೂರು ನಿಲುಗಡೆ)	

ಮೊದಲ ಹಂತದ 14 ಕ್ಷೇತ್ರದಲ್ಲಿ 48 ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತ

ಬೆಂಗಳೂರು, ಏ.5–ಲೋಕಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದ 48 ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತ ವಾಗಿವೆ. ರಾಜ್ಯದಲ್ಲಿ ಮೊದಲ ಹಂತದಲ್ಲಿ ಚುನಾವಣೆ ನಡೆಯುತ್ತಿರುವ 14 ಕ್ಷೇತ್ರ ಗಳಲ್ಲಿ ಸ್ಪರ್ಧಿಸಲು 358 ಅಭ್ಯರ್ಥಿಗಳು 492 ನಾಮಪತ್ರಗಳನ್ನು ಸಲ್ಲಿಸಿದ್ದರು. ಬೆಂಗಳೂರು ದಕ್ಷಿಣ ಕ್ಷೇತ್ರದ 49 ನಾಮಪತ್ರ ಗಳನ್ನು ಹೊರತುಪಡಿಸಿ, ಉಳಿದ ಕ್ಷೇತ್ರಗಳ 443 ನಾಮಪತ್ರಗಳ ಪರಿಶೀಲನೆ ವೇಳೆ 60 ನಾಮಪತ್ರ ತಿರಸ್ಕೃತ ವಾಗಿವೆ. ಇನ್ನು 276 ಅಭ್ಯರ್ಥಿಗಳ 384 ನಾಮಪತ್ರಗಳನ್ನು ಅಂಗೀಕರಿಸಲಾಗಿದೆ. ನಾಮಪತ್ರ ಹಿಂಪಡೆಯಲು ಏ.8 ಕೊನೆಯ ದಿನವಾಗಿದೆ.

ಜಿಲ್ಲಾವಾರು ಮಾಹಿತಿ: ಮೈಸೂರು 24, ಚಾಮರಾಜನಗರ 22, ಮಂಡ್ಯ 19, ಉಡುಪಿ–ಚಿಕ್ಕಮಗಳೂರು 10, ಹಾಸನ 18, ದಕ್ಷಿಣ ಕನ್ನಡ 10, ಚಿತ್ರದುರ್ಗ 24, ತುಮಕೂರು 22, ಬೆಂಗಳೂರು ಗ್ರಾಮಾಂತರ 27, ಬೆಂಗಳೂರು ಉತ್ತರ 21, ಬೆಂಗಳೂರು ಕೇಂದ್ರ 28, ಬೆಂಗಳೂರು ದಕ್ಷಿಣ–ಮುಂದೂಡಲಾಗಿದೆ, ಚಿಕ್ಕಬಳ್ಳಾಪುರ 32, ಕೋಲಾರ 19 ಸೇರಿದಂತೆ 276 ಅಭ್ಯರ್ಥಿಗಳ ನಾಮಪತ್ರಗಳು ಸಿಂಧುವಾಗಿವೆ. ಈಗಾಗಲೇ ಪ್ರಬಲ ಪಕ್ಷಗಳ ಅಭ್ಯರ್ಥಿಗಳು ತಮಗೆ ಬರಬಹುದಾದ ಮತಗಳನ್ನು ಕಸಿಯಬಲ್ಲ ಅಭ್ಯರ್ಥಿಗಳನ್ನು ಗುರುತಿಸಿ, ಅವರ ಉಮೇದುವಾರಿಕೆ ಹಿಂಪಡೆಯುವ ನಿಟ್ಟಿನಲ್ಲಿ ಕಸರತ್ತು ಆರಂಭಿಸಿದ್ದಾರೆ.

ಮಹಾಜನ ಕಾಲೇಜು ಮೈದಾನದಲ್ಲಿ ಟಾಟಾ ಐಪಿಎಲ್ ಫ್ಯಾನ್ ಪಾರ್ಕ್ ಸಿದ್ಧ

ಮೈಸೂರು, ಏ.5(ಜಿಎ)–ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಮೈದಾನದಲ್ಲಿ ಈ ಬಾರಿಯ ಟಾಟಾ ಐಪಿಎಲ್ ಪಂದ್ಯಾವಳಿಗಳನ್ನು ವೀಕ್ಷಿಸಲು ಫ್ಯಾನ್ ಪಾರ್ಕ್ ಸಿದ್ಧಪಡಿಸಲಾಗಿದೆ ಎಂದು ರಾಜ್ಯ ಕ್ರಿಕೆಟ್ ಮಂಡಳಿ ಮೈಸೂರು ವಲಯ ಸಂಚಾಲಕ ಹರಿಕೃಷ್ಣ ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಐಪಿಎಲ್ ಫ್ಯಾನ್ ಪಾರ್ಕ್ ಆಯೋಜನೆ ಮಾಡಲಾಗುತ್ತಿದ್ದು, ಅದರಂತೆ ಈ ಬಾರಿ ಏ.6 ಮತ್ತು 7 ರಂದು ನಡೆಯಲಿರುವ ಪಂದ್ಯಗಳನ್ನು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಮೈದಾನದಲ್ಲಿ ವೀಕ್ಷಿಸಲು ಉಚಿತ ಪ್ರವೇಶ ಕಲ್ಪಿಸಲಾಗಿದೆ ಎಂದರು. ಈ ಫ್ಯಾನ್ ಪಾರ್ಕ್ ವ್ಯವಸ್ಥೆಯಲ್ಲಿ ವಿಶೇಷ ಚೇತನರು, ಹಿರಿಯ ನಾಗರೀಕರಿಗೆ ಸೂಕ್ತ ಸೌಲಭ್ಯಗಳಿವೆ. ಮಕ್ಕಳು, ದೊಡ್ಡವರಿಗೆ ಮನರಂಜನಾ ಆಟ, ತಿಂಡಿ ತಿನಿಸುಗಳ ಮಳಿಗೆ ಇರಲಿವೆ. ಬಿಸಿಸಿಐ ಈ ರೀತಿ ದೇಶದ ವಿವಿಧೆಡೆ ಆಗಾಗ್ಗೆ ಫ್ಯಾನ್ ಪಾರ್ಕ್ ಆಯೋಜಿಸುತ್ತಿರುತ್ತದೆ ಎಂದರು.

ಏ.6ರಂದು ಸಂಜೆ 7.30ಕ್ಕೆ ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ರಾಜಸ್ತಾನ ರಾಯಲ್ಸ್ ತಂಡದ ನಡುವಿನ ಪಂದ್ಯಕ್ಕೆ ಸಂಜೆ 5.30ರಿಂದ ಪ್ರವೇಶವಿರಲಿದೆ. ಮರುದಿನ ಏ.7ರಂದು ಮಧ್ಯಾಹ್ನ 3.30ಕ್ಕೆ ಮುಂಬಯಿ ಇಂಡಿಯನ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಸಂಜೆ 7.30ಕ್ಕೆ ನಡೆಯುವ ಲಕ್ನೋ ಸೂಪರ್ ಜೈಂಟ್ಸ್ ಮತ್ತು ಗುಜರಾತ್ ಟೈಟಾನ್ಸ್ ನಡುವಿನ ಈ ಎರಡು ಪಂದ್ಯಗಳ ವೀಕ್ಷಣೆಗಾಗಿ ಮಧ್ಯಾಹ್ನ 1.30ಕ್ಕೆ ಪ್ರವೇಶವಿರಲಿದೆ. ಕ್ರಿಕೆಟ್ ಪ್ರೇಮಿಗಳು ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಬಿಸಿಸಿಐ ಪ್ರತಿನಿಧಿ ಸತ್ಯಪಾಲ್, ನಿರೂಪಕ ಅಜಯ್ ಶಾಸ್ತ್ರಿ ಉಪಸ್ಥಿತರಿದ್ದರು.



ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನರಾಂ ಅವರ 117ನೇ ಜನ್ಮದಿನದ ಅಂಗವಾಗಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಮೈಸೂರಿನ ರೈಲು ನಿಲ್ದಾಣದ ವೃತ್ತದಲ್ಲಿರುವ ಡಾ.ಜಗಜೀವನ್‌ರಾಂ ಅವರ ಪ್ರತಿಮೆಗೆ ಶುಕ್ರವಾರ ಪುಷ್ಪಾರ್ಚನೆ ಮಾಡಿದರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ನಗರ ಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.



ಮೈಸೂರು ನಗರ ಬಿಜೆಪಿ ಎಸ್‌ಟಿ ಮೋರ್ಚಾ ವತಿಯಿಂದ ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬುಜಗಜೀವನ ರಾಮ್‌ರವರ 117ನೇ ಜಯಂತಿ ಅಂಗವಾಗಿ ರೈಲ್ವೆ ನಿಲ್ದಾಣದ ವೃತ್ತದಲ್ಲಿರುವ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಎಂಎಲ್‌ಸಿ ಸಿದ್ಧರಾಜು, ಮಾಜಿ ಮೇಯರ್ ಶಿವಕುಮಾರ್, ಎಸ್‌ಟಿ ಮೋರ್ಚಾ ನಗರಾಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎಸ್‌ಸಿ ಮೋರ್ಚಾ ಅಧ್ಯಕ್ಷ ಶೈಲೇಂದ್ರ, ಮಂಜುನಾಥಪುರಂ ಎಂ. ಮಹೇಶ್, ಮದಕರಿ, ಕೆ.ಗಿರೀಶ್, ಗಿರಿಧರ್ ಮತ್ತಿತರರು ಉಪಸ್ಥಿತರಿದ್ದರು.



ಚಾಮುಂಡೇಶ್ವರಿ ಯುವ ಬಳಗದ ವತಿಯಿಂದ ಹಸಿರು ಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನರಾಂ ಅವರ 117ನೇ ಜಯಂತಿ ಅಂಗವಾಗಿ ರೈಲ್ವೇ ಸ್ಟೇಷನ್ ಬಳಿ ಇರುವ ಡಾ. ಬಾಬು ಜಗಜೀವನರಾಂ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಸಿಹಿ ವಿತರಿಸಲಾಯಿತು. ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ವರುಣಾ ಮಹದೇವ್, ಚಂದ್ರು, ಲೋಕೇಶ್, ಕೇಶವಯ್ಯ, ಕಡಕೋಳ ಶಿವಲಿಂಗ, ರವಿಚಂದ್ರ, ರಾಘವೇಂದ್ರ ಇನ್ನಿತರರಿದ್ದರು.



ಹಸಿರು ಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನರಾಂ ಅವರ 117ನೇ ಜನ್ಮ ದಿನದ ಅಂಗವಾಗಿ ರೈಲ್ವೆ ನಿಲ್ದಾಣದ ಬಳಿ ಇರುವ ಇವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಎಸ್.ಶಿವಣ್ಣ, ನಾಗರಾಜು, ಮಹೇಶ್, ಶಂಕರ್, ಗಿರೀಶ್, ರಾಜೇಶ್, ರಾಚಯ್ಯ, ಮಣಿಕಂಠ, ರಾಘವೇಂದ್ರ, ಕರಿಯಪ್ಪ, ರವಿಕುಮಾರ್ ಮತ್ತಿತರರು ಹಾಜರಿದ್ದರು.

ಮೈಸೂರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ ಸಭೆ

108 ಗ್ರಾಮದ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಸೂಚನೆ

- ಮೇವು ಹೊರ ರಾಜ್ಯಗಳಿಗೆ ಹೋಗಬಾರದು
- ಕೊಳವೆ ಬಾವಿ ತೋಡಿಸಲು ಅನುಮತಿ ಕಡ್ಡಾಯ



ಮೈಸೂರು,ಏ.5– ಬರ ಪರಿಸ್ಥಿತಿ ಉಲ್ಬಣಗೊಳ್ಳುತ್ತಿದ್ದು, ಕುಡಿಯುವ ನೀರಿನ ಅಭಾವ ಕಂಡು ಬರುತ್ತಿರುವ ಜಿಲ್ಲೆಯ 108 ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸಲು ತಕ್ಷಣ ಸಂಬಂಧಿಸಿದ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕೆಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸೂಚಿಸಿದರು

ಜಿಲ್ಲಾಡಳಿತ ಭವನದಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ನಗರ ಪಾಲಿಕೆ, ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯತ್ ಹಾಗೂ ಕುಡಿಯುವ ನೀರು ಸರಬರಾಜು ಇಲಾಖೆಯ ಇಂಜಿನಿಯರುಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಜಲಮೂಲಗಳ ಸಂರಕ್ಷಣೆ, ನಿರ್ವಹಣೆ ಹಾಗೂ ದುರಸ್ತಿ ಕಾರ್ಯಗಳನ್ನು ಕೈಗೊಂಡು ಜನ, ಜಾನುವಾರುಗಳಿಗೆ ನೀರು ಒದಗಿಸಬೇಕೆಂದರು.

ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರ ರಂಜಿತ್ ಮಾಹಿತಿ ನೀಡಿ, ನೀರಿನ ಕೊರತೆ ಇರುವ ಕಡೆ 9 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ತೆಗೆದುಕೊಳ್ಳಲಾಗಿದೆ ಹಾಗೂ ಕೆಲ ಹಳ್ಳಿಗಳಿಗೆ ಹಬ್ಬಗಳ ಸಂದರ್ಭದಲ್ಲಿ ಟ್ಯಾಂಕರ್ ನೀರು ಕೊಡಲಾಗಿದೆ. ಪಿರಿಯಾಪಟ್ಟಣ ನಗರದಲ್ಲಿ ಮಾತ್ರ 9 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು ಟ್ಯಾಂಕರ್ ಮೂಲಕ ನೀರು ಕೊಡಲಾಗುತ್ತಿದೆ ಎಂದರು.

ಜಿಲ್ಲೆಯಲ್ಲಿ ಬೇಕಾಬಿಟ್ಟಿಯಾಗಿ ಕೊಳವೆ ಬಾವಿಗಳನ್ನು ತೋಡಿಸಲಾಗುತ್ತದೆ ಎಂಬ ಮಾಹಿತಿ ಇದ್ದು, ಸಂಬಂಧಿಸಿದ ಪ್ರಾಧಿಕಾರಗಳ ಅನುಮತಿ ಇಲ್ಲದೆ ಬೋರ್‌ವೆಲ್ ಕೊರೆಸುವಂತಿಲ್ಲ, ಗ್ರಾಮ ಪಂಚಾಯತಿ, ಸ್ಥಳೀಯ ಸಂಸ್ಥೆಗಳಿಂದ 25 ದಿನ ಮುಂಚಿತವಾಗಿ ಅನುಮತಿ ತೆಗೆದುಕೊಳ್ಳಬೇಕು. ಖಾಸಗಿಯವರು ತೋಡಿಸುವ ಕೊಳವೆ ಬಾವಿಗಳು ಸಾರ್ವಜನಿಕ ಕೊಳವೆ ಬಾವಿಗಳಿಗಿಂತ 500 ಮೀ ಅಂತರದಲ್ಲಿ ರಬೇಕಾದುದು ಕಡ್ಡಾಯ.

ಕಾಲರಾ ಪ್ರಕರಣ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಾಹಿತಿ ನೀಡಿ, ಜಿಲ್ಲೆಯಲ್ಲಿ ಒಂದು ಕಾಲರಾ ಪ್ರಕರಣ ವರದಿಯಾಗಿದ್ದು, ಸುತ್ತಲಿನ 600 ಮನೆಗಳ ತಪಾಸಣೆ ಮಾಡಲಾಗಿದೆ ಹಾಗೂ ಸುತ್ತಲಿನ ಪರಿಸರವನ್ನು ಸ್ವಚ್ಛತೆಯಿಂದಿಟ್ಟುಕೊಳ್ಳುವಂತೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಬ್ಯಾಂಕ್ ಸಿಬ್ಬಂದಿಗೆ ಸೂಚನೆ: ಬರ ಪರಿಸ್ಥಿತಿ ಇರುವುದರಿಂದ ಬ್ಯಾಂಕಿನವರು ಸಾಲ ವಸೂಲಾತಿಯಲ್ಲಿ ಅಮಾನವೀಯವಾಗಿ ನಡೆದುಕೊಳ್ಳಬಾರದು ಎಂದು ಬ್ಯಾಂಕ್ ಸಿಬ್ಬಂದಿಗೆ ಸೂಚಿಸಿದರು.

ಪಶುಸಂಗೋಪನಾ ಇಲಾಖೆಯ ಜಂಟಿ ನಿರ್ದೇಶಕ ಡಾ.ನಾಗರಾಜು ಮಾಹಿತಿ ನೀಡಿ, 3 ರಿಂದ 4 ವಾರಗಳಿಗಾಗುವಷ್ಟು ಮೇವಿನ ಲಭ್ಯತೆ ಇದ್ದು, ಈಗಾಗಲೇ 36 ಸಾವಿರ ಮೇವಿನ ಕಿಟ್ ನೀಡಲಾಗಿದೆ. ಮತ್ತೆ 36 ಸಾವಿರ ಕಿಟ್ ಬಂದಿದ್ದು, ವಿತರಿಸಲಾಗುವುದೆಂದರು.

ರೈತ ಮುಖಂಡರು ಕೆಲ ಗ್ರಾಮಗಳಲ್ಲಿ ಮೇವಿನ ಕೊರತೆಯಿದೆಯೆಂದು ಹೇಳುತ್ತಾರೆ. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಸ್ಯೆಯಿರುವ ಹಳ್ಳಿಗಳಿಗೆ ಭೇಟಿ ನೀಡಿ ಎಂದರು. ಗಡಿ ಭಾಗಗಳಲ್ಲಿ ಮೇವು ಹೊರ ರಾಜ್ಯಗಳಿಗೆ ಹೋಗದಂತೆ ನೋಡಿಕೊಳ್ಳಿ ಎಂದರು. ಬಿಸಿಲಿನ ತೀವ್ರತೆ ಹಿನ್ನೆಲೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ವ್ಯಾಪಕ ಪ್ರಚಾರ ಮಾಡಿಸಿ, ಹೊರಗಿನ ಬೀದಿ ಬದಿಯ ಆಹಾರ ಸೇವಿಸದಂತೆ ಅರಿವು ಮೂಡಿಸಿ, ಹೆಚ್ಚು ನೀರು ಕುಡಿಯುವುದು, ಹತ್ತಿ ಬಟ್ಟೆ ಧರಿಸುವಂತೆ ಮಾಹಿತಿ ನೀಡಿ ಎಂದರು. ಜನನಿಬಿಡ ಸ್ಥಳಗಳಲ್ಲಿ ಸಂಘ ಸಂಸ್ಥೆಗಳಿಂದ ನೀರಿನ ಅರವಟ್ಟಿಗೆಗಳ ವ್ಯವಸ್ಥೆ ಮಾಡಿಕೊಡುವಂತೆ ಮನವಿ ಮಾಡಿ ಎಂದರು. ಸಭೆಯಲ್ಲಿ ಜಿ.ಪಂ ಸಿಇಒ ಗಾಯತ್ರಿ ಕೆ.ಎಂ, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳಿದ್ದರು.

ವಿಫಲ ಕೊಳವೆ ಬಾವಿ ಮುಚ್ಚದೆ ಅನಾಹುತ ಸಂಭವಿಸಿದರೆ ಅಧಿಕಾರಿಗಳ ತಲೆದಂಡ

ವಿಫಲ ಕೊಳವೆ ಬಾವಿಗಳನ್ನು ತಕ್ಷಣ ಮುಚ್ಚಲು ಕ್ರಮವಹಿಸಿ. ವಿಜಯಪುರದಲ್ಲಿ ಆದಂತಹ ಘಟನೆಗಳು ಎಲ್ಲಿಯೂ ಮರುಕಳಿಸಬಾರದು. ಒಂದು ಗ್ರಾಮಕ್ಕೆ ಕೊಳವೆ ಬಾವಿ ತೋಡುವ ಲಾರಿ ಪ್ರವೇಶವಾದಾಗಲೇ ಅನುಮತಿ ಪಡೆದಿದ್ದಾರೆಯೇ ಎಂದು ಪರೀಕ್ಷಿಸ ಬೇಕು, ಒಂದು ವೇಳೆ ಕೊಳವೆ ಬಾವಿ ವಿಫಲವಾದರೆ ಅದನ್ನು ಸಂಪೂರ್ಣವಾಗಿ ಮುಚ್ಚುವ ಜವಾಬ್ದಾರಿ ಲಾರಿ ಮಾಲೀಕರದೇ ಆಗಿರುತ್ತದೆ. ಒಂದು ವೇಳೆ ಯಾರೂ ವಿಫಲ ಕೊಳವೆ ಬಾವಿ ಮುಚ್ಚದೇ ಅನಾಹುತಗಳು ಸಂಭವಿಸಿದರೆ ಸಂಬಂಧಿಸಿದ ವ್ಯಾಪ್ತಿಯ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಅವರ ತಲೆದಂಡವಾಗಲಿದೆ ಎಂದರು.

ಧ್ವನಿ–ಬೆಳಕು ಕಾರ್ಯಕ್ರಮ ತಾತ್ಕಾಲಿಕ ರದ್ದು



ಮೈಸೂರು,ಏ.5– ಮೈಸೂರು ಅರಮನೆ ಆವರಣದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಅರಮನೆ ಮಂಡಳಿ ವತಿಯಿಂದ 2024ರ ಯುಗಾದಿ ಸಂಗೀತೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಯುಗಾದಿ ಸಂಗೀತೋತ್ಸವಕ್ಕೆ ಸಂಬಂಧಿಸಿದಂತೆ, ಪೂರ್ವಭಾವಿ ಕಾರ್ಯಗಳು ಪ್ರಗತಿಯಲ್ಲಿರುವುದರಿಂದ ಏ.8 ರಿಂದ ಏ.12 ರವರೆಗೆ ಮೈಸೂರು ಅರಮನೆ ಆವರಣದಲ್ಲಿ ಸಂಜೆ 7ರಿಂದ 8 ಗಂಟೆಯವರೆಗೆ ನಡೆಯುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ ಎಂದು ಮೈಸೂರು ಅರಮನೆ ಮಂಡಳಿಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.14ರಿಂದ 21ರವರೆಗೆ 'ವಸಂತ ವಿಹಾರ' ಬೇಸಿಗೆ ಶಿಬಿರ

ಮೈಸೂರು, ಏ.5– ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿ 8, 9 ಹಾಗೂ 10ನೇ ತರಗತಿ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳಿಗಾಗಿ ಏ.14ರಿಂದ 21ರವರೆಗೆ 'ವಸಂತ ವಿಹಾರ' ಬೇಸಿಗೆ ಶಿಬಿರ ಏರ್ಪಡಿಸಲಾಗಿದೆ. ವ್ಯಕ್ತಿತ್ವ ನಿರ್ಮಾಣ, ಯೋಗ, ಮೌಲ್ಯಾಧಾರಿತ ಕಥೆಗಳು, ಚಿತ್ರಕಲೆ, ಸೃಜಾನಾತ್ಮಕ ಕಲಿಕೆ, ಸಂವಹನ ಕೌಶಲ, ದಿವ್ಯತ್ರಯರ ದಿವ್ಯ ಸಂದೇಶ ಇತ್ಯಾದಿ ಕಾರ್ಯಕ್ರಮಗಳು ಇರಲಿವೆ. ಆಸಕ್ತರು ಆಶ್ರಮದ ಕಾರ್ಯಾಲಯದಲ್ಲಿ ಹೆಸರು ನೋಂದಾಯಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಮೈಸೂರು ಮಹಾನಗರ ಪಾಲಿಕೆ ವಲಯ ಕಛೇರಿ 5ರ ವ್ಯಾಪ್ತಿಯ ವಾರ್ಡ್ 3ರಲ್ಲಿನ ರೈಲ್ವೆ ಬಡಾವಣೆಯಲ್ಲಿ ಅಧಿಕಾರಿಗಳು ಪೌರಕಾರ್ಮಿಕರೊಂದಿಗೆ ಜಾಥಾ ನಡೆಸಿ, ಮತದಾನದ ಬಗ್ಗೆ ಜಾಗೃತಿ ಮೂಡಿಸಿದರು. ವಲಯ ಆಯುಕ್ತೆ ರೇಖಾ ಜಿ. ಶೆಟ್ಟಿ, ವಾರ್ಡ್ ಕಂದಾಯ ಪರಿಶೀಲಕ ಭೀಮನಾಯಕ, ಆರೋಗ್ಯ ನಿರೀಕ್ಷಕಿ ಸುಗುಣ ಮತ್ತಿತರರು ಭಾಗವಹಿಸಿದ್ದರು.

ಕಿಡ್ನಿ ತಪಾಸಣಾ ಶಿಬಿರ

ಮೈಸೂರು, ಏ.5(ಜಿಎ)–ವಿಶ್ವ ಆರೋಗ್ಯ ದಿನದ ಅಂಗವಾಗಿ ಮೈಸೂರಿನ ಸಿಗ್ಮಾ ಆಸ್ಪತ್ರೆ ವತಿಯಿಂದ ಏ.7 ರಂದು ಉಚಿತ ಮೂತ್ರಪಿಂಡ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ.

ಸಿಗ್ಮಾ ಆಸ್ಪತ್ರೆಯ ಮೂತ್ರಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಎಂ. ಮಾದಪ್ಪ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಸಿಗ್ಮಾ ಆಸ್ಪತ್ರೆ ವತಿಯಿಂದ ಅನೇಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದು, ಅದರಂತೆ ಹೆಚ್ಚುತ್ತಿರುವ ಕಿಡ್ನಿ ಸಮಸ್ಯೆ ಬಗ್ಗೆ ಉಚಿತ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ ಎಂದರು. ದೇಶದಲ್ಲಿ ಶೇ.13ರಷ್ಟು ಮಂದಿ ಮೂತ್ರಪಿಂಡದ ಸಮಸ್ಯೆಗೆ ತುತ್ತಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಏ.7ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2 ಗಂಟೆವರೆಗೆ ಉಚಿತ ಮೂತ್ರಪಿಂಡ ತಪಾಸಣಾ ಶಿಬಿರ ಆಯೋಜಿಸಲಾಗಿದ್ದು, ಶಿಬಿರದಲ್ಲಿ ಬಿಪಿ, ರಕ್ತದಲ್ಲಿನ ಸಕ್ಕರೆ ಪರೀಕ್ಷೆ, ಮೂತ್ರ ಅಲ್ಬುಮಿನ್ ಪರೀಕ್ಷೆ ಸೇರಿದಂತೆ ವಿವಿಧ ಪರೀಕ್ಷೆ ಮಾಡಲಾಗುವುದು. ಅಗತ್ಯವಿರುವ ಯಾವುದೇ ಹೆಚ್ಚಿನ ಪರೀಕ್ಷೆಗಳಿಗೆ ಮುಂದಿನ ಒಂದು ತಿಂಗಳವರೆಗೆ ಶೇ.15 ರಷ್ಟು ರಿಯಾಯಿತಿ ಇದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮೂತ್ರರೋಗ ಶಾಸ್ತ್ರಜ್ಞ ಡಾ.ಅನಿಕೇತ್ ಪ್ರಭಾಕರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.04.2024 ಶನಿವಾರ, ಮಳೆ ನಕ್ಷತ್ರ: ರೇವತಿ 31.03.2024ರಿಂದ 12.04.2024
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ವಿನೋದಾ ರವಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ –ಪ್ರಾಯೋಜಿತ ಕಾರ್ಯಕ್ರಮ, 6.40 ಪದ ಸಂಸ್ಕೃತಿ– ಡಾ. ಶ್ರೀಧರ ಹೆಗಡೆ ಭದ್ರನ್, 6.50 ರೈತರಿಗೆ ಸಲಹೆ, 7.15 ಸುರಕ್ಷಿತ ಅಂತರ್ಜಾಲ–ಮಾಲಿಕೆಯಲ್ಲಿ ಸೋಷಿಯಲ್ ಮೀಡಿಯಾದಲ್ಲಿ ಸುಖವಾಗಿರುವುದು ಹೇಗೇ? ಮಾತನಾಡುತ್ತಾರೆ ಕಿರುತೆರೆ ನಟಿ ಹಾಗೂ ಲೇಖಕಿ ದೀಪಾ ರವಿಶಂಕರ್, 8.30 ಹಾದಿಯಲ್ಲಿ ಕಂಡ ಮುಖ– ಅಂಧ ಗಾಯಕ ಜೋಡಿ ಕುಮಾರಸ್ವಾಮಿ ಹಾಗೂ ಸುಧಾಮಣಿ ಅವರ ಜೊತೆ ಮಾತುಕತೆ, 10.00 ಕೆ.ಜಿ. ಕನಕಲಕ್ಷ್ಮಿ –ಹಾಡುಗಾರಿಕೆ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.35 ದೇವರನಾಮ, 1.00 ಮತ ಹಾಕೋಣ ಬನ್ನಿ– ಮತದಾನ ಜಾಗೃತಿ ಕಾರ್ಯಕ್ರಮ, 2.45 ಜನಪದ ಸಂಗೀತ, 1.20 ಭಾವಗೀತೆ –ಇಂದ್ರಾಣಿ ಅನಂತರಾಮ್, 3.30 ಮಕ್ಕಳ ಮಂಟಪ– ನಂಜನಗೂಡು ಹಳ್ಳದಕೇರಿ ಸರ್ಕಾರಿ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ 'ಮಹಾ ಕಲ್ಯಾಣ', ರಚನೆ–ಮಹಾಕಲ್ಯಾಣ, ರಚನೆ– ಎಸ್.ವಿ.ಕೃಷ್ಣಮೂರ್ತಿ, ನಿರ್ಮಾಣ– ಉಮೇಶ್ ಎಸ್.ಸ್., 4.30 ನೆನಪಿನಂಗಳ, 6.50 ಕೃಷಿರಂಗ–ಕಿಸಾನ್‌ವಾಣಿ–ಸಾವಯುವ ಕೃಷಿಯ ಪ್ರಾಮುಖ್ಯತೆ ಕುರಿತು ಮಾತನಾಡುತ್ತಾರೆ ಡಾ.ಎಸ್.ವಿ.ಸುರೇಶ್, 8.00 ಯುವವಾಣಿ, 9.30 ಲೋಕ್ ಪ್ರಸಾರಕ್ ಕೆ ಸಾಥ್, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿದುಷಿ ಈಮನಿ ಕಲ್ಯಾಣಿ –ವೀಣಾವಾದನ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಚರ್ಮದಲ್ಲಿ ಕಾಣಿಸಿಕೊಳ್ಳುವ ವಿವಿಧ ರೀತಿಯ ಗಂಟುಗಳು ಮತ್ತು ಅಪಘಾತದಿಂದ ಉಂಟಾಗುವ ಚಿಕ್ಕ ಗಾಯಗಳು ಕುರಿತು ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ
- **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ:** ಸಮಾಜ ವಿಜ್ಞಾನ ಸಂಶೋಧನಾ ವಿಧಾನಗಳು: ಪ್ರಸ್ತುತ ಪ್ರವೃತ್ತಗಳು ಮತ್ತು ಮುಂದಿನ ದಾರಿ ಕುರಿತು ಆರು ದಿನಗಳ ಕಾರ್ಯಾಗಾರ, ಬೆಳಗ್ಗೆ 10ಕ್ಕೆ ಗೋಷ್ಠಿ–16 ವಿಷಯ : ಕೃತಕ ಬುದ್ಧಿಮತ್ತೆ ಮತ್ತು ಸಮಾಜ ವಿಜ್ಞಾನ ಸಂಶೋಧನೆ, ಉಪಸ್ಥಿತರು : ಆಂಧ್ರಪ್ರದೇಶ, ಗುಂಟೂರು ವಿಜ್ಞಾನ್ ಡೀಮ್ಡ್ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಪಿ. ನಾಗಭೂಷಣ್, ಬೆಳಗ್ಗೆ 11.45ಕ್ಕೆ ಗೋಷ್ಠಿ–17, ವಿಷಯ : ಸಮಾಜ ವಿಜ್ಞಾನ ಸಂಶೋಧನೆಗಳ ನೀತಿ ತತ್ವಗಳು, ಉಪಸ್ಥಿತರು : ಬೆಂಗಳೂರು ಭಾರತೀಯ ಸಂಖ್ಯಾಶಾಸ್ತ್ರೀಯ ಸಂಸ್ಥೆಯ ಪ್ರೊ. ಎಂ. ಕೃಷ್ಣಮೂರ್ತಿ, ಮಧ್ಯಾಹ್ನ 2ಕ್ಕೆ ತಜ್ಞರ ಅಭಿಮತ, ಸಮಾಜ ವಿಜ್ಞಾನ ಸಂಶೋಧನೆ–ಮುಂದಿನ ದಾರಿ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ. ಎಸ್.ಆರ್. ನಿರಂಜನ, ಉಪಸ್ಥಿತರು : ಶಿವಮೊಗ್ಗ ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ. ಜೋಗನ್ ಶಂಕರ್, ವಿಜಯಪುರ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಕುಲಪತಿ ಪ್ರೊ. ಬಿ.ಕೆ. ತುಳಸೀಮಾಲಾ, ರಾಯಚೂರು ವಿವಿ ಕುಲಪತಿ ಪ್ರೊ. ಹರೀಶ್ ರಾಮಸ್ವಾಮಿ, ಬೆಳಗಾವಿ ರಾಣಿ ಚೆನ್ನಮ್ಮ ವಿವಿ ಕುಲಪತಿ ಪ್ರೊ. ಸಿ.ಎಂ. ತ್ಯಾಗರಾಜ, ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ.
- **ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ :** ಮೈಸೂರು ವಿವಿ ವ್ಯಾಪ್ತಿಯ ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ 'ಪ್ರಭಿಗ್ಯಾನ್' ಪ್ರತಿಭಾ ಸ್ಪರ್ಧೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ವಿದ್ವಾನ್ ಶ್ರೀಧರ್ ಜೈನ್, ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಪ್ರೊ. ನಯನಕುಮಾರಿ, ಜನಪದ ಕಲಾವಿದ ಯಶವಂತ್ ಶೆಟ್ಟಿ, ಅಧ್ಯಕ್ಷತೆ : ಮಹಾವಿದ್ಯಾಲಯ ಪ್ರಿನ್ಸಿಪಾಲ್ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ಸ್ಥಳ: ಮಹಾವಿದ್ಯಾಲಯ ಆವರಣ, ಕೃಷ್ಣಮೂರ್ತಿಪುರಂ, ಸಂಜೆ 4.30ಕ್ಕೆ.
- **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ಶ್ರೀಮತಿ ಸ್ವರೂಪರಾಣಿ, ಶಿಕ್ಷಕರು, ಹಂಪಾಪುರ, ಕೆ ಆರ್ ನಗರ ತಾಲೂಕು, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ.
- **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಬಿ.ಪಿ, ಶುಗರ್, ಬೊಜ್ಜು ನಿವಾರಣೆ, ಗ್ಯಾಸ್ಟ್ರಿಕ್, ಅಸಿಡಿಟಿ, ಅಸ್ತಮಾ, ಅಜೀರ್ಣತೆ, ಅಲರ್ಜಿ, ಹಸಿರು ನರ (ವೆರಿಕೋಸ್ ವೈನ್), ಬೆನ್ನು ನೋವು, ಸಯಾಟಿಕ್, ಸಂಧಿವಾತ, ಥೈರಾಯಿಡ್, ಮೊಣಕಾಲು ನೋವು ಇನ್ನಿತರ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಸತ್ಯನಾರಾಯಣ ಸನ್ನಿಧಿ, ಶ್ರೀ ಅಮೃತೇಶ್ವರ ದೇವಸ್ಥಾನ, ದೇವರಾಜ ಮೊಹಲ್ಲಾ, ಬೆಳಗ್ಗೆ 10.30ರಿಂದ
- **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ, ದಕ್ಷಿಣಾಮ್ನಾಯಿ ಶಾರದಾ ಪೀಠ, ಶೃಂಗೇರಿ:** ಮೈಸೂರು ಅಭಿನವ ಶಂಕರಾಲಯದ ಶತಮಾನೋತ್ಸವ, ಬೆಳಗ್ಗೆ 9 ರಿಂದ ಸಾರ್ವಜನಿಕ ಪಾದಪೂಜೆ ಮತ್ತು ಭಿಕ್ಷಾವಂದನೆ, ಮಂತ್ರಾಕ್ಷತೆ ವಿತರಣೆ, ಸಂಜೆ 4.30ಕ್ಕೆ ಕೆ.ಆರ್.ನಗರಕ್ಕೆ ನಿರ್ಗಮನ, ವಿದುಷಿ ಅಪರ್ಣಾ ಪಂಡಿತ್ ಅವರಿಂದ ಗಾಯನ, ವಿದ್ವಾನ್ ರುಪನಗುಡಿ ರತ್ನತೇಜ–ವಯೋಲಿನ್, ವಿದ್ವಾನ್ ಪ್ರಣವ್ ಸುಬ್ರಮಣ್ಯ–ಮೃದಂಗ, ಸ್ಥಳ:ಶ್ರೀ ವಿದ್ಯಾಶಂಕರ ನಿಲಯ ಕಲ್ಯಾಣ ಮಂಟಪದ ಆವರಣ.
- **ಕಲಾಸಂಸ್ಥೆ, ಮೈಸೂರು ವಿಜ್ಞಾನ ನಾಟಕೋತ್ಸವ ಟ್ರಸ್ಟ್ :** ವಿಜ್ಞಾನ ನಾಟಕ ಬರೆಹಗಾರರ ಕಮ್ಮಟ – 2024, ಹಂತ – 1, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 6.30ಕ್ಕೆ.
- **ನಿನಾದ ಮ್ಯೂಸಿಕಲ್ ಟ್ರಸ್ಟ್, ಪ್ರಸನ್ನ ಫಿಲ್ಮ್ ಹಿಟ್ಸ್ :** ಖ್ಯಾತ ಗಾಯಕ ಎಸ್.ಪಿ. ಬಾಲಸುಬ್ರಮಣ್ಯಂ ಸ್ಮರಣಾರ್ಥ ಗೀತ ಗಾಯನ ಕಾರ್ಯಕ್ರಮ, ಸನ್ಮಾನಿತರು : ಗಾಯಕಿ ಅಮೂಲ್ಯ, ದೂರದರ್ಶನದ ಖ್ಯಾತ ಗಾಯಕ ಸುದರ್ಶನ್, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5 ರಿಂದ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪ್ರವಚನಕಾರರಾದ ಪಂಡಿತ್ ಶ್ರೀ ಸತ್ಯಬೋಧಾಚಾರ್ಯ ರಟ್ಟಿಹಳ್ಳಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ–18, ಸ್ಥಳ: ಶ್ರೀರಾಘವೇಂದ್ರ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ವಿಶ್ವ ಆರೋಗ್ಯ ದಿನಾಚರಣೆ, ಮುಖ್ಯ ಭಾಷಣ : ಬಿಜಿಎಸ್ ಅಪೋಲೋ ಆಸ್ಪತ್ರೆಯ ಡಾ. ಸಂಜೀವರಾವ್ ಗಿರಿಮಾಜಿ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಭಗವದ್ಗೀತಾ ಅಭಿಯಾನ, ಪ್ರವಚನಕಾರರಾದ ಪಂಡಿತ್ ಶ್ರೀ ಸತ್ಯಬೋಧಾಚಾರ್ಯ ರಟ್ಟಿಹಳ್ಳಿ ಅವರಿಂದ ಭಗವದ್ಗೀತೆ ಪ್ರವಚನ– ಅಧ್ಯಾಯ–18, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30 ರಿಂದ.


ಬೆಂಗಳೂರಿನ ಆರ್‌ಟಿ ನಗರದ ಕಟ್ಟಡದಲ್ಲಿ ಅಗ್ನಿ ಅವಘಡ: 13 ಮಂದಿಯ ರಕ್ಷಣೆ



ಬೆಂಗಳೂರು, ಏ.5– ಬೇಸಿಗೆಯ ಬಿರು ಬಿಸಿಲಿನ ಮಧ್ಯೆ ಬೆಂಗಳೂರಿನ ಆರ್.ಟಿ. ನಗರದಲ್ಲಿ ಶುಕ್ರವಾರ ಮಧ್ಯಾಹ್ನ ಅಗ್ನಿ ಅವಘಡ ಸಂಭವಿಸಿದೆ. ಇಲ್ಲಿನ ಮಿರಾಕಲ್ ಡ್ರಿಂಕ್ಸ್ ಮತ್ತು ಐಡಿಎಸ್ ಕಟ್ಟಡದ ನೆಲಮಹಡಿಯಲ್ಲಿ ಐಟಿ ಕಂಪೆನಿಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದ ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿದ್ದು, ಸಿಬ್ಬಂದಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕಟ್ಟಡದ ನೆಲಮಹಡಿಯಲ್ಲಿ ಬೆಂಕಿ ಹೊತ್ತಿಕೊಂಡು ನಂತರ ಮೇಲಿನ ಮಹಡಿಗೆ ವ್ಯಾಪಿಸಿತು. ಕಟ್ಟಡವಿಡೀ ಹೊಗೆ ತುಂಬಿಕೊಂಡು ಒಳಗೆ ಸಿಕ್ಕಿಹಾಕಿಕೊಂಡಿದ್ದವರು ಉಸಿರಾಟ ಸಮಸ್ಯೆ ಕಾಣಿಸಿತು. ಅಗ್ನಿ ಸುರಕ್ಷಾ ವ್ಯವಸ್ಥೆಯಿದ್ದರಿಂದ ಐಟಿ ಕಂಪೆನಿಯ ಸಿಬ್ಬಂದಿಗೆ ಅಗ್ನಿ ಸುರಕ್ಷತೆ ಬಗ್ಗೆ ಮೊದಲೇ ತರಬೇತಿ ನೀಡಿದ್ದರಿಂದ ಇಂದಿನ ಅವಘಡ ವೇಳೆ ಸಮಯ ಪ್ರಜ್ಞೆ ಮೆರೆದು ಪ್ರಾಣಾಪಾಯ ಅನಾಹುತ ತಪ್ಪಿಹೋಯಿತು. ಹಲವು ಸಿಬ್ಬಂದಿ ಕಟ್ಟಡದ ಮೇಲ್ಛಾವಣಿಗೆ ದೌಡಾಯಿಸಿದರು.

ಸುದ್ದಿ ತಿಳಿದ ಕೂಡಲೇ ಸ್ಥಳಕ್ಕೆ ಅಗ್ನಿಶಾಮಕ ಸಿಬ್ಬಂದಿ, ಆರ್.ಟಿ.ನಗರ ಪೊಲೀಸರ ದೌಡಾಯಿಸಿದ್ದು, ಪಕ್ಕದ ಕಟ್ಟಡಕ್ಕೆ ಏಣಿ ಇಟ್ಟು ಕಟ್ಟಡದಲ್ಲಿದ್ದವರ ರಕ್ಷಣಾ ಕಾರ್ಯಚರಣೆ ನಡೆಸಿದ್ದಾರೆ. ಕಟ್ಟಡದ ನೆಲಮಹಡಿಯಲ್ಲಿದ್ದ ಡಿಜಿ ಸ್ಫೋಟಗೊಂಡು ಬೆಂಕಿ ಅವಘಡ ಸಂಭವಿಸಿದ್ದು, ಕಟ್ಟಡದಲ್ಲಿ ಸಿಲುಕಿದ್ದ 13 ಮಂದಿಯನ್ನು ಅಗ್ನಿಶಾಮಕ ಸಿಬ್ಬಂದಿ ಮತ್ತು ಪೊಲೀಸರು ರಕ್ಷಿಸಿದರು. ಇಬ್ಬರನ್ನು ಚಿಕಿತ್ಸೆಗೆ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಯಿತು.



SBI ಭಾರತೀಯ ಸ್ಟೇಟ್ ಬ್ಯಾಂಕ್

ಆಡಳಿತ ಕಛೇರಿ, ಸಾಹುಕಾರ್ ಚನ್ನಯ್ಯ ರಸ್ತೆ, ಸರಸ್ವತಿಪುರಂ, ಮೈಸೂರು –570 009

ಆಸಕ್ತಿಯನ್ನು ವ್ಯಕ್ತಪಡಿಸಲು ಆಮಂತ್ರಿಸುವ ಸೂಚನೆ (Expression of Interest)

ಭಾರತೀಯ ಸ್ಟೇಟ್ ಬ್ಯಾಂಕ್, ಆಡಳಿತ ಕಛೇರಿ, ಮೈಸೂರು, ತನ್ನ ಸಿಬ್ಬಂದಿ ಹಾಲಿಡೇ ಹೋಂ ಸ್ಥಾಪಿಸಲು ಮೈಸೂರು ನಗರದ ಆಸಕ್ತ, ಪ್ರತಿಷ್ಠಿತ ಹೊಟೇಲು/ ಲಾಡ್ಜುಗಳಿಂದ ಈಓಐ (Expression of Interest)ಗಾಗಿ ಆಮಂತ್ರಣ ನೀಡುತ್ತದೆ. 10 ವಿಶಾಲವಾದ, ಸ್ವಚ್ಛವಾದ ಮತ್ತು ಅಚ್ಚುಕಟ್ಟಾದ ಕೋಣೆಗಳ ಸೌಲಭ್ಯವನ್ನು ಹೊಟೇಲು/ ಲಾಡ್ಜುಗಳು ಹೊಂದಿರಬೇಕು. ಹೊಟೇಲು/ ಲಾಡ್ಜುಗಳಿಗೆ ಹೊಂದಿಕೊಂಡಿರುವಂತೆ ರೆಸ್ಟೋರೆಂಟ್ ಮತ್ತು ಕಾರ್ ನಿಲುಗಡೆಗೆ ಸಾಕಷ್ಟು ಜಾಗವನ್ನು ಹೊಂದಿರಬೇಕು.

ಈ ಮೇಲಿನ ಅಗತ್ಯಗಳನ್ನು ಪೂರೈಸಬಲ್ಲ ಹೊಟೇಲು/ ಲಾಡ್ಜುಗಳ ಆಸಕ್ತ ಮಾಲೀಕರು ಪ್ರಸ್ತಾಪ ಪತ್ರದ ನಮೂನೆಯನ್ನು ಪಡೆದುಕೊಳ್ಳಲು ಮತ್ತು ಯಾವುದೇ ಸ್ಪಷ್ಟೀಕರಣಕ್ಕಾಗಿ ಭಾರತೀಯ ಸ್ಟೇಟ್ ಬ್ಯಾಂಕ್, ಆಡಳಿತ ಕಛೇರಿ, ಸಾಹುಕಾರ್ ಚನ್ನಯ್ಯ ರಸ್ತೆ, ಸರಸ್ವತಿಪುರಂ, ಮೈಸೂರಿನ ಮುಖ್ಯ ವ್ಯವಸ್ಥಾಪಕರು–ಮಾನವ ಸಂಪನ್ಮೂಲ ಇವರನ್ನು ದಿನಾಂಕ 15.04.2024ರೊಳಗಾಗಿ ಸಂಪರ್ಕಿಸಬಹುದು. ಪ್ರಸ್ತಾಪ ಪತ್ರ/ ಈಓಐ (EOI)ವನ್ನು ಮೇಲ್ಕಂಡ ವಿಳಾಸಕ್ಕೆ ದಿನಾಂಕ 25.04.2024, ಅಪರಾಹ್ನ 3.00 ಗಂಟೆಯೊಳಗೆ ಸಲ್ಲಿಸುವಂತೆ ಕೋರಲಾಗಿದೆ.

ಭಾರತೀಯ ಸ್ಟೇಟ್ ಬ್ಯಾಂಕ್ ಯಾವುದೇ ಕಾರಣ ನೀಡದೆ ಯಾವುದೇ ಪ್ರಸ್ತಾಪವನ್ನು ಅಥವಾ ಎಲ್ಲ ಪ್ರಸ್ತಾಪಗಳನ್ನೂ ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು
ಭಾರತೀಯ ಸ್ಟೇಟ್ ಬ್ಯಾಂಕ್, ಆಡಳಿತ ಕಛೇರಿ, ಮೈಸೂರು

ಮೈಸೂರು ಮಿತ್ರ

ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2024ಕ್ಕೆ 44 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 45ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2024 ರೊಳಗೆ ನೀಡಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಅಂಥೋಣಿ ಡೋವ್: 8951668960
ಪ್ರೇಮ: 9880549879

ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು – ಪ್ರಸಾದ್, ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ – 9731469871

ಹುಣಸೂರು – ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಹುಣಸೂರು. – 9448720626

ಮಂಡ್ಯ – ಕೆ. ಮೋಹನ್‌ರಾಜ್, 3ನೇ ಕ್ರಾಸ್, ಅಶೋಕನಗರ, ಮಂಡ್ಯ – 8762960325

ಶ್ರೀರಂಗಪಟ್ಟಣ – ವಿನಯ್ ಕಾರೇಕುರ, ಶ್ರೀರಂಗಪಟ್ಟಣ – 9686893234

ಯಳಂದೂರು – ವಿ.ನಾಗರಾಜು, ಮೈತ್ರಿ ಮೆಡಿಕಲ್ಸ್, ಬಳೆಪೇಟೆ, ಯಳಂದೂರು – 9844349191

ಚಾಮರಾಜನಗರ – ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ – 9242265657

ಟಿ. ನರಸೀಪುರ – ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. – 9986719590

ಗುಂಡ್ಲುಪೇಟೆ – ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ. – 9845995426

ಕೆ.ಆರ್. ನಗರ – ಕೆ.ಬಿ. ರಮೇಶ್, ಸ್ನೇಹ ಎಂಟರ್ ಪ್ರೈಸಸ್, ವಿ.ವಿ.ರಸ್ತೆ, ಕೆ.ಆರ್. ನಗರ. – 9448021368

ಮಳವಳ್ಳಿ – ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 – 9632407806

ಕೊಳ್ಳೇಗಾಲ – ರಾಜು, ಮೈಸೂರು ಮಿತ್ರ ರಿಪೋರ್ಟರ್, #101, ಹುರಳಿಕೇರಿ ಬೀದಿ, ಕೊಳ್ಳೇಗಾಲ – 9916621007

ಹಾಸನ – ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175

ಕುಶಾಲನಗರ – ರಘು, ಮೈಸೂರು ಮಿತ್ರ ರಿಪೋರ್ಟರ್, ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ – 9845698401

ಜಯಪುರ – ಬಿಳಿಗಿರಿ, ಜಯಪುರ – 9945479288

ಪಿರಿಯಾಪಟ್ಟಣ – ವೀರೇಶ್, ಪಿರಿಯಾಪಟ್ಟಣ – 8660057128

ವಿರಾಜಪೇಟೆ – ಮಂಜುನಾಥ, ವಿರಾಜಪೇಟೆ – 9900949353

ಕೆ.ಆರ್.ಪೇಟೆ – ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ – 9449326847, 7022757438

ಹೆಚ್.ಡಿ.ಕೋಟೆ – ಮಂಜುನಾಥ ಎಸ್., ಹೆಚ್.ಡಿ.ಕೋಟೆ – 9483574452

ಕೆ.ಎಂ.ದೊಡ್ಡಿ – ಸತೀಶ್ ವಿ.ಎಲ್, ಕೆ.ಎಂ.ದೊಡ್ಡಿ – 9242120338

ನಂಜನಗೂಡು – ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಓಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 – 9901602226

ಹುಣಸೂರು – ಹೆಚ್.ಆರ್. ಕೃಷ್ಣಕುಮಾರ್ (ಜಿನ್ ರಾಮೇಗೌಡ), ನಂದಿನಿ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು – 9060406093

ಕೊಳ್ಳೇಗಾಲ – ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ – 9448576247, 7899849858



ನಕ್ಕರೆ ಅದೇ ಸ್ವರ್ಗ

ಹೆಂಡತಿ : (ಒಂದೇ ಸಮನೆ ಮಾತನಾಡುತ್ತಿದ್ದ ಗಂಡನನ್ನು ಕುರಿತು) ಯಾಕ್ರೀ ಇಷ್ಟೊಂದು ಮಾತಾಡ್ತಾ ಇದ್ದೀರಿ?

ಗಂಡ : ನಂಗೆ ಆರೋಗ್ಯ ಸರಿ ಇಲ್ಲ... ಅದಕ್ಕೆ ಡಾಕ್ಟರ್ ಹೇಳಿದ್ರು ಯಾರಾದ್ರೂ ಹುಚ್ಚರ ಜೊತೆ ಮಾತಾಡು, ಸರಿ ಹೋಗುತ್ತೆ ಅಂತ... ನೀನೇ ಹೇಳು ನನ್ನ ಲೈಫ್‌ನಲ್ಲಿ ನಿನ್ನ ಬಿಟ್ಟರೆ ಬೇರೆ ಯಾರಿದ್ದಾರೆ...!

ಮೈಸೂರು ಮಿತ್ರ

ಶನಿವಾರ, 6 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ನಿಮಗೆ ಅಧಿಕಾರದ ಆವಶ್ಯಕತೆಯಿದ್ದಾಗ ದೃಢವಾಗಿರಿ, ಆದರೆ ಅಧಿಕಾರ ಚಲಾಯಿಸುವಾಗ ಸಹೃದಯಿಗಳಾಗಿರಿ– ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪ್ರಯಾಸ ಪಡದೆ / ಪ್ರಯಾಗ ಸಿಗದು

ನಿಮ್ಮ ಪತ್ರಗಳು

ಮಹಾನಗರ ಪಾಲಿಕೆ ಆಯುಕ್ತರಿಗೆ ಒಂದು ಮನವಿ

ಮಾನ್ಯರೆ,

ಬೇಸಿಗೆಯ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಇದೆ. ಇಡೀ ಕರ್ನಾಟಕ ಸೂರ್ಯನ ಕೆಂಗಣ್ಣಿಗೆ ಗುರಿಯಾದ ಹಾಗೆ ಭಾಸವಾಗುತ್ತಿದೆ. ರಾಜ್ಯದ 12ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ 40 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ಇರುವುದು ಆತಂಕಕಾರಿ ವಿಷಯ.

ಈ ಬಾರಿ ನಮ್ಮ ಮೈಸೂರಿನಲ್ಲೂ ಸರಾಸರಿ ಉಷ್ಣಾಂಶ 39 ರಷ್ಟಿದ್ದು, ನಮ್ಮೆಲ್ಲರಿಗೆ ಎಚ್ಚರಿಕೆ ಗಂಟೆ ಆಗಿದೆ. ಈಗಾಗಲೇ ಕೆರೆ ಕಟ್ಟೆಗಳು, ನದಿಗಳು ಬತ್ತಿ ಹೋಗುತ್ತಿದ್ದು, ಅಂತರ್ಜಲ ಸಹ ಕುಸಿತ ಕಾಣುತ್ತಿದೆ. ಇದಕ್ಕೆ ತಾಜಾ ಉದಾಹರಣೆ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಗೆ ಆಗಿರುವ ಅದ್ವಾನ ನೋಡಿದರೆ ಭವಿಷ್ಯದಲ್ಲಿ ಘನಘೋರ ಪರಿಸ್ಥಿತಿ ಉಂಟಾಗಲಿದೆ. ಈಗಾಗಲೇ ನೀರಿನ ಟ್ಯಾಂಕರ್ ಒಂದಕ್ಕೆ 3000 ರೂಪಾಯಿ. ಅದು ಬುಕ್ ಮಾಡಿದ ಒಂದು ವಾರಕ್ಕೆ ಬರುತ್ತದೆ. ಇಂತಹ ಪರಿಸ್ಥಿತಿ ನಮ್ಮ ಮೈಸೂರಿಗೂ ಆದಷ್ಟು ಬೇಗ ಬರಲಿರುವ ಎಲ್ಲಾ ಸಾಧ್ಯತೆಗಳು ಇದೆ ಎಂಬುದನ್ನು ನಾವೆಲ್ಲಾ ಒಪ್ಪಲೇಬೇಕು. ಏಕೆಂದರೆ ನಮ್ಮಲ್ಲೇ ಹೆಚ್ಚು ಜನ ನೀರನ್ನು ಬೇಕಾಬಿಟ್ಟೆ ಪೋಲು ಮಾಡುತ್ತಿರುವುದು. ಅದರಲ್ಲೂ ಮನೆ ಅಂಗಳಕ್ಕೆ ನೀರಿನ ಪೈಪ್ ಹಾಕಿ ಕಿವಿಗೆ ಒಂದು ಫೋನ್ ಸಿಕ್ಕಿಸಿಕೊಂಡು ಗಂಟೆಗಟ್ಟಲೇ ರಸ್ತೆಯ ಕಣ ಕಣವನ್ನು ತೊಳೆಯುವ ಚಾಳಿ ಕೆಲವರಲ್ಲಿ ಇದೆ. ದಿನ ತಮ್ಮ ಕಾರುಗಳನ್ನು, ಬೈಕ್‌ಗಳನ್ನೂ ನೀರಿನಲ್ಲಿ ಮುಳುಗಿಸಿ ಏಳಿಸುವ ಶೋಕಿ ಕೆಲವರಲ್ಲಿ, ನಲ್ಲಿಯಲ್ಲಿ ನೀರು ಸೋರುತಿದ್ದರೂ ಸರಿಪಡಿಸದ ಬೇಜವಾಬ್ದಾರಿ ಮತ್ತೆ ಕೆಲವರಲ್ಲಿ, ಮನೆಯ ಗೋಡೆ, ಮೆಟ್ಟಿಲು ಎಲ್ಲವನ್ನು ತೊಳೆದು ತೊಳೆದು ಹೊಳಪು ಮೂಡಿಸುವ ಚಟ ಕೆಲವರಲ್ಲಿ ನಾವು ದಿನ ನಿತ್ಯ ಕಾಣುತ್ತಿದ್ದು, ಅವರಿಗೆ ಏನು ಹೇಳಲು ಆಗದ ಅಸಹಾಯಕತೆ ಕೆಲವರಲ್ಲಿ ಇದೆ.

ಇದಕ್ಕೆ ಮೈಸೂರು ಮಹಾನಗರ ಪಾಲಿಕೆಯು ಸೂಕ್ತ ಕ್ರಮ ಕೈಗೊಂಡು ಜಾಗೃತಿ ಕಾರ್ಯಕ್ರಮಗಳನ್ನೂ ಹಮ್ಮಿಕೊಂಡು ಸಾರ್ವಜನಿಕರಿಗೆ ನೀರಿನ ಮಿತಬಳಕೆ ಮಾಡುವಂತೆ ಮತ್ತು ಅನಗತ್ಯವಾಗಿ ಪೋಲು ಮಾಡದಂತೆ ಅರಿವು ಮೂಡಿಸಲು ಮುಂದಾಗಬೇಕು. ಅದಕ್ಕೆ ಪಾಲಿಕೆಯಲ್ಲಿರುವ ಸ್ವಚ್ಛತಾ ವಾಹಿನಿಗಳ ಮೂಲಕ ಧ್ವನಿ ವರ್ಧಕ ಬಳಸಿ ಅಥವಾ ಸ್ವಯಂಸೇವಕರನ್ನು ಅಥವಾ NGOಗಳ ಮೂಲಕ ಮತ್ತಷ್ಟು ಅರಿವು ಮೂಡಿಸಬೇಕು ಮತ್ತು ಕೆಲವು ಪ್ರಕರಣಗಳಲ್ಲಿ ದಂಡವನ್ನು ವಿಧಿಸಲು ಹಿಂಜರಿಯ ಬಾರದು. ಅದರ ಜೊತೆಗೆ ಹೊಡೆದ ಪೈಪ್, ಮುರಿದ ನಲ್ಲಿಗಳನ್ನೂ ಸರಿಪಡಿಸಬೇಕು. ಈ ಅಂಶಗಳನ್ನು ಪರಿಶೀಲಿಸಿ ನೀರಿನ ಮಿತ ಬಳಕೆ ಮತ್ತು ಸಂರಕ್ಷಣೆಗೆ ಪಾಲಿಕೆ ಮುಂದಾಗಬೇಕು ಮತ್ತು ಸಾರ್ವಜನಿಕರಾದ ನಾವು ಕೈಜೋಡಿಸಬೇಕು.

–ನಾಗೇಂದ್ರ ಕಿಲಗೆರೆ, ಸಾಮಾಜಿಕ ಕಾರ್ಯಕರ್ತ, ಮೈಸೂರು.

ಚೀನಿ ಹೆಸರು ನಾಮಕರಣ:ಕಡೆಗಣನೆ ಸಲ್ಲ

ಮಾನ್ಯರೆ,

ಚೀನಾವು ಅರುಣಾಚಲದ (ಝುನ್ಶ್ಯಾನ–Xegnan) ವಿವಿಧ ಸ್ಥಳಗಳಿಗೆ 30 ಹೊಸ ಹೆಸರುಗಳನಿಟ್ಟು ತನ್ನ 4ನೇ ಪಟ್ಟಿ ಬಿಡುಗಡೆ ಮಾಡಿದ್ದು, ಅವು ಮೇ 1 ರಿಂದ ಜಾರಿಗೆ ಬರಲಿವೆ ಎಂದು ಚೀನಾ ತಿಳಿಸಿರುವುದು ವರದಿಯಾಗಿರುವುದು ಕಳವಳಕಾರಿ ಸಂಗತಿ.

ಹಿಂದಿನಿಂದಲೂ ಚೀನಾ ಈ ರೀತಿ ಭಾರತದ ಜೊತೆ ತಂಟೆ ತಕರಾರು ಮಾಡಿದರೂ ಭಾರತ ಕಠಿಣ ಕ್ರಮ ಕೈಗೊಂಡು ಚೀನಾಕ್ಕೆ ಬಿಸಿ ಮುಟ್ಟಿಸಿದ ನಿದರ್ಶನಗಳಿಲ್ಲ. ಇದಕ್ಕೆ ಕಾರಣ ಚೀನಾದ ಸೇನೆ ಬಲಿಷ್ಠವಾಗಿರುವುದು. ಇಷ್ಟೇ ಅಲ್ಲದೆ ಚೀನಾವು ನಮ್ಮ ನೆರೆಹೊರೆಯ ಪಾಕಿಸ್ತಾನ, ಶ್ರೀಲಂಕಾ, ನೇಪಾಳ, ಮಾಲ್ಡೀವ್ಸ್, ಭೂತನ್ ದೇಶಗಳಿಗೆ ಹಣಕಾಸು ನೆರವು ನೀಡಿ ಅವುಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಆಯಾ ದೇಶಗಳಲ್ಲಿ ತನ್ನ ಸೇನಾ ನೆಲೆಗಳನ್ನು ಸ್ಥಾಪಿಸಿ ಭಾರತವನ್ನು ಕಟ್ಟಿ ಹಾಕಲು ಯತ್ನಿಸುತ್ತಿರುವುದು ಗುಟ್ಟಿನ ಸಂಗತಿಯೇನು ಅಲ್ಲ. ಹಾಗೆಯೇ ಚೀನಾ ಈ ಮೂಲಕ ಜಾಗತಿಕವಾಗಿಯೂ ಹಿಡಿತ ಸಾಧಿಸುತ್ತಿರುವುದು ಕಳವಳಕಾರಿಯಾಗಿದೆ. ಆದ್ದರಿಂದ ಭಾರತವು ಇದನ್ನು ಕಡೆಗಣಿಸದೆ ಅಮೇರಿಕಾ, ರಷ್ಯಾಗಳ ಸಹಕಾರ ಪಡೆದು ಚೀನಾವನ್ನು ಹಿಮ್ಮೆಟ್ಟಿಸುವ ಪ್ರಯತ್ನ ಮಾಡಲಿ. ಭಾರತವು ಚೀನಾದಂತೆ ಜಾಗತಿಕವಾಗಿ ತಾಂತ್ರಿಕವಾಗಿ ಅಭಿವೃದ್ಧಿ ಹೊಂದುವ ಕಡೆ ಗಮನ ಹರಿಸಲಿ. ಇದಕ್ಕೆ ಬೇಕಾದ ರೂಪುರೇಷೆಗಳನ್ನು ಸಿದ್ದಪಡಿಸಿ ಕಾರ್ಯರೂಪಕ್ಕೆ ತರಲಿ.

–ಮುಳ್ಳೂರು ಪ್ರಕಾಶ್, ಮೈಸೂರು.

ತಣ್ಣಗಾದ ಕರಡಿ !

ಮಾನ್ಯರೆ,

ಕೊಪ್ಪಳ ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ತಪ್ಪಿದ್ದರಿಂದ ಬಂಡಾಯದ ಸುಳಿವು ನೀಡಿದ್ದ ಹಾಲಿ ಸಂಸದ ಕರಡಿ ಸಂಗಣ್ಣ ತಮ್ಮ ಅಸಮಾಧಾನವನ್ನು ಮರೆತು ಪಕ್ಷದ ಅಭ್ಯರ್ಥಿ ಡಾ.ಬಸವರಾಜ್ ಅವರ ಪರ ಪ್ರಚಾರಕ್ಕೆ ಇಳಿದಿರುವುದು ಮಾಧ್ಯಮ ಗಳಲ್ಲಿ ವರದಿಯಾಗಿದೆ. ರಾಜ್ಯ ಹಾಗೂ ಕೇಂದ್ರ ಬಿಜೆಪಿಯ ಕೆಲವು ಹಿರಿಯ ನಾಯಕರು ಕರಡಿಯವರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆಂದು ಬಿಜೆಪಿ ಮೂಲಗಳು ತಿಳಿಸಿವೆ. ತಮ್ಮನ್ನು ರಾಜ್ಯ ಸಭೆಯ ಸ್ಥಾನಕ್ಕೆ ಪರಿಗಣಿಸಬೇಕು ಎಂಬ ಬೇಡಿಕೆ ಸಹಾ ಇಟ್ಟಿರುವ ಮಾನ್ಯ ಸಂಸದರು ತಣ್ಣಗಾದರಲ್ಲ ಅಷ್ಟೇ ಸಾಕು!

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮಕ್ಕಳನ್ನು ಚುನಾವಣಾ ಪ್ರಚಾರಕ್ಕೆ ಬಳಸಿಕೊಳ್ಳಬೇಡಿ


ಮಾನ್ಯರೆ,

ಎಲ್ಲೆಲ್ಲೂ ಚುನಾವಣೆ ಪ್ರಚಾರದ ಅಬ್ಬರ ಜೋರಾಗೇ ಇದೆ.ರೇಡಿಯೋ, ದೂರದರ್ಶನ ಹಾಗೂ ಪತ್ರಿಕೆಯಲ್ಲಿ ಸಾರ್ವಜನಿಕರಿಗೆ ಮತದಾನದ ಮಹತ್ವ ತಿಳಿಸುತ್ತಿದ್ದಾರೆ.ಈ ಕಾರ್ಯ ಶ್ಲಾಘನೀಯ. ಆದರೆ, ಈಗ ಶಾಲೆಗಳಿಗೆಲ್ಲಾ ಪರೀಕ್ಷೆ ಮುಗಿದು ರಜಾ ಪ್ರಾರಂಭವಾಗಿದೆ.ಈ ಚುನಾವಣೆಯ ಸಂದರ್ಭದಲ್ಲಿ ಮಕ್ಕಳನ್ನು ಪ್ರಚಾರಕ್ಕೆ ಬಳಸಿಕೊಳ್ಳುತ್ತಿದ್ದಾರೆ.ಅರಿಯದ ಮಕ್ಕಳು ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಾಡು ಹೇಳುವ ಮೂಲಕ ಡ್ಯಾನ್ಸ್ ಹಾಗೂ ಭಾಷಣದ ಮೂಲಕ ಚುನಾವಣೆ ಪ್ರಚಾರಕ್ಕೆ ಬಳಸಿಕೊಳ್ಳುತ್ತಿದ್ದಾರೆ.

ಇದೂ ಕೂಡ ಕಾನೂನಿನ ಪ್ರಕಾರ ಅಪರಾಧವಾಗುತ್ತದೆ. ಬಳಸಿಕೊಂಡವರಿಗೂ ಮಕ್ಕಳನ್ನು ಕಳುಹಿಸಿದ ಪೋಷಕರಿಗೂ ಕಾನೂನಿನ ಪ್ರಕಾರ ಶಿಕ್ಷೆ ವಿಧಿಸುತ್ತಾರೆ. ಮಕ್ಕಳಲ್ಲಿ ಮತದಾನದ ಅರಿವು ಮೂಡಿಸಿ ಪ್ರಜ್ಞಾವಂತರನ್ನಾಗಿ ಮಾಡಿ.ಈ ಬಿಸಿಲಿನಲ್ಲಿ ಯಾವುದೇ ಅಭ್ಯರ್ಥಿಯ ಪರವಾಗಿ ಚುನಾವಣಾ ಪ್ರಚಾರಕ್ಕಾಗಿ ಮಕ್ಕಳನ್ನು ಬಳಸಿ ಕೊಳ್ಳಬೇಡಿ ಕಾನೂನಿನ ಬಗ್ಗೆ ಅರಿವಿರಲಿ.

–ಎಂ.ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಡಿವಿಜಿ ಮಂಕುತಿಮ್ಮನ ಕಗ್ಗ ; ಜೀವನ ದಾರಿದೀಪ



ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಸ್ಥಾಯಿಯಾಗಿ ಉಳಿಯುವ ಸಾಹಿತ್ಯವನ್ನು ರಚಿಸಿದವರು ಡಾ. ಡಿ.ವಿ. ಗುಂಡಪ್ಪ ಅವರು. ಅವರು ತಮ್ಮ ಬರವಣಿಗೆಯಲ್ಲಿ ರಾಜನೀತಿ, ಪ್ರಜಾಪ್ರಭುತ್ವ, ತತ್ವಜ್ಞಾನ, ಚರಿತ್ರೆ, ಸಾರ್ವಜನಿಕ ಜೀವನ ಮುಂತಾದ ಹಲವಾರು ವಿಷಯಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಒಟ್ಟು 66 ಕನ್ನಡ ಕೃತಿಗಳನ್ನು ರಚಿಸಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಭೂಷಣ, ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್, ಇನ್ನೂ ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ. 1988ರಲ್ಲಿ ಡಿ.ವಿ.ಜಿ ಅವರ ನೆನಪಿಗಾಗಿ ಭಾರತೀಯ ಅಂಚೆ ಸೇವೆಯು ಅಂಚೆ ಚೀಟಿ ಹೊರಡಿಸಿರುವುದು ಸಂತಸದ ಸಂಗತಿ.

ಅವರ 'ಮಂಕುತಿಮ್ಮನ ಕಗ್ಗ' ಆಧುನಿಕ ಭಗವದ್ಗೀತೆ ಇದ್ದಂತೆ. ಕಗ್ಗದ ವ್ಯಾಪ್ತಿ ವಿಶಾಲವಾದುದ್ದು. ನಮ್ಮ ಕೀಳರಿಮೆ, ಅಹಂಕಾರವನ್ನು ಕಗ್ಗ ತೊಡೆದು ಹಾಕುತ್ತದೆ. ನಿತ್ಯ ಜೀವನದ ಹಲವಾರು ಪ್ರಸಂಗಗಳು ಕಗ್ಗದಲ್ಲಿ ಕಂಡು ಬರುತ್ತದೆ. ಈ ಕೃತಿ ಜೀವನಕ್ಕೆ ಭರವಸೆಯನ್ನು ನೀಡುತ್ತದೆ. ಬದುಕುವ ಮಾರ್ಗವನ್ನು ಕಲಿಸಿಕೊಡುತ್ತದೆ. ಸಕಾರಾತ್ಮಕವಾಗಿ ಚಿಂತಿಸುವಂತೆ ಮಾಡುತ್ತದೆ. ಸಂಕಟದಲ್ಲಿದ್ದಾಗ ಮನಸ್ಸಿಗೆ ಧೈರ್ಯವನ್ನು ನೀಡುತ್ತದೆ. ಮಂಕುತಿಮ್ಮನ ಕಗ್ಗ ಒಟ್ಟು 945 ಪದ್ಯಗಳಿರುವ ಕೃತಿ. ಹಲವು ಕಗ್ಗಗಳು ಜೀವನಕ್ಕೆ ಹತ್ತಿರವಾದವು.

ಅಂಜದೆ ಹೊರಡು

ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು।
ದೊರೆತುದ ಪ್ರಸಾದವೆಂದುಣ್ಣು ಗೊಣಗಿಡದೆ॥
ಧುರಸು ಲೋಕದ ಭರವ ಪರಮಾರ್ಥವನು ಬಿಡದೆ।
ಹೊರಡು ಕರೆ ಬರಲ್ ಅಳದೆ – ಮಂಕುತಿಮ್ಮ

ಯಾವ ಕೆಲಸವೂ ಚಿಕ್ಕದಲ್ಲ, ಯಾವ ಕೆಲಸವೂ ದೊಡ್ಡದಲ್ಲ. ಪ್ರತಿಯೊಂದು ಉದ್ಯೋಗಕ್ಕೂ ಒಂದು ಮೌಲ್ಯವಿದೆ. ರೈತ, ಯೋಧ, ವೈದ್ಯ, ಶಿಕ್ಷಕ, ಬಡಗಿ, ಕಂಬಾರ, ಕುಮ್ಮಾರ, ಅಕ್ಕಸಾಲಿಗ, ದರ್ಜಿ ಹೀಗೆ ಹತ್ತು ಹಲವಾರು ಉದ್ಯೋಗಗಳು ನಮ್ಮ ಸಮಾಜಕ್ಕೆ ಬೇಕು. ನಮಗೆ ದೊರೆತಿರುವ ಕೆಲಸ ಸಣ್ಣದಾದರೂ ಸರಿ, ಮನವಿಟ್ಟು ಮಾಡಬೇಕು. ದೊರೆತುದನ್ನು ಗೊಣಗದೇ ಪ್ರಸಾದವೆಂದು ಸ್ವೀಕರಿಸಿದಾಗ ಮಾತ್ರ ಕಾಯಕಕ್ಕೆ ಗೌರವ ಸಲ್ಲಿಸಿದಂತಾಗುತ್ತದೆ.

ಕಾಯಕ ನಿಷ್ಠೆ ಬದುಕನ್ನು ಸಮತೋಲನದಲ್ಲಿ ಇರಿಸುತ್ತದೆ. ಕಾಯಕದಲ್ಲಿ ಇರುವವರಿಗೆ ತಪ್ಪು ಕಾರ್ಯಗಳನ್ನು ಮಾಡಲು ಸಮಯವೇ ಇರುವುದಿಲ್ಲ. ಮನುಷ್ಯ ಹುಟ್ಟಿನಿಂದ ಸಾಯುವವರೆಗೂ ವಿವಿಧ ಕಾಯಕಗಳನ್ನು ಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಾನೆ. ಹಿಂದೆ ಜನರು ಅವರವರ ಕಾಯಕವನ್ನು ಅವರವರು ಮಾಡುತ್ತಿದ್ದರು. ಇಂದಿನಂತೆ ಸ್ಪರ್ಧೆ ಇರಲಿಲ್ಲ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಹೇಗೆ ಬದುಕುತ್ತಿದ್ದೇವೆ, ನಮ್ಮ ಕಾಯಕದಲ್ಲಿ ನೆಮ್ಮದಿ ಇದೆಯೇ? ಎಂಬುದನ್ನು ನಮ್ಮಲ್ಲಿ ನಾವು ಪ್ರಶ್ನಿಸಿಕೊಂಡು ಕಾಯಕವನ್ನು ಮುಂದುವರಿಸುತ್ತಿರಬೇಕು. ಪರಮ ಅರ್ಥವನ್ನು ಬಿಡದೇ ಇಹದ ಸೇವೆಯನ್ನು ಮಾಡಬೇಕು. ವಿಧಿಯ ಕರೆ ಬಂದಾಗ ಅಂಜದೇ, ಅಳುಕದೇ ಹೋಗಿ ಬಿಡಬೇಕು.

ಕಾಲ

ಕಾಳನುದಿಯದಿ ಬಿತ್ತೆ ಸಂಜೆಗದು ಪೈರಹುದೆ?।
ಪಾಲುಂಟು ಕಾಲಂಗೆ ನಮ್ಮ ಕೃಷಿಗಳಲಿ ॥
ವೇಳೆ ಗಡು ಮರೆತಾತುರ ದಿನ್ ಅಡುಗೆ ಪಕ್ಕಹುದೆ?
ತಾಳುಮೆಯೇ ಪರಿಪಾಕ– ಮಂಕುತಿಮ್ಮ

ಮಾನವನಿಗೆ ತಾಳ್ಮೆಯ ಅವಶ್ಯಕತೆ ಎಷ್ಟಿದೆ ಎಂಬುದನ್ನು ಡಿ.ವಿ.ಜಿ ತಿಳಿಸಿಕೊಟ್ಟಿದ್ದಾರೆ. ಬೆಳಿಗ್ಗೆ ಕಾಳು ಬಿತ್ತಿದರೆ ಸಂಜೆಹದು ಪೈರಾಗುವುದೇ? ಪ್ರತಿಯೊಂದು ಕೆಲಸದ ಫಲವೂ ತನ್ನದೇ ಆದ ಸಮಯ ತೆಗೆದುಕೊಳ್ಳುತ್ತದೆ. ವೇಳೆಯಾಗದೇ ಅಡುಗೆಯಾಗದು. ಆದ್ದರಿಂದ ಪ್ರತಿಯೊಂದಕ್ಕೂ ಕಾಯಬೇಕು, ಕಾಯುವ ತಾಳ್ಮೆ ಬೇಕು. ಈ ಕಗ್ಗವು 'ತಾಳಿದವನು ಬಾಳಿಯಾನು' ಎನ್ನುವ ಗಾದೆಯನ್ನು ನೆನಪಿಗೆ ತರುತ್ತದೆ.

ದುಡುಕು ನಿರ್ಧಾರಗಳು ಎಷ್ಟೋ ಜನರ ಭವಿಷ್ಯವನ್ನು ಸರ್ವನಾಶ ಮಾಡಿದೆ. ಆತುರದ ನಡೆಗಳು ಅಪಘಾತಕ್ಕೀಡು ಮಾಡಿವೆ. ಆದ್ದರಿಂದ ನಿಧಾನವೇ ಪ್ರಧಾನ ಎಂಬುದನ್ನು ಅರಿತುಕೊಳ್ಳಬೇಕಿದೆ. ತಾಳ್ಮೆಯ ಮೂಲಕ ನಾವು ಕಠಿಣ ಪರಿಸ್ಥಿತಿಗಳನ್ನು ಎದುರಿಸಬಹುದು. ತಾಳ್ಮೆ ಕಳೆದುಕೊಂಡಾಗ ನಮ್ಮ ವರ್ತನೆಯ ಅರಿವು ನಮಗಿರುವುದಿಲ್ಲ.

ಜೀವನ ತತ್ವ

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ॥
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು – ಮಂಕುತಿಮ್ಮ

ಮಾನವ ಜನ್ಮ ದೊಡ್ಡದು, ಇದ ಹಾಳು ಮಾಡಿಕೊಳ್ಳಬೇಡಿರೋ ಹುಚ್ಚಪ್ಪಗಳಿರಾ ಎಂದು ಪುರಂದರದಾಸರು ಹೇಳಿದ್ದಾರೆ. ಬ್ರಹ್ಮನು ಕ್ರಿಮಿ, ಕೀಟ, ಮೃಗ, ಪಕ್ಷಿ, ವೃಕ್ಷಗಳನ್ನು ಸೃಷ್ಟಿಸಿದ ಮೇಲೆ ಮಾನವನನ್ನು ಸೃಷ್ಟಿಸಿದನಂತೆ. ಎಷ್ಟೋ ಜನ್ಮಗಳು ಕಳೆದ ನಂತರ ಮಾನವ ಜನ್ಮ ದೊರೆತಿರುತ್ತದೆ. ನಮ್ಮ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕಿದೆ.

ಬೆಟ್ಟದಡಿ ಹುಲ್ಲಾಗಬೇಕಿದೆ. ಗಾಳಿ ಬಂದಾಗ ದೊಡ್ಡ ದೊಡ್ಡ ಮರಗಳು ಬೀಳುತ್ತವೆ. ಆದರೆ ಎಂಥ ಪ್ರಬಲವಾದ ಚಂಡಮಾರುತ ಬಂದರೂ ಹುಲ್ಲು ಏನೂ ಆಗುವುದಿಲ್ಲ. ನಮಗಿಂತ ಬಲಿಷ್ಠರ ಮುಂದೆ ಹುಲ್ಲಿನಂತೆ ಬಾಗುವ ವಿನಮ್ರತೆ ಇರದಿದ್ದರೆ ಉಳಿಗಾಲ ಸಾಧ್ಯವಿಲ್ಲ. ಮನೆಗೆ ಸುವಾಸನೆಯನ್ನು ನೀಡುವ ಮಲ್ಲಿಗೆಯ ಹೂವಿನಂತಾಗಬೇಕಿದೆ. ಕಷ್ಟಗಳು ಸುರಿದರೆ ಕಲ್ಲಾಗಬೇಕಿದೆ. ಹೀಗೆ ನಾಲ್ಕಾರು ಜನಗಳಿಗೆ ನಮ್ಮಿಂದ ಉಪಯೋಗವಾಗಬೇಕು. ಭಗವಂತ ನೀಡಿದ ಈ ಸುಂದರ ಜೀವನವನ್ನು ಸ್ನೇಹ, ಪ್ರೀತಿಗಳಿಂದ ಮುನ್ನಡೆಸಬೇಕು. ಮನುಷ್ಯ ಸ್ವಾರ್ಥಕ್ಕೆ ಪ್ರಾಮುಖ್ಯತೆ ನೀಡದೇ ಎಲ್ಲರೊಳಗೊಂದಾಗಿ ತನ್ನ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕು.

ವಿಧಿಯ ಕೈಚಿತ್ರ

ಹೊಟ್ಟೆಯೊಂದರ ರಗಳೆ ಸಾಲದಿಯೇನೋ ವಿಧಿ
ಹೊಟ್ಟೆ ಕಿಚ್ಚಿನ ಕಿಡಿಯ ನೆಟ್ಟಿಹನು ನರನೊಳ್॥
ಹೊಟ್ಟೆ ತುಂಬಿದ ತೋಳ ಮಲಗೀತು। ನೀಂ ಪೆರರ
ದಿಟ್ಟಿಸುತ ಕರುಬುವೆಯೋ – ಮಂಕುತಿಮ್ಮ

ಇಂದಿನ ಪ್ರಸ್ತುತ ಸಮಾಜಕ್ಕೆ ಕೈಗನ್ನಡಿ ಹಿಡಿದಂತಿದೆ ಈ ಕಗ್ಗ. ಮಾನವನ ಹೊಟ್ಟೆಯೊಳಗೆ ಹಸಿವೊಂದೇ ಸಾಲದೆಂಬಂತೆ, ಭಗವಂತನು ಹೊಟ್ಟೆಯ ಕಿಚ್ಚನ್ನು ಇರಿಸಿರುವನು. ಹೊಟ್ಟೆ ತುಂಬಿದ ತೋಳ ಮಲಗೀತು, ಮನುಷ್ಯ ಹಾಗಲ್ಲ. ಪರರ ಎಲ್ಲಾ ಸಮಾಚಾರವೂ ಬೇಕು. ಪ್ರತಿ ಬಾರಿಯೂ ತನ್ನೊಂದಿಗೆ ಪರರನ್ನು ಹೋಲಿಸಿಕೊಂಡು ಕರುಬುತ್ತಿರುತ್ತಾನೆ. ಯಾರ ಬಳಿಯೋ ಬಂಗಲೆ ಇದೆ, ತನಗೂ ಬೇಕು. ಐಷಾರಾಮಿ ಕಾರು, ಬ್ರ್ಯಾಂಡೆಡ್ ಬಟ್ಟೆ, ಬ್ರಾಂಡೆಡ್ ಶೂ... ಹೀಗೆ ಬೇಕು ಅನ್ನುವ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಆದಾಯಕ್ಕಿಂತಲೂ ಹೆಚ್ಚು ಸಾಲ ಮಾಡಿ ಸಾಲದ ಶೂಲಕ್ಕೆ ಸಿಲುಕಿಕೊಳ್ಳುತ್ತಾನೆ.

'ಸಾಲವನು ಕೊಂಬಾಗ ಹಾಲೋಗರುಂಡಂತೆ, ಸಾಲಿಗರು ಕೊಂಡು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ' ಎಂದು ಸರ್ವಜ್ಞ ಹೇಳಿದ್ದಾನೆ. ಪ್ರತಿಯೊಬ್ಬರಿಗೂ ತಮ್ಮದೇ ಆದ ಕಷ್ಟ ನಷ್ಟಗಳಿರುತ್ತವೆ. ಅವರು ಸುಖವಾಗಿದ್ದಾರೆ, ಇವರು ಸುಖವಾಗಿದ್ದಾರೆ ಎಂದುಕೊಂಡು ಕರುಬುತ್ತಿರುತ್ತೇವೆ. ಸುಖ ಎನ್ನುವುದು ಮನಸ್ಸಿನ ಸ್ಥಿತಿ ಎಂಬುದು ನಮ್ಮ ಹಿರಿಯರಿಗೆ ಗೊತ್ತಿತ್ತು. ಹಾಗಾಗಿ ಅವರು ಕೇವಲ ಐಷಾರಾಮಿ ವಸ್ತುಗಳ ಹಿಂದೆ ಓಡುವ ಬದಲು ನೆಮ್ಮದಿಯ ಹಿಂದೆ ಹೋಗುತ್ತಿದ್ದರು. ಕುವೆಂಪು ಅವರು 'ರಷ್ಯಾ ದೇಶದ ಸ್ಟಾಲಿನ್ ಭೇಟಿಗಿಂತಲೂ ಒಂದು ಹನಿ ಇಬ್ಬನಿಯನ್ನು ನೋಡುವುದು ನನಗೆ ಖುಷಿ ಕೊಡುತ್ತದೆ' ಎಂದು ತಮ್ಮ ಒಂದು ಕವನದಲ್ಲಿ ಹೇಳುತ್ತಾರೆ. ಇಲ್ಲದ ಚಿಂತನೆಗಳನ್ನು ಮಾಡುತ್ತಾ ಕೊರಗಿ ಹೈರಾಣಾಗದೇ, ವಾಸ್ತವಿಕ ಪ್ರಪಂಚದಲ್ಲಿ ನೆಮ್ಮದಿಯಾಗಿ, ಸಂತೋಷದಿಂದ ಬದುಕಿದರೆ ಜೀವನ ಸಾರ್ಥಕವಾಗುತ್ತದೆ.

ತುಟಿಗಳ ಹೊಲಿ

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ।
ಫಲ ಮಾಗುವುದು ತುತ್ತೂರಿ ದನಿಯಿಲ್ಲ ॥
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ।
ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ

ಭೂಮಿಯಿಂದ ಮೊಳಕೆ ಚಿಗುರುವಾಗ ಯಾವ ರೀತಿಯ ತಮ್ಮಟೆ ಶಬ್ದದ ಸಪ್ಪಳವಿಲ್ಲ. ಹಣ್ಣು ಮಾಗುವಾಗ ತುತ್ತೂರಿ ಧ್ವನಿ ಮೊಳಗುವುದಿಲ್ಲ. ಬೆಳಕನ್ನು ನೀಡುವ ಸೂರ್ಯ ಚಂದ್ರರದು ಯಾವುದೇ ಸಪ್ಪಳವಿಲ್ಲ. ಆದರೆ ಪರರಿಗೆ ಸ್ವಲ್ಪ ಸಹಾಯ ಮಾಡಿದರೂ ಎಲ್ಲರೆದುರಿಗೆ ಬಡಾಯಿ ಕೊಚ್ಚಿಕೊಳ್ಳುತ್ತೇವೆ. ಸ್ವ ಪ್ರಶಂಸೆ ಮಾಡಿಕೊಳ್ಳುವುದು ಅನೇಕರಿಗೆ ರಕ್ತಗತವಾಗಿ ಬಂದಿರುವ ಗುಣ. ಬಹಿರಂಗದಿಂದ ಪರಿಶುದ್ಧ ತಂಗಾಳಿ ಬರದಂತೆ ಕಿಟಕಿ ದ್ವಾರಗಳನ್ನು ಮುಚ್ಚಿ ಗರ್ವವೆಂಬ ದುರ್ಗದಲ್ಲಿ ಉಸಿರುಗಟ್ಟಿ ಚಡಪಡಿಸುವ ಹೀನ ಸ್ಥಿತಿಯನ್ನು ಅಹಂಕಾರಿಯು ನಿರ್ಮಾಣ ಮಾಡಿಕೊಳ್ಳುತ್ತಾನೆ.

ನಾನು, ನನ್ನದು ಎಂಬ ದುರಭಿಮಾನಕ್ಕೆ ಕಾರಣ ಅಹಂಕಾರ. ಅಹಂಕಾರವೆಂಬುದು ಮದವೇರಿದ ಆನೆಯ ಹಾಗೆ. ಬಲಗೈಲಿ ಕೊಟ್ಟಿದ್ದು ಎಡಗೈಗೆ ಗೊತ್ತಾಗಬಾರದು ಎನ್ನುತ್ತಾರೆ ದೊಡ್ಡವರು. ಆದರೆ ಬಡವರಿಗೆ, ಅನಾಥರಿಗೆ ಸ್ವಲ್ಪ ದಾನ ಮಾಡಿದ್ದನ್ನು ಇಂದು ಸ್ಟೇಟಸ್‌ಗಳಲ್ಲಿ ಹಾಕಿಕೊಳ್ಳುವ ಜನರನ್ನು ನಾವು ನೋಡಿದ್ದೇವೆ. ನಾವು ಮತ್ತೊಬ್ಬರಿಗೆ ಮಾಡಿದ ಸಹಾಯವನ್ನು ಜಂಭದಿಂದ ಹೇಳಿಕೊಳ್ಳುವುದು ಬೇಡ. ನೀನು ನಿನ್ನ ತುಟಿಗಳನ್ನು ಹೊಲಿದು ಕೊಂಡು ಸಹಾಯ ಮಾಡು ಎಂದು ಹೇಳಲಾಗಿದೆ. ಅಹಂಕಾರ ಒಂದು ಮನೋವಿಕಾರ ತಾಮಸಿಕ ಲಕ್ಷಣ. ಅಹಂಕಾರವನ್ನು ಬಿಟ್ಟ ವ್ಯಕ್ತಿ ಪರಿಪೂರ್ಣನಾಗುತ್ತಾನೆ. ಅಹಂಕಾರವನ್ನು ಗೆಲ್ಲದೇ ಹೋದರೆ ಎಷ್ಟೇ ಸಾಧಿಸಿದರೂ ಕ್ಷುಲ್ಲಕವಾಗುತ್ತದೆ. ಎಲ್ಲ ರೋಗಕ್ಕೂ ಮದ್ದುಂಟು, ಅಹಂಕಾರವೆಂಬ ಜಾಡ್ಯಕ್ಕೆ ಮದ್ದಿಲ್ಲ.

ಋಣಶೇಷ

ಅನ್ನವುಣ್ಣುವಂದು ಕೇಳ್! ಅದನ್ನು ಬೇಯಿಸಿದ ನೀರ್।
ನಿನ್ನ ದುಡಿತದ ಬೆಮರೊ, ಪರರ ಕಣ್ಣೀರೋ॥
ತಿನ್ನು ನೀಂ ಜಗಕೆ ತಿನಲಿತ್ತನಿತ; ಮಿಕ್ಕೂಟ ।
ಜೀರ್ಣಿಸದ ಋಣಶೇಷ – ಮಂಕುತಿಮ್ಮ

ಮೋಸ ಮಾಡಿ ಜೀವನದಲ್ಲಿ ನೆಮ್ಮದಿಯಾಗಿರುವವರು ಯಾರೂ ಇಲ್ಲ. ಆದರೆ ಮೋಸ ಹೋಗಿ ಜೀವನದಲ್ಲಿ ಗೆದ್ದು ನೆಮ್ಮದಿಯಾಗಿ ಇರುವವರು ಚರಿತ್ರೆ ಸೃಷ್ಟಿಸಿದ್ದಾರೆ. ನಾವು ಅನ್ನ ಉಣ್ಣುವಾಗ ಕೇಳಿಕೊಳ್ಳಬೇಕಂತೆ, ನಾವು ತಿನ್ನುತ್ತಿರುವ ಅನ್ನ ನಮ್ಮ ಶ್ರಮದ ದುಡಿಮೆಯ ಬೆವರೋ ಅಥವಾ ಬೇರೆಯವರ ಕಣ್ಣೀರೋ ಎಂದು. ನ್ಯಾಯವಾಗಿ ದುಡಿದಿದ್ದು ಮಾತ್ರ ಉಣ್ಣಲು ಸಾಧ್ಯವಾದೀತು. ಉಳಿದಿದ್ದು ಋಣಶೇಷ ಅಷ್ಟೆ.

ಮನುಷ್ಯ ಮನುಷ್ಯನಿಗೆ ಮೋಸ ಮಾಡಿ ಮರೆಯಬಹುದು. ಆದರೆ ಮೋಸ ಮಾಡಿದವನಿಗೆ ಭಗವಂತ ಸರಿಯಾದ ಸಮಯ ನೋಡಿ ಪೆಟ್ಟು ಕೊಡುತ್ತಾನೆ. 'ಮಾಡಿದ್ದುಣ್ಣೋ ಮಹರಾಯ' ಎನ್ನುವ ಗಾದೆ ಇಲ್ಲಿ ಸದಾ ಪ್ರಸ್ತುತ. ದೇವರು ಕೊಡುವ ಪೆಟ್ಟು ಸಾಯುವವರೆಗೂ ನರಳುವಂತೆ ಮಾಡುತ್ತದೆ.

ವಿಧಿ ಕರ್ಮ

ತೋಯಿಸುತ ಬೇಯಿಸುತ ಹೆಚ್ಚುತ್ತ ಕೊಚ್ಚುತ್ತ।
ಕಾಯಿಸುತ ಕರಿಯುತ್ತ ಹುರಿಯುತ್ತ ಸುಡುತ॥
ಈಯುವನಿಯೊಳೆಮ್ಮಯ ಬಾಳನಿಟ್ಟು ವಿಧಿ ।
ಬಾಯ ಚಪ್ಪರಿಸುವನು – ಮಂಕುತಿಮ್ಮ

ಈ ಭೂಮಿಯಲ್ಲಿ ಜನಿಸಿದ ಮೇಲೆ ನಾವೆಲ್ಲರೂ ವಿಧಿಯ ಕೈಗೊಂಬೆಗಳು. ವಿಧಿ ಭೂಮಿಯೆಂಬ ಒಲೆಯಲ್ಲಿ ನಮ್ಮ ಬಾಳನ್ನು ಇಟ್ಟು ನೆನೆಸುತ್ತಾ, ಬೇಯಿಸುತ್ತಾ, ಕೊಯ್ಯುತ್ತಾ, ಕೊಚ್ಚುತ್ತಾ, ಕಾಯಿಸುತ್ತಾ, ಕರಿಯುತ್ತಾ, ಕರಿಯುತ್ತಾ, ಹುರಿದು ಸುಡುತ್ತಾ ಅಡುಗೆ ಮಾಡಿ ಬಾಯಿ ಚಪ್ಪರಿಸುತ್ತಾನೆ. ಕರ್ಮಗಳು ವಾಪಸ್ಸು ಬರುತ್ತವೆ. ಹಿಂದಿನ ಜನ್ಮದ ಪಾಪ ಕರ್ಮಗಳೊಂದಿಗೆ ಇಂದಿನ ಜನ್ಮದ ಪಾಪಕರ್ಮಗಳೂ ಸೇರಿ ಭೂಮಿಯ ಮೇಲೆ ನರಕವನ್ನು ಸೃಷ್ಟಿ ಮಾಡುತ್ತವೆ.

'ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನೋ ದೇವಾ, ಅತಿಥಿಗಳಿಗೆ ಅನ್ನ ಕೊಟ್ಟವನಲ್ಲ, ಪರ ಸತಿಯರ ಸಂಗ ಬಿಟ್ಟವನಲ್ಲ, ಸಾಮಾನ್ಯವಲ್ಲಿದು ಬ್ರಹ್ಮ ಬರೆದ ಬರಹ, ನೇಮದಿಂದಲಿ ಎನ್ನ ಹಣೆಯಲ್ಲಿ ಬರೆದುದಕೆ' ಎಂಬ ಪುರಂದರ ದಾಸರ ರಚನೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆದ್ದರಿಂದ ಒಳ್ಳೆಯದನ್ನು ಮಾಡಿದರೆ ಒಳ್ಳೆಯದು ಕೆಟ್ಟದನ್ನು ಮಾಡಿದರೆ ಕೆಟ್ಟದ್ದು ಕಟ್ಟಿಟ್ಟ ಬುತ್ತಿ.


ಲೆಕ್ಕಾಚಾರ

ಒಂದಗಳು ಹೆಚ್ಚಿರದು, ಒಂದಗಳು ಕೊನೆಯಿರದು।
ತಿಂದು ನಿನ್ನನ್ನ ಋಣ ತೀರುತಲೆ ಪಯಣ॥
ಹಿಂದಾಗಲೊಂದು ಚಣ, ಮುಂದುಕುಂ ಕಾದಿರದು।
ಸಂದ ಲೆಕ್ಕವದೆಲ್ಲ – ಮಂಕುತಿಮ್ಮ

ಭೂಮಿಯ ಮೇಲೆ ಹುಟ್ಟಿದ ಮೇಲೆ ಸಾವು ಖಚಿತ. ಭೂಮಿಯ ಋಣ ಮುಗಿದಾಕ್ಷಣ ಒಂದು ಅಗಳು ಅನ್ನ ಹೆಚ್ಚು ತಿನ್ನಲಾಗುವುದಿಲ್ಲ, ಒಂದು ಅಗಳು ಅನ್ನ ಕಡಿಮೆಯಾಗುವುದಿಲ್ಲ. ನಿಗದಿಯಾಗಿರುವಷ್ಟು ಉಂಡ ನಂತರ ಇಹಲೋಕದಿಂದ ಹೊರಡಬೇಕು. ಒಂದು ಕ್ಷಣವೂ ಹಿಂದು ಮುಂದಾಗುವುದಿಲ್ಲ. ಲೆಕ್ಕಾಚಾರ ಮುಗಿದೊಡನೆ ಮರಣ ನಿಶ್ಚಿತ.

ಸಾವು ಯಾರ ಅಣತಿಗೂ ಕಾಯುವುದಿಲ್ಲ. ಮೊದಲೇ ನಿರ್ಧರಿಸಲ್ಪಟ್ಟಿರುತ್ತದೆ. ನಾವು ನಾಳೆಯೇ ಸಾಯಬಹುದು, ನಾಳೆ ಏಕೆ, ಈ ಕ್ಷಣವೇ ಸಾಯಬಹುದು. ಇದು ಸಹಜ ಪ್ರಕ್ರಿಯೆ. ನಾವು ಸಾವನ್ನು ಅರ್ಥ ಮಾಡಿಕೊಳ್ಳದಿದ್ದರೆ ಎಂದಿಗೂ ಜೀವನವನ್ನು ತಿಳಿಯಲು ಸಾಧ್ಯವಿಲ್ಲ. ಜೀವನ ಮತ್ತು ಸಾವು ಉಸಿರಾಟದಂತೆ. ನಾವು ಸಾಯುತ್ತೇವೆ ಎಂಬುದನ್ನು ತಿಳಿದುಕೊಂಡಾಗ ಜೀವನವನ್ನು ಗೌರವಿಸುತ್ತೇವೆ.

ಡಾ. ಡಿ.ವಿ. ಗುಂಡಪ್ಪ ಅವರು ಮಂಕುತಿಮ್ಮನ ಕಗ್ಗವನ್ನು ಬರೆದದ್ದು 1943ರಲ್ಲಿ. ಇದು ಕನ್ನಡ ಸಾಹಿತ್ಯದ ಮೇರು ಕೃತಿ. ಕಗ್ಗದ ಕವಿತೆಗಳು ಗಹನವಾದುದಲ್ಲದೇ ಕಾವ್ಯಾತ್ಮಕವಾಗಿದೆ. ಅವುಗಳನ್ನು ಹಾಡಬಹುದು. ಜೀವನದ ಬಗ್ಗೆ ಅನೇಕ ಪ್ರಶ್ನೆಗಳನ್ನು ಶೋಧಿಸುತ್ತದೆ. ಸಂಕೀರ್ಣ ಜಗತ್ತಿನಲ್ಲಿ ಸಮತೋಲಿತ ಜೀವನವನ್ನು ನಡೆಸಲು ನಮಗೆ ಸಲಹೆ ನೀಡುತ್ತದೆ. ಇದರಿಂದ ಮನಸ್ಸು ಪರಿಶುದ್ಧವಾಗುತ್ತದೆ. ಸದಾಚಾರಗಳು ಮನದೊಳಗೆ ಸುಳಿದಾಡಿ ಜೀವನವನ್ನು ಹಗುರಗೊಳಿಸುತ್ತದೆ, ಪಾವನಗೊಳಿಸುತ್ತದೆ.



–ಎಂ.ಎಸ್. ಲಕ್ಷ್ಮಿ
ಕನ್ನಡ ಉಪನ್ಯಾಸಕರು,
ಕ್ರೈಸ್ಟ್ ಕಾಲೇಜು, ಮೈಸೂರು.
ಮೊ.: 9663110465

ರಾಜ್ಯದಲ್ಲಿ ಬಿಸಿಲಿನ ಝುಳಕ್ಕೆ 2 ಸಾವು, 521 ಹೀಟ್ ಸ್ಟ್ರೋಕ್ ಪಕರಣ ದಾಖಲು



ಬೆಂಗಳೂರು, ಏ.5– ಕರ್ನಾಟಕದ ಅನೇಕ ಭಾಗಗಳಲ್ಲಿ ತಾಪಮಾನವು ದಿನದಿಂದ ದಿನಕ್ಕೆ ಏರಿಕೆಯಾಗುತ್ತಲೇ ಇದೆ. ಬಿಸಿಲ ಝುಳಕ್ಕೆ ಜನ ತತ್ತರಿಸಿ ಹೋಗಿದ್ದು, ಬಿಸಿಲಿನ ಬೇಗೆಗೆ ಹೀಟ್ ಸ್ಟ್ರೋಕ್ ಆಗಿರುವ 521 ಪ್ರಕರಣಗಳನ್ನು ಅಧಿಕಾರಿಗಳು ವರದಿ ಮಾಡಿದ್ದಾರೆ. ಮಾರ್ಚ್‌ನಿಂದ ಈವರೆಗೆ ರಾಜ್ಯದಲ್ಲಿ ಎರಡು ಸಾವಿನ ಪ್ರಕರಣಗಳು ದಾಖಲಾಗಿದೆ.

ಮಾರ್ಚ್ 1 ರಿಂದ ಏಪ್ರಿಲ್ 3ರ ಅವಧಿಯಲ್ಲಿ ಬಾಗಲಕೋಟೆ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ತಲಾ ಒಂದೊಂದು ಸಾವು ಬಿಸಿಲಿನ ತಾಪದಿಂದ ಆಗಿದೆ ಎಂದು ವರದಿ ತಿಳಿಸಿದೆ. ಚಿಕ್ಕಬಳ್ಳಾಪುರ, ಬಾಗಲಕೋಟೆ, ಚಿತ್ರದುರ್ಗ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಬಿಸಿಗಾಳಿ ತಡೆಯಲಾಗದೆ ಹೀಟ್ ಸ್ಟ್ರೋಕ್ ಪ್ರಕರಣಗಳು ಕಂಡುಬಂದಿದೆ. ಕ್ರಮವಾಗಿ 102, 69, 56 ಮತ್ತು 54 ಹೀಟ್ ಸ್ಟ್ರೋಕ್ ಪ್ರಕರಣಗಳು ವರದಿಯಾಗಿವೆ ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ತನ್ನ ದೈನಂದಿನ ಹವಾಮಾನ ವರದಿಯಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಸರಾಸರಿ ಗರಿಷ್ಠ ತಾಪಮಾನ 42.7 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ ಎಂದು ತಿಳಿಸಿದೆ. ರಾಜ್ಯದ ಭೌಗೋಳಿಕ ಪ್ರದೇಶದ ಶೇಕಡಾ 75 ರಷ್ಟು ಪ್ರದೇಶಗಳಲ್ಲಿ ಗರಿಷ್ಠ ತಾಪಮಾನವು 36 ರಿಂದ 42 ಡಿಗ್ರಿ ಸೆಲ್ಸಿಯಸ್ ನಷ್ಟು ದಾಖಲಾಗಿದೆ. ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ 43 ರಿಂದ 45 ಡಿಗ್ರಿ ಸೆಲ್ಸಿಯಸ್ ನಷ್ಟು ಗರಿಷ್ಠ ತಾಪಮಾನ ದಾಖಲಾಗಿದೆ.

ರಾಜ್ಯದ 12 ಕಡೆಗಳಲ್ಲಿ ಗುರುವಾರ ಗರಿಷ್ಠ ತಾಪಮಾನ ದಾಖಲಾಗಿದೆ. ಹವಾಮಾನ ಮುನ್ಸೂಚನೆ ಪ್ರಕಾರ ಹೆಚ್ಚೂ ಕಡಿಮೆ ಜೂನ್‌ವರೆಗೂ ಇದೇ ತಾಪಮಾನ ಮುಂದುವರೆಯುವ ನಿರೀಕ್ಷೆಯಿದೆ. ಕೊಪ್ಪಳದಲ್ಲಿ 41.8, ಬಾಗಲಕೋಟೆ 41.1, ಬೀದರ್ 39.2, ಕಲಬುರಗಿಯಲ್ಲಿ 42.8, ಗದಗ 40.6, ವಿಜಯಪುರ 40, ಧಾರವಾಡ 39.8, ದಾವಣಗೆರೆ 40.5, ಹಾಸನ 37.4, ಮಂಡ್ಯ 38.2, ಮೈಸೂರು 37, ಬೆಂಗಳೂರು 37 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಇದರ ನಡುವೆ ಚಾಮರಾಜನಗರ, ಕೊಡಗು ಮತ್ತು ರಾಮನಗರ ಜಿಲ್ಲೆಗಳಲ್ಲಿ ಲಘು ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಸಂಸ್ಥೆಗಳು ನೀಡಿದ್ದು, ಬಾಗಲಕೋಟೆ, ಗದಗ, ಕಲಬುರಗಿ, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಎಲ್ಲೋ ಅಲರ್ಟ್ ಅನ್ನು ಸಹ ಘೋಷಿಸಿವೆ.

ಸೂರ್ಯನ ಶಾಖಕ್ಕೆ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಕೆಎಸ್‌ಡಿಎಂಎ) ವಿಶೇಷ ಸಲಹೆ ಸೂಚನೆಯನ್ನು ನೀಡಿದೆ. ಜನರು ಗರಿಷ್ಠ ತಾಪಮಾನದಲ್ಲಿ, ವಿಶೇಷವಾಗಿ ಮಧ್ಯಾಹ್ನ ಮತ್ತು 3 ಗಂಟೆಯ ನಡುವೆ ಮನೆಯೊಳಗೆ ಇರಬೇಕು ಎಂದು ಹೇಳಿದೆ. ಜನರು ತಿಳಿ ಬಣ್ಣದ ಹತ್ತಿ ಬಟ್ಟೆಗಳನ್ನು ಧರಿಸಬೇಕೆಂದು ಸಲಹೆ ನೀಡಿದೆ.

ಸನ್‌ಗ್ಲಾಸ್, ಛತ್ರಿ ಮತ್ತು ಟೋಪಿಗಳ ಬಳಕೆಯನ್ನು ಶಿಫಾರಸು ಮಾಡಿದೆ ಮತ್ತು ಜನರು ದೇಹವನ್ನು ತಂಪಾಗಿಡುವ ಪಾನೀಯಗಳನ್ನು ಸೇವಿಸಿ. ವೇಗವಾಗಿ ನಿರ್ಜಲೀಕರಣಗೊಳಿಸುವ ಕೆಫೀನ್, ಕಾರ್ಬೊನೇಟೆಡ್ ಮತ್ತು ಆಲ್ಕೊಹಾಲು ಪಾನೀಯಗಳನ್ನು ಸೇವಿಸದಿರುವುದು ಉತ್ತಮ ಎಂದು ಸಲಹೆ ನೀಡಿದೆ. ಏಕೆಂದರೆ ಬಿಸಿಲಿನ ತಾಪಕ್ಕೆ ಈ ಸಮಯದಲ್ಲಿ ತಲೆ ತಿರುಗುವುದು, ನಿರ್ಜಲೀಕರಣ, ನಿತ್ರಾಣವಾಗುವುದು ಅತೀ ಹೆಚ್ಚು ಅನಾರೋಗ್ಯವಾದರೆ ತಕ್ಷಣ ವೈದ್ಯರನ್ನು ಭೇಟಿ ಮಾಡಿ ಎಂದಿದೆ.

ಮೈಸೂರಲ್ಲಿ ಆತಂಕಕಾರಿ ಹಂತಕ್ಕೆ ಉಷ್ಣಾಂಶ

- ಶುಕ್ರವಾರ 39.2 ಡಿಗ್ರಿ ಸೆಲ್ಸಿಯಸ್ ದಾಖಲು
- ಮುಂದಿನ ಐದತ್ತು ದಿನದಲ್ಲಿ 40ರ ಗಡಿ ದಾಟುವ ಸಾಧ್ಯತೆ

ಬಾಪುಲಿಂಗರಾಜ್ ಅರಸ್

ಮೈಸೂರು, ಏ.5– ಬೇಸಿಗೆ ಬಿಸಿಲಿನ ಝುಳದಿಂದ ಮೈಸೂರು ಜನ ತತ್ತರಿಸಿದ್ದಾರೆ. ಬಿಸಿ ಗಾಳಿ, ಧಗೆಯಿಂದ ಜನರು ನಿತ್ರಾಣಗೊಳ್ಳುತ್ತಿದ್ದಾರೆ. ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಮೈಸೂರಿನಲ್ಲಿ ಮಿತಿ ಮೀರಿದ ಉಷ್ಣಾಂಶ 39.2° ಸೆಲ್ಸಿಯಸ್ ದಾಖಲಾಗಿದೆ. ಇಷ್ಟು ಪ್ರಮಾಣದ ಉಷ್ಣಾಂಶ ಮೈಸೂರಿನಲ್ಲಿ ಎಂದೂ ದಾಖಲಾಗಿಲ್ಲ. ಈ ಮೂಲಕ ಮೈಸೂರು ಉಷ್ಣಾಂಶ ಏರಿಕೆಯಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳನ್ನು ಸರಿಗಟ್ಟಿದೆ.

ಬಿಸಿಲ ಧಗೆಯಿಂದ ಪಾರಾಗಲು ಫ್ಯಾನ್ ಕೆಳಗೆ ಕುಳಿತರೆ ಬಿಸಿ ಗಾಳಿಯೇ ತೂರಿ ಬರುತ್ತದೆ. ಮೈಸೂರಿನಲ್ಲಿ ರಣ ಬಿಸಿಲು ಕಣ್ಣಿಗೆ ರಾಚುತ್ತಿದೆ. ಮೈಸೂರಿನಲ್ಲಿ ಕೆಲ ವರ್ಷದ ಹಿಂದೆ 38.5° ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಸಾಮಾನ್ಯವಾಗಿ ಇತ್ತೀಚಿನ ವರ್ಷಗಳಲ್ಲಿ ಬೇಸಿಗೆಯಲ್ಲಿ ಮೈಸೂರಿನ ಉಷ್ಣಾಂಶ 37 ಮೀರಿಲ್ಲ. ಆದರೆ ಈಗ ಮೈಸೂರು ಉಷ್ಣಾಂಶ ದಾಖಲೆ ಏರಿಕೆ ಕಂಡಿದೆ. ಕಳೆದ ನಾಲ್ಕು ದಿನದಿಂದ ಕ್ರಮವಾಗಿ 37.8, 37.9, 38.6° ಸೆಲ್ಸಿಯಸ್ ದಾಖಲಾಗಿತ್ತು ಆದರೆ ಇಂದು 39.2° ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಹವಾಮಾನ ಇಲಾಖೆಯ ದಾಖಲೆಯಲ್ಲಿ ಇಷ್ಟು ಪ್ರಮಾಣದ ಉಷ್ಣಾಂಶ ಎಂದೂ ದಾಖಲಾಗಿಲ್ಲ.

ಭಾರತೀಯ ಹವಾಮಾನ ಇಲಾಖೆ ನೀಡಿರುವ ಮಾಹಿತಿ ಪ್ರಕಾರ ಮೈಸೂರಿನಲ್ಲಿ ಇನ್ನು 5 ರಿಂದ 10 ದಿನದ ಅವಧಿಯಲ್ಲಿ 40° ಸೆಲ್ಸಿಯಸ್ ಉಷ್ಣಾಂಶ ದಾಖಲಾಗಲಿದೆ. ರಾಯಚೂರಿನಲ್ಲಿ ಗರಿಷ್ಠ 43.4° ಸೆಲ್ಸಿಯಸ್ ಉಷ್ಣಾಂಶವಿದೆ. ಇನ್ನುಳಿದಂತೆ ಬಾಗಲಕೋಟೆ, ಬಳ್ಳಾರಿ, ಹಾವೇರಿ, ದಾವಣಗೆರೆ ಸೇರಿದಂತೆ ಇತರೆ ಜಿಲ್ಲೆಗಳಲ್ಲಿ 40° ರಿಂದ 42° ಸೆಲ್ಸಿಯಸ್ ಉಷ್ಣಾಂಶವಿದೆ.

ಮೈಸೂರಿನಲ್ಲಿ ಇಂದು 39.2° ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಇಷ್ಟು ಪ್ರಮಾಣದ ಉಷ್ಣಾಂಶ ಎಂದೂ ದಾಖಲಾಗಿಲ್ಲ. ಭಾರತೀಯ ಹವಾಮಾನ ಇಲಾಖೆಯು ನಮಗೆ ನೀಡಿರುವ ಮಾಹಿತಿ ಪ್ರಕಾರ ಮೈಸೂರಿನ ಉಷ್ಣಾಂಶ 40° ಸೆಲ್ಸಿಯಸ್ ತಲುಪುವ ಸಾಧ್ಯತೆ ಇದೆ. ಸದ್ಯಕ್ಕೆ ಮೈಸೂರು ಹಾಗೂ ಕೊಡಗು ಜಿಲ್ಲೆಯಲ್ಲಿ ಮಳೆಯ ಯಾವುದೇ ಮುನ್ಸೂಚನೆಗಳು ಕಂಡು ಬಂದಿಲ್ಲ. ಈ ವೇಳೆ ಜಾನುವಾರುಗಳಿಗೆ ಶುದ್ಧ ನೀರು, ನೆರಳಿನ ವ್ಯವಸ್ಥೆ ಮಾಡಬೇಕು.

– ಡಾ.ಜಿ.ಸುಮಂತ್ ಕುಮಾರ್, ಸಹ ಸಂಶೋಧಕರು, ಹವಾಮಾನ ಇಲಾಖೆ

ಬಿಪಿ ಹಾಗೂ ಮಧುಮೇಹ ಇರುವವರು ಹೆಚ್ಚಾಗಿ ಬಿಸಿಲಿಗೆ ಬರಬಾರದು. ಮೈಸೂರಿನ ಎಲ್ಲಾ ಆಸ್ಪತ್ರೆಗಳಲ್ಲಿ ನಾಲ್ಕು ತಿಂಗಳಿಗಾಗುವಷ್ಟು ಡಿಎನ್‌ಎಸ್ ಹಾಗೂ ಗ್ಲೂಕೋಸ್ ಬಾಟಲ್‌ಗಳನ್ನು ಸ್ಟಾಕ್ ಇಡಲಾಗಿದೆ. ಜನರಿಗೆ ತೊಂದರೆಯಾದರೆ ಆರೋಗ್ಯ ಸಿಬ್ಬಂದಿ ಔಷಧೋಪಚಾರ ಮಾಡಲಿದ್ದಾರೆ.

–ಡಾ.ಕುಮಾರಸ್ವಾಮಿ, ಡಿಹೆಚ್‌ಓ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮೈಸೂರು ಮಹಾರಾಜರಂತೆ ನೀವೂ ಅಭಿವೃದ್ಧಿ ಮಾಡುವಿರಾ...!

ಸಂವಾದದ ವೇಳೆ ಯದುವೀರರಿಗೆ ಯುವ ಮತದಾರರ ಭವಿಷ್ಯದ ಪ್ರಶ್ನೆ





ಮೈಸೂರಿನ ಕೆಆರ್‌ಎಸ್ ರಸ್ತೆಯ ಮಹಾಜನ ಸ್ನಾತಕೋತ್ತರ ಕೇಂದ್ರಕ್ಕೆ ಶುಕ್ರವಾರ ಭೇಟಿ ನೀಡಿದ್ದ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಅವರಿಗೆ ಮೈಸೂರು ಪೇಟ ತೊಡಿಸಿ, ಸನ್ಮಾನಿಸಲಾಯಿತು. ಈ ವೇಳೆ ನಡೆದ ಸಂವಾದದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಏ.5(ಬಿಎಲ್‌ಯು)- ಮೈಸೂರು ಮಹಾರಾಜರು ಕೊಟ್ಟ ಕೊಡುಗೆಗಳು ಅವಿಸ್ಮರಣೀಯ. ಮೈಸೂರು ಮಾತ್ರವಲ್ಲದೆ ರಾಜ್ಯ ಹಾಗೂ ದೇಶಕ್ಕೂ ಹಲವು ವಿಶ್ವ ಮನ್ನಣೆಯ ಯೋಜನೆಗಳನ್ನು ನೀಡಿ ಮಾದರಿಯಾಗಿದ್ದಾರೆ. ಈಗ ಮೈಸೂರು ರಾಜಮನೆತನದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ರಾಜಕಾರಣಕ್ಕೆ ಪ್ರವೇಶಿಸಿದ್ದಾರೆ. ತಮ್ಮ ಪೂರ್ವಿಕರಂತೆ ಯದುವೀರ್ ಕೂಡ ಯಾವ ಅಭಿವೃದ್ಧಿ ಚಿಂತನೆವುಳ್ಳವರು ಎಂಬುದನ್ನು ಅರಿಯುವ ತವಕ ಯುವ ಮತದಾರರದ್ದು. ಹಾಗಾಗಿ ಅವರೊಂದಿಗೆ ಸಂಭ್ರಮದಿಂದ ಸಂವಾದಿಸಿದರು. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಮುಂದೆ ನಿರೀಕ್ಷೆಗಳ ಮಹಾಪಟ್ಟಿಯೇ ಇದೆ. ಹಾಗೆಯೇ ಯದುವೀರ್ ಮತಯಾಚನೆಗೆ ಹೋದ ಕಡೆಯಲ್ಲೆಲ್ಲಾ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ.

ಯದುವೀರ್ ಪ್ರಚಾರಕ್ಕಿಳಿದ ನಂತರ ಪ್ರತಿಯೊಂದು ವರ್ಗದ ಜನರ ಬಳಿ ತಲುಪುತ್ತಿದ್ದಾರೆ. ದೇವರಾಜ ಮಾರುಕಟ್ಟೆಗೆ ಭೇಟಿ ನೀಡಿದ್ದ ಯದುವೀರ್ ಅಲ್ಲಿನ ವ್ಯಾಪಾರಿಗಳ ಸಮಸ್ಯೆ ಆಲಿಸಿದ್ದರು. ಕುಕ್ಕರಹಳ್ಳಿ ಕೆರೆ ವಾಯು ವಿಹಾರಿಗಳನ್ನು ಭೇಟಿ ಮಾಡಿ ಪರಿಸರ ಸಂರಕ್ಷಣೆ ಸಂಬಂಧ ಸಮಾಲೋಚನೆ ನಡೆಸಿದ್ದರು. ಹೀಗೆ ಪ್ರತಿದಿನ ಒಂದೊಂದು ವರ್ಗದವರನ್ನು ಭೇಟಿ ಮಾಡಿ ಅವರೊಡನೆ ಸಂವಾದ ನಡೆಸಿ ಸಮಸ್ಯೆಗಳನ್ನು ಆಲಿಸುತ್ತಿದ್ದಾರೆ.

ಇಂದು ಮೈಸೂರಿನ ಕೇನ್ಸ್ ಟೆಕ್ನಾಲಜಿ, ಎಕ್ಸೆಲ್ ಸಾಫ್ಟ್‌ಗೆ ಭೇಟಿ ನೀಡಿ ತಾಂತ್ರಿಕ ಸಿಬ್ಬಂದಿಗಳನ್ನು ಭೇಟಿ ಮಾಡಿದ್ದರು. ತರುವಾಯ ಕೆಆರ್‌ಎಸ್ ರಸ್ತೆಯ ಸೇಫಿಯಂಟ್ ಕಾಲೇಜು, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಮಹಾಜನ ಸ್ನಾತಕೋತ್ತರ ಕೇಂದ್ರ, ಜಿಎಸ್‌ಎಸ್‌ಎಸ್ ಇಂಜಿನಿಯರಿಂಗ್ ಕಾಲೇಜು, ಎಂಐಟಿ ಪದವಿ ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳನ್ನು ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಯದುವೀರ್ ವಿದ್ಯಾರ್ಥಿಗಳ ಸಂವಾದದಲ್ಲಿ ಭಾಗಿಯಾಗಿದ್ದರು. ಮೈಸೂರು ಮಹಾರಾಜರು ಅಂದು ಬಹಳಷ್ಟು ಅಭಿವೃದ್ಧಿ ಕಾರ್ಯ ಮಾಡಿದರು. ಮಹಾರಾಜರಿಗೆ ಯಾರ ಆಕ್ಷೇಪಣೆ ಇಲ್ಲದೆ, ಪೂರ್ಣ ಸ್ವಾತಂತ್ರ್ಯವಿತ್ತು. ಈಗ ನೀವು ಪ್ರಜಾಸತ್ತಾತ್ಮಕ ರಾಜಕಾರಣ ಪ್ರವೇಶಿಸಿದ್ದೀರಾ. ಪ್ರತಿಯೊಂದು ವಿಚಾರದಲ್ಲೂ ಪಕ್ಷದ ವರಿಷ್ಠರನ್ನು ಕೇಳಬೇಕು. ಒಂದು ಚೌಕಟ್ಟು ಇದೆ. ಹಾಗಾಗಿ ಅಭಿವೃದ್ಧಿ ಕಾರ್ಯ ಮಾಡಲು ನಿಮಗೆ ಸ್ವಾತಂತ್ರ್ಯ ಸಿಗಲಿದೆಯೇ? - ವಿದ್ಯಾರ್ಥಿಯೊಬ್ಬರ ಪ್ರಶ್ನೆ.

ಇದಕ್ಕೆ ಯದುವೀರ್ ಉತ್ತರ; ಕೃಷ್ಣರಾಜ ಸಾಗರ ನಿರ್ಮಾಣ ಮಾಡುವಾಗ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಅಂದಿನ ಮದ್ರಾಸ್ ಸರ್ಕಾರದಿಂದ ಬಹಳಷ್ಟು ಆಕ್ಷೇಪಣೆಗಳು ಎದುರಾಯಿತು. ಎಲ್ಲಾ ಸವಾಲುಗಳನ್ನು ಮೆಟ್ಟಿನಿಂತು ಕೆಆರ್‌ಎಸ್ ನಿರ್ಮಾಣ ಮಾಡಿದರು. ಈಗ ಪ್ರಜಾಪ್ರಭುತ್ವ ವ್ಯವಸ್ಥೆ ಇದೆ. ಇಲ್ಲಿ ಅಡೆ-ತಡೆ ಹೆಚ್ಚಾಗಿರುತ್ತದೆ. ಅದನ್ನೆಲ್ಲಾ ಪರಿಹಾರ ಮಾಡಿ ಯೋಜನೆ ಅನುಷ್ಠಾನ ಮಾಡುತ್ತೇನೆ. ಮೈಸೂರು-ಕೊಡಗಿನ ಅಭಿವೃದ್ಧಿ ಸಂಬಂಧ ನನ್ನ ದೂರದೃಷ್ಟಿ ಯೋಜನೆಗಳ ಅನುಷ್ಠಾನಕ್ಕೆ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ. ಸ್ವಚ್ಛತೆಯಲ್ಲಿ ಮೈಸೂರು ಅಗ್ರ ಸ್ಥಾನದಲ್ಲಿತ್ತು. ಆದರೆ ಇಂದು ಮೈಸೂರು ಟಾಪ್ 5ರಲ್ಲೂ ಇಲ್ಲದಂತಾಗಿದೆ. ಮೈಸೂರು ಮತ್ತೆ ಅಗ್ರ ಸ್ಥಾನ ಪಡೆಯಲು ನೀವು ಕೈಗೊಳ್ಳುವ ಕ್ರಮಗಳೇನು ಎಂಬುದು ಮತ್ತೊಬ್ಬ ವಿದ್ಯಾರ್ಥಿಯ ಪ್ರಶ್ನೆ.

ಮೈಸೂರಲ್ಲಿ ಸ್ವಚ್ಛತೆ ಪರಿಣಾಮಕಾರಿಯಾಗಿ ಇರಬೇಕಾದರೆ ಸರ್ಕಾರ, ಸ್ಥಳೀಯ ಸಂಸ್ಥೆಗಳ ಜೊತೆ ಜನರ ಸಹಕಾರವೂ ಬಹಳ ಮುಖ್ಯ. ನಮ್ಮ ಸುತ್ತಮುತ್ತಲಿನ ಸ್ಥಳಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಸ್ವಚ್ಛ ಭಾರತದಲ್ಲಿ ಮೈಸೂರು ಅಗ್ರ ಸ್ಥಾನ ಪಡೆಯಲು ಸಾರ್ವಜನಿಕರ ಸಹಭಾಗಿತ್ವ ಬಹಳ ಮುಖ್ಯ ಎಂದು ಯದುವೀರ್ ಅಭಿಪ್ರಾಯಪಟ್ಟರು. ಸ್ವಚ್ಛತೆ ಬಗ್ಗೆ ಶಾಲಾ-ಕಾಲೇಜಿನಲ್ಲಿ ಕೂಡ ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಪರಿಣಾಮಕಾರಿ ಜಾಗೃತಿ ಮೂಡಿಸಬೇಕು ಎಂದು ಇದೇ ವೇಳೆ ಸಲಹೆ ನೀಡಿದರು. ಮೈಸೂರಿನ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಏನು ಮಾಡುವುದು ಎಂಬ ವಿದ್ಯಾರ್ಥಿಯೊಬ್ಬರ ಪ್ರಶ್ನೆಗೆ, ಮೈಸೂರಿನ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಸಂರಕ್ಷಣೆಗೆ ಬಹಳಷ್ಟು ಅಭಿಯಾನ ಹಾಗೂ ಪ್ರತಿಭಟನೆಗಳು ನಡೆಯಿತು. ಆ ವೇಳೆ ನಾನು ಕೂಡ ಭಾಗಿಯಾಗಿದ್ದೆ. ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಮೂಲಕ ಅಲ್ಲಿನ ವ್ಯಾಪಾರಿಗಳಿಗೆ ವ್ಯಾಪಾರ ಭದ್ರತೆ ನೀಡಬೇಕು. ಈ ನಿಟ್ಟಿನಲ್ಲಿ ಬಹಳಷ್ಟು ಅಭಿಯಾನಗಳು ನಡೆಯಲಿದ್ದು, ಇದರಲ್ಲಿ ಎಲ್ಲರೂ ಭಾಗ ವಹಿಸಬೇಕು. ಆಗ ಪಾರಂಪರಿಕ ಕಟ್ಟಡಗಳ ಉಳಿವಿಗೆ ಹೆಚ್ಚು ದನಿ ಸೇರುತ್ತದೆ ಎಂದರು ಯದುವೀರ್.

ಚುನಾವಣೆ ವೇಳೆ ಮತದಾನಕ್ಕಷ್ಟೆ ನಮ್ಮ ಜವಾಬ್ದಾರಿ ಎಂದು ಜನರು ಚೌಕಟ್ಟು ಹಾಕಿಕೊಳ್ಳಬಾರದು. ವ್ಯವಸ್ಥೆ ಸರಿಮಾಡುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಬೇಕು ಎಂಬುದು ಯದುವೀರ್ ಸಲಹೆ.

ಮೈಸೂರು ಮೈಸೂರಾಗಿಯೇ ಉಳಿಯಬೇಕು, ಕೊಡಗು ಕೊಡಗಾಗಿಯೇ ಉಳಿಯಬೇಕು

ಅಭಿವೃದ್ಧಿಯ ನೆಪದಲ್ಲಿ ನಮ್ಮ ನೈಸರ್ಗಿಕತೆ ಸಂರಕ್ಷಣೆಯನ್ನು ಯಾವುದೇ ಕಾರಣಕ್ಕೂ ಮರೆಯಬಾರದು. ಪ್ರಾಕೃತಿಕ ಕೊಡುಗೆ ಪಾಲನೆ ಮಾಡುತ್ತಾ ಮೈಸೂರು ಹಾಗೂ ಕೊಡಗಿನ ಅಭಿವೃದ್ಧಿ ಮಾಡಬೇಕು. ಈ ಮೂಲಕ ಮೈಸೂರು ಮೈಸೂರಾಗಿಯೇ ಉಳಿಯಬೇಕು, ಕೊಡಗು ಕೊಡಗಾಗಿಯೇ ಉಳಿಯಬೇಕು ಎಂದು ಯದುವೀರ್ ಅಭಿಪ್ರಾಯಪಟ್ಟರು. ಮೈಸೂರು ಮತ್ತು ಕೊಡಗಿನಲ್ಲಿ ಬಹಳಷ್ಟು ಪ್ರವಾಸಿ ತಾಣಗಳಿವೆ. ಪ್ರವಾಸಿಗರು ಎರಡು ಜಿಲ್ಲೆಯ ಪ್ರವಾಸಿ ತಾಣಗಳಿಗೆ ಭೇಟಿ ನೀಡಿ ವಿಶಿಷ್ಟ ಅನುಭವ ಪಡೆಯಬೇಕು. ಈ ನಿಟ್ಟಿನಲ್ಲಿ ಪ್ರವಾಸಿ ತಾಣಗಳ ಅಭಿವೃದ್ಧಿ ಮಾಡಬೇಕಿದೆ ಎಂದು ಹೇಳಿದರು. ಮೈಸೂರಿನಲ್ಲಿ ಬಹಳಷ್ಟು ಕೈಗಾರಿಕಾ ಬಡಾವಣೆಗಳಿವೆ. ನಿರೀಕ್ಷಿತ ಮಟ್ಟದಲ್ಲಿ ಅವು ಅಭಿವೃದ್ಧಿಯಾಗಬೇಕು. ಈ ನಿಟ್ಟಿನಲ್ಲಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವುದು ಸೇರಿದಂತೆ ಕೈಗಾರಿಕಾ ಬೆಳವಣಿಗೆಗೆ ಪೂರಕ ಕೆಲಸಗಳು ಆಗಬೇಕು ಎಂದು ಹೇಳಿದರು.

ಮೈಸೂರು-ಕೊಡಗು ಲೋಕಸಭಾ ಚುನಾವಣೆ

ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣರಿಗೆ ಇಂಡಿಯನ್ ನ್ಯೂ ಕಾಂಗ್ರೆಸ್ ಬೆಂಬಲ

ಮೈಸೂರು, ಏ.5(ಜಿಎ)-ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣರಿಗೆ ಇಂಡಿಯನ್ ನ್ಯೂ ಕಾಂಗ್ರೆಸ್ ಬೆಂಬಲ ಘೋಷಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪಕ್ಷದ ಅಧ್ಯಕ್ಷ ಅಯೂಬ್ ಖಾನ್ ಈ ವಿಷಯ ತಿಳಿಸಿ, ಇಂಡಿಯನ್ ನ್ಯೂ ಕಾಂಗ್ರೆಸ್ ಪಕ್ಷದಿಂದ ಕರ್ನಾಟಕದ 28 ಕ್ಷೇತ್ರದಲ್ಲಿ ಸ್ಪರ್ಧಿಸಲು ಚಿಂತನೆ ನಡೆಸಲಾಗಿತ್ತು. ಆದರೆ, ಇತ್ತೀಚೆಗೆ ರಾಹುಲ್ ಗಾಂಧಿ ಅವರೊಂದಿಗೆ ನಡೆದ ಚರ್ಚೆಯಲ್ಲಿ ಕಾಂಗ್ರೆಸ್‌ಗೆ ಬೆಂಬಲ ಸೂಚಿಸಲು ನಿರ್ಧರಿಸಿದ್ದು, ಅದರಂತೆ ಎಂ.ಲಕ್ಷ್ಮಣ ಅವರಿಗೆ ಪಕ್ಷ ಬೆಂಬಲ ನೀಡಲು ನಿರ್ಧರಿಸಿದೆ ಎಂದರು. ಲಕ್ಷ್ಮಣ ವಿದ್ಯಾವಂತರಾಗಿದ್ದು, ಹಲವಾರು ಹೋರಾಟ ಮತ್ತು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದರಿಂದ ಅವರು ಸೂಕ್ತ ಅಭ್ಯರ್ಥಿಯಾಗಿದ್ದಾರೆ. ಬಿಜೆಪಿಯವರು ರಾತ್ರೋರಾತ್ರಿ ಹಣ ಬಲವಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಾರೆ. ಮೈಸೂರಿನಲ್ಲಿ ಯದುವೀರ್ ಅವರನ್ನು ಆಯ್ಕೆ ಮಾಡಿದ್ದು, ಯದುವೀರ್ ರಾಜವಂಶಸ್ಥರಾಗಿದ್ದಾರೆ. ಅವರ ಮೇಲೆ ನಮಗೆ ಗೌರವವಿದೆ. ಆದರೆ, ಅವರು ಗೆದ್ದರೆ ಸಾಮಾನ್ಯ ವರ್ಗದ ಜನರು ಭೇಟಿ ಮಾಡಿ ಸಮಸ್ಯೆ ತಿಳಿಸುವುದೇ ಕಷ್ಟವಾಗಲಿದೆ. ಆದರೆ, ಲಕ್ಷ್ಮಣ ಆಯ್ಕೆಯಾದರೆ ಸುಲಭವಾಗಿ ಜನರ ಸಂಪರ್ಕಕ್ಕೆ ಸಿಗಲಿದ್ದಾರೆ. ಅದ್ದರಿಂದ ನಮ್ಮ ಬೆಂಬಲ ಅವರಿಗೆ ಇದೆ ಎಂದು ಘೋಷಿಸಿದರು. ಸುದ್ದಿಗೋಷ್ಠಿಯಲ್ಲಿ ನಗರ ಉಪಾಧ್ಯಕ್ಷ ಯೋಗೇಂದ್ರ ಇದ್ದರು.

ಲೋಕಸಭಾ ಚುನಾವಣೆಗೆ ವೀಕ್ಷಕರ ನೇಮಕ

ಮೈಸೂರು,ಏ.5-ಲೋಕಸಭಾ ಸಾರ್ವತ್ರಿಕ ಚುನಾವಣಾ ಸಂಬಂಧ ಭಾರತ ಚುನಾವಣಾ ಆಯೋಗದಿಂದ ವಿಧಾನಸಭಾ ಕ್ಷೇತ್ರಗಳಾದ ಮಡಿಕೇರಿ, ವಿರಾಜಪೇಟೆ, ಪಿರಿಯಾಪಟ್ಟಣ, ಹುಣಸೂರು, ಚಾಮುಂಡೇಶ್ವರಿ, ಕೃಷ್ಣರಾಜ, ಚಾಮರಾಜ ಮತ್ತು ನರಸಿಂಹರಾಜ ಕ್ಷೇತ್ರಕ್ಕೆ ಚುನಾವಣಾ ಸಾಮಾನ್ಯ ವೀಕ್ಷಕರಾಗಿ ಶಾಹಿದ್ ಇಕ್ಬಾಲ್ ಚೌಧ್ರಿ (ಮೊ.ಸಂ 9482042877) ಹಾಗೂ ಪೊಲೀಸ್ ವೀಕ್ಷಕರಾಗಿ ಮನೋಜ್ ತಿವಾರಿ (ಮೊ.ಸಂ 9482209477) ಅವರು ನೇಮಕಗೊಂಡಿದ್ದಾರೆ.

ಮಡಿಕೇರಿ, ವಿರಾಜಪೇಟೆ, ಪಿರಿಯಾಪಟ್ಟಣ, ಹುಣಸೂರು ವಿಧಾನಸಭಾ ಕ್ಷೇತ್ರಗಳಿಗೆ ಸುರೇಶ್.ಎ, (ಮೊ.ಸಂ. 9482051577) ಹಾಗೂ ಚಾಮುಂಡೇಶ್ವರಿ, ಕೃಷ್ಣರಾಜ, ಚಾಮರಾಜ ಮತ್ತು ನರಸಿಂಹರಾಜ ಕ್ಷೇತ್ರಗಳಿಗೆ ಯೋಗೀಶ್ ಮಿಶ್ರ (ಮೊ.ಸಂ 9482058477) ಅವರನ್ನು ವೆಚ್ಚ ವೀಕ್ಷಕರಾಗಿ ನೇಮಿಸಲಾಗಿದೆ.

ಸಾಮಾನ್ಯ ವೀಕ್ಷಕರಾದ ಶಾಹಿದ್ ಇಕ್ಬಾಲ್ ಚೌಧ್ರಿರವರು ಸೋಮವಾರ, ಮಂಗಳವಾರ, ಹಾಗೂ ಬುಧವಾರ ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ ಜಲದರ್ಶಿನಿ ಅತಿಥಿಗೃಹ ಹೊಸ ಕಟ್ಟಡದ ವಿ.ಐ.ಪಿ ಲಾಂಜ್-2 ಕೊಠಡಿ, ವೆಚ್ಚ ವೀಕ್ಷಕರಾದ ಸುರೇಶ್.ಎ ಪ್ರತಿ ದಿನ ಬೆಳಗ್ಗೆ 10 ರಿಂದ 11 ಗಂಟೆಯವರೆಗೆ ಹಳೆ ಕಟ್ಟಡದ ವಿ.ಐ.ಪಿ-1 ಕೊಠಡಿ ಹಾಗೂ ಯೋಗೀಶ್ ಮಿಶ್ರ ಅವರು ಪ್ರತಿದಿನ ಬೆಳಗ್ಗೆ 11 ರಿಂದ 12 ಗಂಟೆಯವರೆಗೆ ಹಳೆ ಕಟ್ಟಡದ ವಿ.ಐ.ಪಿ-2 ಕೊಠಡಿ, ಪೊಲೀಸ್ ವೀಕ್ಷಕರಾದ ಮನೋಜ್ ತಿವಾರಿ ಸೋಮವಾರ, ಮಂಗಳವಾರ, ಬುಧವಾರ ಬೆಳಗ್ಗೆ 10 ರಿಂದ 11 ಗಂಟೆಯವರೆಗೆ ಹೊಸ ಕಟ್ಟಡದ ವಿ.ಐ.ಪಿ ಲಾಂಜ್-1 ಕೊಠಡಿಗೆ ಸಾರ್ವಜನಿಕರು ನೇರವಾಗಿ ಭೇಟಿ ಮಾಡಿ ಯಾವುದೇ ಮನವಿ ಇಲ್ಲವೆ ಅಹವಾಲುಗಳನ್ನು ಸಲ್ಲಿಸಬಹುದಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ದೇವರಾಜ ಮಾರುಕಟ್ಟೆ, ಬೋಟಿ ಬಜಾರ್‌ನಲ್ಲಿ

ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಮತಯಾಚನೆ

ಶಾಸಕ ಹರೀಶ್‌ಗೌಡ, ಮುಖಂಡರು ಸಾಥ್



ಬೋಟಿ ಬಜಾರ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಹಾಗೂ ಶಾಸಕ ಕೆ.ಹರೀಶ್‌ಗೌಡ ಮತಯಾಚಿಸಿದರು.



ಮೈಸೂರಿನ ದೇವರಾಜ ಮಾರುಕಟ್ಟೆಯಲ್ಲಿ ಮತ ಯಾಚಿಸಲು ಬಂದ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಹಾಗೂ ಶಾಸಕ ಕೆ.ಹರೀಶ್‌ಗೌಡ ಅವರನ್ನು ವರ್ತಕರ ಸಂಘದ ಪದಾಧಿಕಾರಿಗಳು ಸನ್ಮಾನಿಸಿದರು.

ಮೈಸೂರು,ಏ.5(ಎಂಟಿವೈ)- ಲೋಕಸಭಾ ಚುನಾವಣಾ ಕಣ ರಂಗೇರುತ್ತಿದ್ದು, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ, ಶಾಸಕ ಕೆ.ಹರೀಶ್‌ಗೌಡ ಹಾಗೂ ಬೆಂಬಲಿಗರೊಂದಿಗೆ ಮೈಸೂರಿನ ದೇವರಾಜ ಮಾರುಕಟ್ಟೆ, ಬೋಟಿ ಬಜಾರ್‌ನಲ್ಲಿ ಮತಯಾಚನೆ ಮಾಡಿದರು.

ದೇವರಾಜ ಮಾರುಕಟ್ಟೆಯಲ್ಲಿ ಕೆಲವು ವ್ಯಾಪಾರಿಗಳು ಇವರನ್ನು ಸ್ವಾಗತಿಸಿದರು. ಬಳಿಕ ಮಾರುಕಟ್ಟೆಯ ಎಲ್ಲಾ ಬ್ಲಾಕ್‌ಗಳಲ್ಲೂ ಎಂ.ಲಕ್ಷ್ಮಣ ಮತ ನೀಡುವಂತೆ ಕೋರಿದರು. ರಾಜ್ಯ ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರೆಂಟಿ ಯೋಜನೆಗಳು ಹಾಗೂ ಈ ಹಿಂದೆ ಜಾರಿಗೊಳಿಸಿದ್ದ ವಿವಿಧ ಭಾಗ್ಯ ಕಾರ್ಯಕ್ರಮಗಳ ಮಾಹಿತಿಯುಳ್ಳ ಭಿತ್ತಿಪತ್ರ ವಿತರಿಸಿ ಕಾಂಗ್ರೆಸ್ ಸರ್ಕಾರದ ಮುಂದಿನ ಜನಪರ ಕಾರ್ಯಕ್ರಮಗಳಿಗೆ ಬೆಂಬಲ ನೀಡುವಂತೆ ಮನವಿ ಮಾಡಿದರು. ಈ ವೇಳೆ ದೇವರಾಜ ಮಾರುಕಟ್ಟೆ ವರ್ತಕರ ಸಂಘದ ಅಧ್ಯಕ್ಷ ಮಹದೇವ್ ಹಾಗೂ ಪದಾಧಿಕಾರಿಗಳು ಶಾಸಕ ಕೆ.ಹರೀಶ್‌ಗೌಡ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಅವರನ್ನು ಸನ್ಮಾನಿಸಿದರು.

ಬಳಿಕ ಬೋಟಿ ಬಜಾರ್‌ಗೆ ತೆರಳಿ ಹಣ್ಣಿನ ಮಂಡಿಗಳು, ಇನ್ನಿತರ ಮಳಿಗೆಗಳ ಮಾಲೀಕರು, ವ್ಯಾಪಾರಿಗಳಿಗೆ ಭಿತ್ತಿಪತ್ರ ನೀಡಿ ಮತಯಾಚಿಸಿದರು. ನಂತರ ಸಯ್ಯಾಜಿರಾವ್ ರಸ್ತೆಯ ಮಳಿಗೆಗಳು, ಚಿಕ್ಕಗಡಿಯಾರ ವೃತ್ತದಲ್ಲಿರುವ ವ್ಯಾಪಾರಿಗಳ ಬಳಿಯೂ ಮತಯಾಚಿಸಿ, ಈ ಬಾರಿ ಕಾಂಗ್ರೆಸ್‌ಗೆ ಬೆಂಬಲ ನೀಡುವಂತೆ ಕೋರಿದರು. ಈ ವೇಳೆ ಅಭ್ಯರ್ಥಿ ಎಂ. ಲಕ್ಷ್ಮಣ ಮಾತನಾಡಿ, ಬಡವರು, ಶೋಷಿತರು, ರೈತರು, ಕೂಲಿಕಾರ್ಮಿಕರು ಹಾಗೂ ಅಸಂಘಟಿತ ವರ್ಗಗಳ ಹಿತಕಾಯುವ ಏಕೈಕ ಪಕ್ಷ ಕಾಂಗ್ರೆಸ್. ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಹಲವು ಜನಪ್ರಿಯ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಚುನಾವಣೆಗೂ ಮುನ್ನ ನೀಡಿದ ಭರವಸೆಯನ್ನು ಜಾರಿಗೊಳಿಸಿದ್ದಾರೆ. ಕೇವಲ ಆಶ್ವಾಸನೆ ನೀಡಿ ಸುಮ್ಮನಾಗದೆ, ಕೊಟ್ಟ ಮಾತನ್ನು ಈಡೇರಿಸಿದ ಕೀರ್ತಿ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲುತ್ತದೆ.

ಈ ಮೊದಲು ಅನ್ನಭಾಗ್ಯ, ಕ್ಷೀರಭಾಗ್ಯ, ಶೂ ಭಾಗ್ಯ, ಶಾದಿ ಭಾಗ್ಯ, ಇಂದಿರಾ ಕ್ಯಾಂಟೀನ್‌ನಂತಹ ಜನಪ್ರಿಯ ಯೋಜನೆಗಳನ್ನು ಜಾರಿಗೆ ತಂದರು. ಮೈಸೂರಿನ ಜನತೆ ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಗಳ ಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸಬೇಕೆಂಬ ಉದ್ದೇಶದಿಂದ ಮೈಸೂರಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ, ಸುಸಜ್ಜಿತ ಜಿಲ್ಲಾಸ್ಪತ್ರೆ, ಟ್ರಾಮಾ ಕೇರ್ ಸೆಂಟರ್, ಪಂಚಕರ್ಮ ಆಸ್ಪತ್ರೆ ನಿರ್ಮಿಸಿದರು. ಗ್ರಾಮೀಣ ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಪಡುವಾರಹಳ್ಳಿಯಲ್ಲಿ ಮಹಾರಾಣಿ ವಾಣಿಜ್ಯ ಕಾಲೇಜಿಗೆ ಬೃಹತ್ ಕಟ್ಟಡ ನಿರ್ಮಿಸಿಕೊಟ್ಟರು. ಹಲವೆಡೆ ವಿದ್ಯಾರ್ಥಿನಿಲಯ ನಿರ್ಮಿಸಿದ್ದಾರೆ. ಇದರಿಂದ ಸಾವಿರಾರು ವಿದ್ಯಾರ್ಥಿಗಳಿಗೆ ನೆರವಾಗಿದೆ. ಎರಡನೇ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಗ್ಯಾರಂಟಿ ಯೋಜನೆ ಜಾರಿಗೊಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಕ್ಕೆ ಕಾಂಗ್ರೆಸ್‌ಗೆ ಮತ ನೀಡುವಂತೆ ಮನವಿ ಮಾಡಿದರು.

ಕೇಂದ್ರದಿಂದ ಬರುವ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಿ, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಅಭಿವೃದ್ಧಿಗೆ, ಕೈಗಾರಿಕಾ ಸ್ಥಾಪನೆ, ಉದ್ಯೋಗ ಸೃಷ್ಟಿಸಲು ಕ್ರಮ ಕೈಗೊಳ್ಳುತ್ತೇನೆ. ಪ್ರವಾಸೋದ್ಯಮ ಅಭಿವೃದ್ಧಿಯಾದರೆ, ವ್ಯಾಪಾರಿಗಳಿಗೂ ನೆರವಾಗುತ್ತದೆ. ಈ ಹಿನ್ನೆಲೆಯಲ್ಲಿ ದೂರದೃಷ್ಟಿಯೊಂದಿಗೆ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸುವ ಆಲೋಚನೆ ಹೊಂದಿರುವುದಾಗಿ ತಿಳಿಸಿದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಯಾವುದೇ ತಾರತಮ್ಯವಿಲ್ಲದೆ ಸರ್ವ ಜನರ ಹಿತ ಕಾಯಲು ಕಾಂಗ್ರೆಸ್ ಬದ್ಧವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳು ಯಾವುದೇ ಒಂದು ಜಾತಿ, ವರ್ಗ, ಧರ್ಮಕ್ಕೆ ಸೀಮಿತವಾಗಿಲ್ಲ. ಎಲ್ಲಾ ಜಾತಿ, ಧರ್ಮದ ಫಲಾನುಭವಿಗಳು ಗ್ಯಾರಂಟಿ ಯೋಜನೆಗಳ ಸೌಲಭ್ಯ ಪಡೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಬಡವರು, ಶೋಷಿತರು, ಕೂಲಿ ಕಾರ್ಮಿಕರು, ರೈತರು ಸೇರಿದಂತೆ ಅಸಂಘಟಿತ ವರ್ಗಗಳಿಗೆ ಶಕ್ತಿ ತುಂಬುವ ಇನ್ನಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾದರೆ ಕಾಂಗ್ರೆಸ್‌ಗೆ ಬೆಂಬಲ ನೀಡುವಂತೆ ಕೋರಿದರು. ಈ ಸಂದರ್ಭದಲ್ಲಿ ಮುಖಂಡ ಎಂ.ಶಿವಣ್ಣ, ಮಾಜಿ ಉಪಮೇಯರ್ ಪುಷ್ಪವಲ್ಲಿ, ಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕೇಂದ್ರ ಬಿಜೆಪಿ ಸರ್ಕಾರ ಸಾಧನೆಗಳ ಮನೆ ಮನೆಗೆ ತಲುಪಿಸಿ

- ನಮೋ ಆ್ಯಪ್ ಮೂಲಕ ಬೂತ್ ಕಾರ್ಯಕರ್ತರೊಂದಿಗೆ ಪ್ರಧಾನಿ ಮೋದಿ ಸಂವಾದ
- ಕಾಂಗ್ರೆಸ್ ಗ್ಯಾರಂಟಿಗಳ ವೈಫಲ್ಯವನ್ನು ಜನರಿಗೆ ಮುಟ್ಟಿಸಿ; ಹಾಗೆಯೇ ನಮ್ಮ ಸಾಧನೆಗಳನ್ನು ತಿಳಿಸಿ

ಬೆಂಗಳೂರು, ಏ.5(ಕೆಎಂಶಿ)- ಬಿಜೆಪಿ ಸರ್ಕಾರದ ಸಾಧನೆಗಳನ್ನು ಮನೆ ಮನೆಗೆ ತಲುಪಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ತಿಳಿಸಿದರು.

ಕರ್ನಾಟಕದ ಬೂತ್ ಕಾರ್ಯಕರ್ತರ ಜೊತೆ ನಮೋ ಆ್ಯಪ್ ಮೂಲಕ ಸಂವಾದ ನಡೆಸಿದ ಅವರು, 2-3 ಜನರ ಗುಂಪು ರಚಿಸಿ ಕುಳಿತು ಮಾತನಾಡಿ, ಮತದಾನ ಖಚಿತಪಡಿಸಿಕೊಳ್ಳಿ ಎಂದು ಮನವಿ ಮಾಡಿದರು. ಸಾಧನೆಗಳನ್ನು ನಿರ್ದಿಷ್ಟ ಮನೆಗಳಿಗೆ ತಲುಪಿಸುವ ಕಡೆ ಗಮನ ಕೊಡಿ ಎಂದು ವಿನಂತಿಸಿದರು.

ಸಾಧನೆ, ಕೆಲಸಗಳ ಕುರಿತು ಮಾತನಾಡಿ. ಗ್ಯಾರಂಟಿ ವಿಚಾರದಲ್ಲಿ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ತಿಳಿಸಬೇಕು. ಅವರ ಭ್ರಷ್ಟಾಚಾರಗಳನ್ನು ಅನಾವರಣಗೊಳಿಸಿ ಎಂದು ಅವರು ತಿಳಿಸಿದರು.

ಪ್ರಯೋಜನಾರ್ಥಿಗಳ ಜೊತೆ ಮಾತನಾಡಲು ಯುವಜನರ ಜೊತೆ ಯುವಜನರನ್ನೇ ನಿಯೋಜಿಸಿ. ಹಿರಿಯರ ಜೊತೆ ಹಿರಿಯರೇ ಮಾತನಾಡುವಂತಿರಲಿ. ಲಾಭಾರ್ಥಿಗಳಿಗೆ ಆದ ಲಾಭವನ್ನು ಗಮನದಲ್ಲಿ ಇಟ್ಟುಕೊಂಡು ಮಾತನಾಡೋಣ. ಡೈರಿಯಲ್ಲಿ ಇದನ್ನು ಬರೆದುಕೊಳ್ಳಿ. ಮತದಾರರ ಮನ ಗೆಲ್ಲೋಣ. ಮತದಾರರ ಹೃದಯ ಗೆಲ್ಲುವುದು, ಕುಟುಂಬದ ಮನ ಗೆಲ್ಲುವುದು, ಬೂತ್‌ನ ಎಲ್ಲರ ಮನ ಗೆದ್ದು ಬಿಜೆಪಿಗೆ ಮತ ಕೊಡುವಂತೆ ಮಾಡುವ ಸವಾಲನ್ನು ನಿರ್ವಹಿಸಬೇಕಿದೆ ಎಂದು ತಿಳಿಸಿದರು.

ಕರ್ನಾಟಕದಲ್ಲಿ ಬಿಜೆಪಿ- ಜೆಡಿಎಸ್ ಮೈತ್ರಿ ಇದ್ದು, ಪ್ರತಿ ಬೂತ್‌ನಲ್ಲೂ ಎರಡೂ ಪಕ್ಷಗಳ ಸಮನ್ವಯ ಸಭೆ ನಡೆಸಬೇಕು. ಇದು ಗೆಲುವಿನ ಕಡೆ ನಮ್ಮನ್ನು ಕರೆದೊಯ್ಯಲಿದೆ. ನಾವು ಆಡಳಿತದಲ್ಲಿ ಇಲ್ಲದಿದ್ದರೂ ನಾವು ಭೇದಭಾವ ಮಾಡಿಲ್ಲ. ಇದನ್ನು ಜನರಿಗೆ ತಿಳಿಸೋಣ ಎಂದು ಅವರು ಹೇಳಿದರು. ಇದೇವೇಳೆ ಕಾರ್ಯಕರ್ತರು ಜನರನ್ನು ಭೇಟಿ ಮಾಡುವ ಕಾರ್ಯ ಮಾಡುತ್ತಿದ್ದಾರೆಯೇ ಎಂದು ಪ್ರಶ್ನಿಸಿದರು. ಸಾಧನೆಗಳನ್ನು ತಿಳಿಸುವ ಕಾರ್ಯ ನಡೆದಿದೆಯೇ ಎಂದು ಕೇಳಿ ಉತ್ತರ ಪಡೆದರು. ಬಿಜೆಪಿ ಸರ್ಕಾರದ ಯಾವ ಕೆಲಸ ಹೆಚ್ಚು ಇಷ್ಟವಾಗಿದೆ ಎಂದು ಕೇಳಿದರು.

ರಾಮಮಂದಿರದ ವಿಚಾರ ಎಷ್ಟು ಪ್ರಭಾವ ಬೀರಬಹುದು ಎಂಬ ಪ್ರಶ್ನೆಯನ್ನು ಮುಂದಿಟ್ಟು ಉತ್ತರ ಪಡೆದರು. ಮಹಿಳಾ ಶಕ್ತಿ ಹೆಚ್ಚು ಪ್ರಮಾಣದಲ್ಲಿ ಮತದಾನ ಮಾಡುವಂತೆ ನೋಡಿಕೊಳ್ಳಿ. ಮತದಾನ ಮಾಡುವುದು ಹೇಗೆ ಎಂದು ಜಾಗೃತಿ ಮೂಡಿಸಿ ಎಂದು ಸಲಹೆ ಕೊಟ್ಟರು.

ಬಿಜೆಪಿ ಸರ್ಕಾರವು ಕಳೆದ 10 ವರ್ಷಗಳಲ್ಲಿ ನಾರಿ ಶಕ್ತಿಯ ಬಲವರ್ಧನೆ ಮಾಡಿದೆ. 'ನಾರಿ ಶಕ್ತಿ ವಂದನಾ'  ರಾಜಕೀಯವಾಗಿ ಮಹಿಳಾ ಬಲವರ್ಧನೆ ಮಾಡಲಿದೆ. ಮಹಿಳೆಯರ ಮತದಾನ ಪ್ರಮಾಣ ಹೆಚ್ಚಿಸಲು ಶ್ರಮಿಸಿ ಎಂದು ಅವರು ತಿಳಿಸಿದರು. ಬೂತ್ ಕಾರ್ಯಕರ್ತರು ತಮ್ಮ ಕಾರ್ಯದ ಅವಲೋಕನ ಮಾಡಲು ಪ್ರತಿದಿನದ ಕೆಲಸ ಮುಗಿದ ಬಳಿಕ ಸೇರಬೇಕು. ಮತಗಳ ಪ್ರಮಾಣ ಹೆಚ್ಚಾಗುತ್ತಿದೆಯೇ ಎಂದು ಅನಿಸಿಕೆಗಳನ್ನು ಹಂಚಿಕೊಳ್ಳಬೇಕಿದೆ ಎಂದು ಹೇಳಿದರು.

ನಾರಿ ಶಕ್ತಿ, ನಮೋ ಆ್ಯಪ್ ಮೂಲಕ ಮಾಡಿದ ಜಾಗೃತಿ, ಚಾಯ್ ಪೇ ಚರ್ಚಾ ಕಾರ್ಯಕ್ರಮಗಳ ಕುರಿತು ಕೂಡ ಅವರು ಮಾಹಿತಿ ಪಡೆದುಕೊಂಡರು. ಪನ್ನಾ ಪ್ರಮುಖರ ಮೂಲಕ ಚರ್ಚೆ ಮಾಡಿದ್ದೀರಾ ಎಂಬ ಮಾಹಿತಿ ಪಡೆದರು. ರೈತರಿಗಾಗಿ ಜಾರಿಗೊಳಿಸಿದ ವಿವಿಧ ಯೋಜನೆಗಳ ಕುರಿತು ಅನ್ನದಾತರಿಗೆ 6 ಸಾವಿರ ರೂಪಾಯಿ ಕೊಟ್ಟ ಕುರಿತು ಮಾಹಿತಿ ನೀಡಿದ್ದೀರಾ ಎಂದು ಅವರು ತಿಳಿದುಕೊಂಡರು. ಮೂಲಸೌಕರ್ಯ ವೃದ್ಧಿ, ಕಿಸಾನ್ ಸಮ್ಮಾನ್ ಸೇರಿ ವಿವಿಧ ಯೋಜನೆಗಳ ಕುರಿತು ಪ್ರತ್ಯೇಕವಾಗಿ ತಿಳಿಸಿ ಎಂದು ಮನವಿ ಮಾಡಿದರು. ಕಾಂಗ್ರೆಸ್ ಸರ್ಕಾರವು ರೈತರಿಗೆ ಸಮರ್ಪಕವಾಗಿ ವಿದ್ಯುತ್ ನೀಡುತ್ತಿಲ್ಲ ಎಂಬುದನ್ನು ಮನದಟ್ಟು ಮಾಡಿ. ಮೋದಿ ಗ್ಯಾರಂಟಿ, ನುಡಿದಂತೆ ನಡೆಯುವ ಗ್ಯಾರಂಟಿ ಎಂದು ತಿಳಿಹೇಳಬೇಕು. ಬಡವರಿಗೆ ಮನೆ ನಿರ್ಮಾಣ, ಶೌಚಾಲಯ, ಗ್ಯಾಸ್ ಸಂಪರ್ಕ, ಮನೆ ಮನೆಗೆ ನಲ್ಲಿ ನೀರಿನ ಸಂಪರ್ಕ, ಕಿಸಾನ್ ಸಮ್ಮಾನ್ ನಿಧಿ ಸೇರಿ ಅನೇಕ ಯೋಜನೆಗಳನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ಇದನ್ನು ಜನರಿಗೆ ತಿಳಿಸಿ ಎಂದು ವಿನಂತಿಸಿದರು.

ಉಡುಪಿಯ ದ್ವಾರಕಾ ನಗರ, ಕೃಷ್ಣನಗರದ ಹಿನ್ನೆಲೆಯನ್ನು ತಿಳಿಸಿದ ನರೇಂದ್ರ ಮೋದಿ ಅವರು, ಉಡುಪಿಯನ್ನು ಕಂಡರೆ ಅತ್ಯಂತ ಸಂತಸವಾಗುತ್ತದೆ ಎಂದರು.

ಸಮಾಜದ ಎಲ್ಲ ವರ್ಗಕ್ಕೆ, ಲಾಭಾರ್ಥಿಗಳನ್ನು ತಲುಪುವ ಕಡೆ ಗಮನ ಕೊಡಲು ಸಲಹೆ ನೀಡಿದರು. ಪ್ರತಿ ಬೂತ್ ಗೆಲ್ಲುವ ಮೂಲಕ ಲೋಕಸಭಾ ಚುನಾವಣೆ ಗೆಲ್ಲೋಣ ಎಂದು ತಿಳಿಸಿದರು. ಪ್ರಥಮ ಬಾರಿ ಮತದಾನ ಮಾಡುವವರ ಮನ ಗೆಲ್ಲಲು ನೀವೇನು ಮಾಡುತ್ತೀರಿ ಎಂದು ಕೇಳಿ ಉತ್ತರ ಪಡೆದರು. ಹಿಂದಿನ ಚುನಾವಣೆಗಳಲ್ಲಿ ಪಡೆದ ಮತಗಳ ಕುರಿತು ಮಾಹಿತಿ ಶೇಖರಿಸಿದ್ದೀರಾ ಎಂದು ಪ್ರಶ್ನಿಸಿ ಮಾಹಿತಿ ಪಡೆದುಕೊಂಡರು. ಕಮಲದ ಚಿಹ್ನೆಯನ್ನು ಕೈಯ ಮೇಲೆ ಮೆಹಂದಿ ಮೂಲಕ ಹಾಕಿಕೊಳ್ಳಿ. ಇದರ ಮೂಲಕ ಜನಜಾಗೃತಿ ಮೂಡಿಸಿ ಎಂದು ಅವರು ಸಲಹೆ ಕೊಟ್ಟರು. ಯುಗಾದಿ ಸಂದರ್ಭದಲ್ಲಿ ಕಮಲ ಚಿಹ್ನೆ ಮೂಲಕ ರಂಗೋಲಿ ಮಾಡುವ ಕುರಿತ ಸಲಹೆಯೂ ಒಳ್ಳೆಯದೇ ಎಂದು ಪ್ರಧಾನಿಯವರು ನುಡಿದರು.

ಬೇಸಿಗೆ ಕಾಲವಾದ್ದರಿಂದ ಬಿಸಿಲು ಹೆಚ್ಚಾಗುತ್ತಿದೆ. ಬೆಳಿಗ್ಗೆ ಹೆಚ್ಚು ಮತದಾನ ಆಗುವಂತೆ ನೋಡಿಕೊಳ್ಳಿ. ಇದು ತುಂಬ ಉಪಯುಕ್ತ ಎಂದು ಸಲಹೆ ಕೊಟ್ಟರು. ಬಿಜೆಪಿ ಗೆಲ್ಲುವಂತೆ ನೋಡಿಕೊಳ್ಳಿ ಎಂದು ಮನವಿ ಮಾಡಿದರು. ಜನತೆಗೆ ಅವರು ರಾಮನವಮಿ, ಯುಗಾದಿಯ ಶುಭಾಶಯ ಕೋರಿದರು. ಮೈಸೂರಿನ ರಾಜೇಶ್, ಶಿವಮೊಗ್ಗದ ಸರಳಾ, ಬೆಳಗಾವಿಯ ಶ್ರುತಿ ಆಪ್ಟೇಕರ್, ಉಡುಪಿಯ ಸುಪ್ರೀತ್ ಭಂಡಾರಿ ಅವರ ಜೊತೆ ಸಂವಾದ ನಡೆಯಿತು.

ಇಂದು ಮಂಡ್ಯದಲ್ಲಿ ಜಾನಪದ ಜಾತ್ರೆ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಹಿಳಾ ಸರ್ಕಾರಿ ಕಾಲೇಜಿನ ಪ್ರಾಂಶುಪಾಲೆ ಡಾ.ಕೆ.ಹೇಮಲತಾ

ಮಂಡ್ಯ,ಏ.5–ಮಂಡ್ಯ ಜಿಲ್ಲೆ ಜನಪದಗಳ ನಾಡಾಗಿದ್ದು, ಇತ್ತೀಚಿನ ದಿನಗಳಲ್ಲಿ ಜಾನಪದ ಸೊಗಡಿನ ಅನುಭವ ಎಂಬುದು ಅನೇಕರಲ್ಲಿ ಅರಿವಿಗೆ ಬಾರದೆ ಕಡಿಮೆಯಾಗಿರುವ ಕಾರಣದಿಂದ ಜಾನಪದ ಜಾತ್ರೆ–2024 ಕಾರ್ಯಕ್ರಮವನ್ನು, ಏ.6 ರಂದು ಮಹಿಳಾ ಸರ್ಕಾರಿ ಕಾಲೇಜಿನ ವನರಂಗದಲ್ಲಿ ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಮಹಿಳಾ ಸರ್ಕಾರಿ ಕಾಲೇಜಿನ ಪ್ರಾಂಶುಪಾಲೆ ಡಾ.ಕೆ.ಹೇಮಲತಾ ತಿಳಿಸಿದರು.

ಶುಕ್ರವಾರ ಕಾಲೇಜಿನಲ್ಲಿ ಆವರಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, 2013ನೇ ಸಾಲಿನಿಂದ ಪ್ರತಿ ವರ್ಷವೂ ಜಾನಪದ ಜಾತ್ರೆ ಕಾರ್ಯಕ್ರಮವನ್ನು ನಮ್ಮ ಕಾಲೇಜಿನಲ್ಲಿ ನಡೆಸುತ್ತಾ ಬಂದಿದ್ದು, ಎರಡು ವರ್ಷಗಳ ಕಾಲ ಕೊರೊನಾ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು ನಿಲ್ಲಿಸಲಾಗಿತ್ತು. ಕಳೆದ ವರ್ಷವಾದ 2023 ನೇ ಸಾಲಿನಲ್ಲಿ ಜಾನಪದ ಜಾತ್ರೆಯನ್ನು ಸಾಮಾನ್ಯವಾಗಿ ಆಚರಿಸಿದ್ದು, ಈ ಬಾರಿ ಕಳೆದ ವರ್ಷಕ್ಕಿಂತ ವಿಜೃಂಭಣೆಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದರು.

ಸಾಂಸ್ಕೃತಿಕ ವೇದಿಕೆಯ ಸಂಚಾಲಕಿ ಡಾ.ಕುಮಾರ್ ಬೆಳಲೆ ಮಾತನಾಡಿ, ನಮ್ಮ ಕಾಲೇಜಿಗೆ 70 ವರ್ಷಗಳ ಇತಿಹಾಸವಿದ್ದು, ಪಠ್ಯೇತರ ಚಟುವಟಿಕೆ ಹಾಗೂ ಗುಣಮಟ್ಟ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಐದು ಸ್ನಾತಕೋತರ ವಿಭಾಗಗಳನ್ನು ಮಹಿಳಾ ಸರ್ಕಾರಿ ಕಾಲೇಜು ಒಳಗೊಂಡಿದ್ದು, ಸುಮಾರು 1,900 ವಿದ್ಯಾರ್ಥಿಗಳು ನುರಿತ ಅಧ್ಯಾಪಕರುಗಳಿಂದ ಗುಣಮಟ್ಟದ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಚರಿಸುತ್ತಿದ್ದೇವೆ ಎಂದು ವಿವರಿಸಿದರು.

ಜಾನಪದ ಜಾತ್ರೆ ಕಾರ್ಯಕ್ರಮಕ್ಕೆ ಕರ್ನಾಟಕ ಜಾನಪದ ಪರಿಷತ್ತು, ಜೊತೆಗೆ ನೆಹರು ಯುವ ಕೇಂದ್ರ ಹಾಗೂ ಜಾನಪದ ಜನ್ನೆಯರ ಸಂಸ್ಥೆಯು ಸೇರಿದಂತೆ 3 ಸಂಸ್ಥೆಗಳು ಸಹಕಾರ ನೀಡಿದೆ. ಮೈಸೂರು ಸಂಸ್ಕೃತಿ ಚಿಂತಕರು ಹಾಗೂ ಪ್ರಸಿದ್ಧ ವಾಗ್ಮಿಗಳಾದ ಪ್ರೊ.ಎಂ.ಕೃಷ್ಣಗೌಡ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಬೆಂಗಳೂರು ಕರ್ನಾಟಕ ಜಾನಪದ ಪರಿಷತ್ತಿನ ಕಾರ್ಯಾಧ್ಯಕ್ಷರು ಹಾಗೂ ಹಂಪಿ ಕನ್ನಡ ವಿ.ವಿ. ವಿಶ್ರಾಂತ ಕುಲಪತಿಗಳಾದ ಡಾ.ಹಿ.ಚಿ. ಬೋರಲಿಂಗಯ್ಯ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಮಂಡ್ಯ ಮಹಿಳಾ ಸರ್ಕಾರಿ ಕಾಲೇಜು(ಸ್ವಾಯತ್ತ) ಪ್ರಾಂಶುಪಾಲರಾದ ಡಾ.ಕೆ. ಹೇಮಲತಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಎಲ್ಲರೂ ಸಹಕರಿಸಬೇಕೆಂದು ತಿಳಿಸಿದರು. ಖಜಾಂಚಿ ಡಾ.ಜ್ಯೋತ್ಸ್ನಾ ಕಾರಂತ್, ಜಾನಪದಜಾತ್ರೆಯ ಸಹ ಸಂಚಾಲಕಿ ಡಾ.ಕೆಂಪಮ್ಮ ಮಹಿಳಾ ಸರ್ಕಾರಿ ಕಾಲೇಜಿನ ಪತ್ರಾಂಕಿತ ವ್ಯವಸ್ಥಾಪಕ ರವಿಕಿರಣ್, ಕೆಜಿಸಿಪಿ ಉಪಾಧ್ಯಕ್ಷೆ ಪ್ರಮೀಳಾ ಉಪಸ್ಥಿತರಿದ್ದರು.

ಜಗಜೀವನರಾಮ್ ಸಮ ಸಮಾಜದ ನಿರ್ಮಾಣಕ್ಕೆ ಹೋರಾಡಿದ ಮಹಾನ್ ಚೇತನ

ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಬಣ್ಣನೆ



ಮದ್ದೂರು ತಾಲೂಕಿನ ಆತಗೂರಿನಲ್ಲಿ ಡಾ.ಬಾಬು ಜಗಜೀವನ ರಾಮ್ ಜನ್ಮದಿನಾಚರಣೆ ಪ್ರಯುಕ್ತ ಭಾವಚಿತ್ರಕ್ಕೆ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ ಪುಷ್ಪನಮನ ಸಲ್ಲಿಸಿದರು.

ಮದ್ದೂರು,ಏ.5– ಸ್ವಾತಂತ್ರ್ಯ ಹೋರಾಟಗಾರರು, ಮಾಜಿ ಉಪಪ್ರಧಾನಿಗಳಾದ ಡಾ. ಬಾಬು ಜಗಜೀವನರಾಮ್ ಅವರು ದೇಶಕ್ಕೆ ನೀಡಿದ ಕೊಡುಗೆಗಳು ಅಪಾರ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲ ಸಾಗಬೇಕು. ಅವರ ಚಿಂತನೆಗಳನ್ನು ನಾವೆಲ್ಲಾ ಮೈಗೂಡಿಸಿ ಕೊಳ್ಳಬೇಕು ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಹೇಳಿದರು.

ಡಾ.ಬಾಬು ಜಗಜೀವನ ರಾಮ್ ಅವರ 117ನೇ ಜನ್ಮದಿನಾಚರಣೆ ಪ್ರಯುಕ್ತ ತಾಲೂಕಿನ ಆತಗೂರಿನಲ್ಲಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಅಸ್ಪೃಶ್ಯತೆ ತೊಡೆದುಹಾಕಲು ಶ್ರಮಿಸಿದವರು. ಸಮಸಮಾಜದ ನಿರ್ಮಾಣಕ್ಕೆ ಹೋರಾಡಿದ ಮಹಾನ್ ಚೇತನ ಎಂದರು.

ಹಸಿರು ಕ್ರಾಂತಿ ಮೂಲಕ ಕೃಷಿ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಗೆ ನಾಂದಿಯಾಡಿದವರು. ರೈತರು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸಿದರು. ದೇಶದಲ್ಲಿ ಆಹಾರ ಉತ್ಪಾದನೆ ಹೆಚ್ಚಳಕ್ಕೆ ಕಾರಣೀಭೂತರು. ಅಂಬೇಡ್ಕರ್ ಹಾಗೂ ಬಾಬುಜಗಜೀವನ ರಾಮ್ ಅವರು ದಲಿತ ಚಳವಳಿಗಳ ಎರಡು ಕಣ್ಣುಗಳಿದ್ದಂತೆ ಎಂದು ಹೇಳಿದರು.

ಮದ್ದೂರಿನಲ್ಲಿ ಮತಪ್ರಚಾರ: ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಮದ್ದೂರು ವಿಧಾನಸಭಾ ಕ್ಷೇತ್ರದಾದ್ಯಂತ ಮತಪ್ರಚಾರ ನಡೆಸಿದರು.

ಗೊಲ್ಲರದೊಡ್ಡಿಯ ಜುಂಜಪ್ಪ ದೇವರಿಗೆ ಪೂಜೆ ಸಲ್ಲಿಸಿ ಚುನಾವಣಾ ಪ್ರಚಾರ ಆರಂಭಿಸಿದರು. ಮಲ್ಲನಕುಪ್ಪೆ, ಹೂತಗೆರೆ, ಕೆಸ್ತೂರು, ಆತಗೂರು, ಕದಲೂರು ಸೇರಿದಂತೆ ನಾನಾ ಗ್ರಾಮಪಂಚಾಯತ್‌ಗಳಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿದರು.

ಶಾಸಕ ಕೆ.ಎಂ.ಉದಯ್, ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮದ್ದೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕದಲೂರು ರಾಮಕೃಷ್ಣ ಸೇರಿದಂತೆ ಹಲವು ಮುಖಂಡರು ಜೊತೆಯಲ್ಲಿದ್ದರು.

ಇಂದು ಮತದಾನ ಜಾಗೃತಿ ಕಾರ್ಯಕ್ರಮ

ಮಂಡ್ಯ,ಏ.5– ಸಾರ್ವತ್ರಿಕ ಲೋಕಸಭಾ ಚುನಾವಣೆ 2024ರ ಸಂಬಂಧ ಯುವ ಮತದಾರರಿಗೆ ಹಾಗೂ ಜಿಲ್ಲೆಯ ಎಲ್ಲಾ ಮತದಾರರಿಗೆ ಮತದಾನ ಜಾಗೃತಿ ಕಾರ್ಯಕ್ರಮವನ್ನು ಏ.6 ರಂದು ಬೆಳಿಗ್ಗೆ 9.30 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಜಾಪ್ರಭುತ್ವದ ಹಬ್ಬ ಏ.26 ಮತದಾನದ ದಿನ ತಪ್ಪದೇ ಮತ ಚಲಾಯಿಸಿ ಎಂಬ ಧ್ಯೇಯ ವಾಕ್ಯದೊಂದಿಗೆ ಮತದಾರರಿಗೆ ವ್ಯವಸ್ಥಿತ ಶಿಕ್ಷಣ ಮತ್ತು ಮತದಾರರ ಪಾಲ್ಗೊಳ್ಳುವಿಕೆ ಅಡಿಯಲ್ಲಿ ಜಿಲ್ಲೆಯ ಮತದಾರರಲ್ಲಿ ಮತದಾನದ ಮಹತ್ವ ಹಾಗೂ ನೈತಿಕ ಮತದಾನ ಕುರಿತು ಜಾಗೃತಿ ಮೂಡಿಸಲು ಜಿಲ್ಲಾ ಸ್ವೀಪ್ ರಾಯಭಾರಿಗಳನ್ನಾಗಿ ಕನ್ನಡ ಚಲನಚಿತ್ರ ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ್ ಮತ್ತು ಕನ್ನಡ ಚಲನಚಿತ್ರ ಹಿರಿಯ ರಂಗಕರ್ಮಿ ಮಂಡ್ಯ ರಮೇಶ್ ಅವರುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಇವರ ಉಪಸ್ಥಿತಿಯಲ್ಲಿ ಎಲ್ಲಾ ಮತದಾರರಿಗೆ ಮತದಾನ ಅರಿವು/ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಡ್ಯ ಲೋಕಸಭಾ ಚುನಾವಣೆ: 8 ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತ

ಮಂಡ್ಯ: ಮಂಡ್ಯ ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿದಂತೆ ಒಟ್ಟು 27 ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಿದ್ದು, 8 ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತವಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ.ಕುಮಾರ್ ತಿಳಿಸಿದ್ದಾರೆ.

ಪಕ್ಷೇತರ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ್ದ ಅರುಣ್ ಕುಮಾರ್.ಟಿ.ವಿ, ಇಂದು ಕುಮಾರ್.ಎಂ, ಕೃಷ್ಣ.ಜಿ, ಚಿಕ್ಕಯ್ಯ, ಹೆಚ್.ನಾರಾಯಣ, ಎಲ್.ಡಿ.ನಂದೀಶ, ಶಂಭುಲಿಂಗೇಗೌಡ, ಸತೀಶ್ ಕುಮಾರ್.ಟಿಎನ್ ಅವರುಗಳ ನಾಮಪತ್ರ ತಿರಸ್ಕೃತವಾಗಿದೆ

ಕ್ರಮಬದ್ಧವಾಗಿ 19 ಉಮೇದುವಾರರ ಪಟ್ಟಿ ಇಂತಿದೆ: ಹೆಚ್.ಡಿ.ಕುಮಾರಸ್ವಾಮಿ –ಜನತಾದಳ (ಜಾತ್ಯತೀತ), ವೆಂಕಟರಮಣೇಗೌಡ–ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಶಿವಶಂಕರ್–ಬಹುಜನ ಸಮಾಜ ಪಾರ್ಟಿ, ಚಂದ್ರಶೇಖರ.ಕೆ.ಆರ್ –ಕರ್ನಾಟಕ ರಾಷ್ಟ್ರ ಸಮಿತಿ, ಬೂದಯ್ಯ –ಕರುನಾಡು ಪಾರ್ಟಿ, ಹೆಚ್.ಡಿ.ರೇವಣ್ಣ–ಪೂರ್ವಾಂಚಲ್ ಮಹಾ ಪಂಚಾಯತ್ ಪಾರ್ಟಿ, ಲೋಕೇಶ.ಎಸ್–ಉತ್ತಮ ಪ್ರಜಾಕೀಯ ಪಕ್ಷ, ಎಸ್.ಅರವಿಂದ್– ಪಕ್ಷೇತರ, ಚನ್ನಮಾಯಿಗೌಡ–ಪಕ್ಷೇತರ, ಚಿಕ್ಕನಂಜಾಚಾರಿ–ಪಕ್ಷೇತರ, ಚಂದನ್ ಗೌಡ.ಕೆ –ಪಕ್ಷೇತರ, ಎನ್.ಬಸವರಾಜು–ಪಕ್ಷೇತರ, ಬೀರೇಶ್.ಸಿ.ಟಿ–ಪಕ್ಷೇತರ, ಯೋಗೇಶ್–ಪಕ್ಷೇತರ, ರಾಮಯ್ಯ.ಡಿ–ಪಕ್ಷೇತರ, ರಂಜಿತ.ಎನ್–ಪಕ್ಷೇತರ, ಲೋಲ–ಪಕ್ಷೇತರ, ಶಿವನಂಜಪ್ಪ–ಪಕ್ಷೇತರ, ಕೆ.ಶಿವಾನಂದ–ಪಕ್ಷೇತರ. ಒಟ್ಟು 19 ಅಭ್ಯರ್ಥಿಗಳ ನಾಮಪತ್ರ ಕ್ರಮ ಬದ್ಧವಾಗಿದೆ.

ಕಿರುಗಾವಲು ಠಾಣೆ ವ್ಯಾಪ್ತಿಯಲ್ಲಿ ವ್ಯಕ್ತಿ ನಾಪತ್ತೆ

ಮಂಡ್ಯ,ಏ.5– ಚನ್ನಪಿಳ್ಳೆ ಕೊಪ್ಪಲು ಗ್ರಾಮದ ಬೆಟ್ಟಯ್ಯ (62) ಎಂಬುವರು ಕಾಣೆಯಾಗಿದ್ದಾರೆ ಎಂದು ಕಿರುಗಾವಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಣೆಯಾದ ವ್ಯಕ್ತಿಯು 5.2 ಅಡಿ ಎತ್ತರ, ದುಂಡು ಮುಖ, ಸಾಧಾರಣ ಶರೀರ, ಗೋಧಿ ಮೈಬಣ್ಣ, ಬಿಳಿ ತಲೆ ಕೂದಲು ಇದ್ದು, ಮನೆಯಿಂದ ಹೋಗುವಾಗ ಬಿಳಿ ಬಣ್ಣದ ಶರ್ಟ್, ಬಿಳಿ ಬಣ್ಣದ ಪಂಚೆ ಧರಿಸಿರುತ್ತಾರೆ. ಸುಳಿವು ಸಿಕ್ಕಲ್ಲಿ ದೂ. ಸಂ: 082312–242555/ 242211 ಅಥವಾ 08232–224500 ಅನ್ನು ಸಂಪರ್ಕಿಸಬಹುದು ಎಂದು ಕಿರುಗಾವಲು ಪೊಲೀಸ್ ಠಾಣೆಯ ಸಬ್ ಇನ್ಸ್ ಪೆಕ್ಟರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರಣಿ ಅಪಘಾತ ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳ ಭೇಟಿ



ಹಲಗೂರು,ಏ.5–ಕನಕಪುರ–ಹಲಗೂರು ರಸ್ತೆಯಲ್ಲಿ ಸರಣಿ ಅಪಘಾತದಿಂದ ನಾಲ್ಕೈದು ಮಂದಿ ಮೃತಪಟ್ಟ ಹಿನ್ನೆಲೆಯಲ್ಲಿ ಸ್ಥಳಕ್ಕೆ ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ ಸಿ.ಇ ಅವರು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

ಜಿಲ್ಲಾ ಗಡಿಭಾಗವಾದ ದಳವಾಯಿ ಕೋಡಿಹಳ್ಳಿಯಿಂದ ಹಲಗೂರು ವ್ಯಾಪ್ತಿಯಲ್ಲಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಸರಣಿ ಅಪಘಾತಗಳು ಸಂಭವಿಸಿದ್ದು, ಅಪಾರ ಸಾವು ನೋವುಗಳು ಉಂಟಾಗಿವೆ. ಕಳೆದ ಹದಿನೈದು ದಿನಗಳಲ್ಲಿ ನಾಲ್ಕೈದು ಮಂದಿ ಮೃತಪಟ್ಟಿದ್ದು ಈ ಸಂಬಂಧ ಮಂಡ್ಯ ಜಿಲ್ಲಾ ಅಪರ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಡಿವೈಎಸ್ಪಿ ಕೃಷ್ಣಪ್ಪ, ಸಿಪಿಐ ಶ್ರೀಧರ್ ಅವರು ಸ್ಥಳಕ್ಕೆ ಭೇಟಿ ಸ್ಥಳ ಪರಿಶೀಲಿಸಿದರು ಹಾಗೂ ಗಡಿ ಗ್ರಾಮವಾದ ದಳವಾಯಿ ಕೋಡಿಹಳ್ಳಿ ಸ್ಥಳೀಯರಿಂದ ಅಪಘಾತವಾಗುತ್ತಿರುವ ಬಗ್ಗೆ ಮಾಹಿತಿಯನ್ನು ಪಡೆದರು.

ಗಾಂಜಾ ಮಾರುತ್ತಿದ್ದ ವ್ಯಕ್ತಿ ಬಂಧನ

ಶ್ರೀರಂಗಪಟ್ಟಣ: ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆ ಕೆಆರ್‌ಎಸ್ ಪೊಲೀಸರು ದಾಳಿ ನಡೆಸಿ 15 ಸಾವಿರ ಮೌಲ್ಯದ 275 ಗ್ರಾಂ ಗಾಂಜಾ ವಶಪಡಿಸಿಕೊಂಡು ವ್ಯಕ್ತಿಯೋರ್ವನನ್ನು ಬಂಧಿಸಿದ್ದಾರೆ. ತಾಲೂಕಿನ ಬೆಳಗೊಳ ಗ್ರಾಮದ ಹುಚ್ಚೇಗೌಡ ಬೀದಿ ನಿವಾಸಿ ಮಂಜುನಾಥ್ ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಾ.ಎಚ್.ಎಸ್.ಲಲಿತಾಂಗ ಕುಮಾರ್ ನಿಧನ



ಪಾಂಡವಪುರ,ಏ.5– ತಾಲೂಕು ಜೈನ್ ಮಿಲನ್ ಅಧ್ಯಕ್ಷರು, ಸಮಾಜ ಸೇವಕರೂ ಆಗಿದ್ದ ಡಾ.ಎಚ್.ಎಸ್. ಲಲಿತಾಂಗ ಕುಮಾರ್ (75) ಅವರು ಶುಕ್ರವಾರ ಮಧ್ಯಾಹ್ನ ನಿಧನ ಹೊಂದಿದರು.

ಮೂಲತಃ ಕೆ.ಆರ್.ಪೇಟೆ ತಾಲೂಕಿನ ಹೊಸಹೊಳಲು ಗ್ರಾಮದವರಾಗಿದ್ದು ಇವರಿಗೆ ಇಬ್ಬರು ಪುತ್ರರಿದ್ದಾರೆ. ಆಯುರ್ವೇದ ವೈದ್ಯರಾಗಿ ಶ್ರೀಲಂಕಾ ಸರ್ಕಾರದಿಂದ ಚಿನ್ನದ ಪದಕ ಗಳಿಸಿದ್ದ ಎಚ್.ಎಸ್.ಎಲ್.ಕುಮಾರ್ ಅವರು ಕೆ.ಆರ್.ಪೇಟೆ ತಾಲೂಕಿನ ಬಸ್ತಿಹೊಸಕೋಟೆಯ ಜೈನ ಸಮಿತಿ ಅಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದ್ದರಲ್ಲದೆ, ಸಮಾಜ ಸೇವೆಯಲ್ಲೂ ತೊಡಗಿಸಿಕೊಂಡು ಸಂಘ ಸಂಸ್ಥೆಗಳಿಗೂ ನೆರವಾಗಿದ್ದರು. ಬೇಬಿ ಗ್ರಾಮದ ಶತಾಯುಷಿ ಶ್ರೀ ಮರಿದೇವರು ಸ್ವಾಮೀಜಿಗಳ ಆಪ್ತರಾಗಿ ಸೇವೆ ಸಲ್ಲಿಸಿದ್ದನ್ನು ಸ್ಮರಿಸಬಹುದು.

ಚಂದ್ರವನ ಆಶ್ರಮದ ಡಾ.ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಹಾಗೂ ಬೇಬಿಬೆಟ್ಟದ ಶ್ರೀ ಶಿವಬಸವ ಸ್ವಾಮೀಜಿ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸೇರಿದಂತೆ ಅನೇಕ ಗಣ್ಯರು ಡಾ.ಎಚ್.ಎಸ್.ಎಲ್. ಕುಮಾರ್ ಅವರ ಅಂತಿಮ ದರ್ಶನ ಪಡೆದು, ಸಂತಾಪ ಸೂಚಿಸಿದರು. ಮೃತರ ಅಂತ್ಯಕ್ರಿಯೆ ಪಟ್ಟಣದ ಸ್ಮಶಾನದಲ್ಲಿ ಶುಕ್ರವಾರ ಸಂಜೆ ನೆರವೇರಿತು.

ನಾರಾಯಣ ಸ್ವಾಮಿ



ಹಲಗೂರು : ಮಳವಳ್ಳಿ ತಾಲೂಕಿನ ಹಲಗೂರು ಗ್ರಾಮದ ನಿವಾಸಿ ನಾರಾಯಣ ಸ್ವಾಮಿ (85) ನಿಧನರಾದರು. ಮೃತರು ಪುತ್ರ ಗ್ರಾಪಂ ಸದಸ್ಯ ಕೃಷ್ಣ(ಹಂಸ) ಸೇರಿದಂತೆ ಮೂವರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದ ರುದ್ರಭೂಮಿಯಲ್ಲಿ ನೆರವೇರಿತು.



ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ನಾಗವಾಲ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸಿ. ನರೇಂದ್ರ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಅವರನ್ನು ಅಭಿನಂದಿಸಿ, ಶುಭಾಶಯ ಕೋರಲಾಯಿತು. ಇದೇ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯಾಧ್ಯಕ್ಷ ಹಿನಕಲ್ ಮಂಜು, ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಧನಗಳ್ಳಿ ಪ್ರವೀಣ್, ಇಲವಾಲ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕಮ್ಮರಳ್ಳಿ ಸಂತೋಷ್, ಕೆಪಿಸಿಸಿ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಪಡುವಾರಹಳ್ಳಿ ಹರೀಶ್, ಚಾಮುಂಡೇಶ್ವರಿ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಬೆಳವಾಡಿ ಮಂಜು, ಕಾಂಗ್ರೆಸ್ ಮುಖಂಡರಾದ ನಂಜನಗೂಡು ಪ್ರದೀಪ್, ನಾಗವಾಲ ಮಂಜು, ಜವರ ನಾಯಕ, ಶಿವು ಇತರರು ಉಪಸ್ಥಿತರಿದ್ದರು

ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣ

ಎನ್‌ಐಎಯಿಂದ ಬಿಜೆಪಿ ಕಾರ್ಯಕರ್ತನ ವಿಚಾರಣೆ

ಬೆಂಗಳೂರು, ಏ.5– ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ದಳ ಬಿಜೆಪಿ ಕಾರ್ಯಕರ್ತನೋರ್ವನನ್ನು ವಿಚಾರಣೆಗೊಳಪಡಿಸಿದೆ ಎಂದು ತಿಳಿದುಬಂದಿದೆ.

ಮೂಲಗಳ ಪ್ರಕಾರ ತೀರ್ಥಹಳ್ಳಿಯ ಬಿಜೆಪಿ ಕಾರ್ಯಕರ್ತ ಸಾಯಿ ಪ್ರಸಾದ್‌ನನ್ನು ಎನ್‌ಐಎ ಅಧಿಕಾರಿಗಳು ವಿಚಾರಣೆಗೆ ಕರೆದೊಯ್ದಿದ್ದು, ರಹಸ್ಯ ಸ್ಥಳದಲ್ಲಿ ವಿಚಾರಣೆಗೊಳಪಡಿಸಿದ್ದಾರೆ ಎಂದು ಹೇಳಲಾಗಿದೆ.

ಕಳೆದ ವಾರ ತೀರ್ಥಹಳ್ಳಿಯಲ್ಲಿ ಇಬ್ಬರು ಮುಸ್ಲಿಂ ಯುವಕರ ಮನೆ ಹಾಗೂ ಮೊಬೈಲ್ ಅಂಗಡಿ ಮೇಲೆ ಎನ್ ಐಎ ಅಧಿಕಾರಿಗಳು ದಾಳಿ ನಡೆಸಿ ಶೋಧ ನಡೆಸಿದ್ದರು. ತನಿಖೆ ವೇಳೆ ಇಬ್ಬರು ಮುಸ್ಲಿಂ ಯುವಕರ ಜೊತೆ ಸಾಯಿ ಪ್ರಸಾದ್ ಸಂಪರ್ಕದಲ್ಲಿದ್ದ ಹಿನ್ನೆಲೆಯಲ್ಲಿ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ಮಾರ್ಚ್ 1ರಂದು ವೈಟ್ ಫೀಲ್ಡ್‌ನಲ್ಲಿರುವ ರಾಮೇಶ್ವರಂ ಕೆಫೆಯಲ್ಲಿ ಸಂಭವಿಸಿದ್ದ ಐಇಡಿ ಸ್ಫೋಟದಲ್ಲಿ ಕನಿಷ್ಠ 9 ಮಂದಿ ಗಾಯಗೊಂಡಿದ್ದರು. ಕೇಂದ್ರ ಗೃಹ ಸಚಿವಾಲಯದ ಸೂಚನೆಯಂತೆ ಎನ್‌ಐಎ ಈ ಪ್ರಕರಣದ ತನಿಖೆಯನ್ನು ವಹಿಸಿಕೊಂಡಿತ್ತು.



ಬಾಬು ಜಗಜೀವನ್ ರಾಮ್ ಅವರ ಜನ್ಮ ದಿನಾಚರಣೆ ಅಂಗವಾಗಿ ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್ ಗೌಡ ಜಗಜೀವನ್ ರಾಮ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಈ ವೇಳೆ ರವಿ ಮಂಚೇಗೌಡನ ಕೊಪ್ಪಲು, ರಮೇಶ್, ರವಿ ರಾಜಕೀಯ, ಮಂಜುನಾಥ್ ಇತರರಿದ್ದರು

ಕಾರು ಬಾಡಿಗೆ ಪಡೆದು ಗಿರವಿ ಇಟ್ಟು ಕಿರುಕುಳ; ಕಾರು ಮಾಲೀಕ ಆತ್ಮಹತ್ಯೆ

ಮೈಸೂರು, ಏ.5– ಬಾಡಿಗೆ ಪಡೆದಿದ್ದ ಕಾರನ್ನು ಗಿರವಿ ಇಟ್ಟು ಎಷ್ಟೇ ಕೇಳಿದರೂ ಅದನ್ನು ಬಿಡಿಸಿಕೊಡದ ಕಾರಣದಿಂದ ಮನನೊಂದು ಕಾರು ಮಾಲೀಕ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜೀವ್‌ನಗರ 2ನೇ ಹಂತದ ನಿವಾಸಿ ಮುಜಾಯಿದ್ ಪಾಷಾ(50) ಬುಧವಾರ ರಾತ್ರಿ ತನ್ನ ಪತ್ನಿ ಹಾಗೂ ಮಕ್ಕಳನ್ನು ಹೊಸ ಬಟ್ಟೆ ತರಲು ಕಳುಹಿಸಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರ ಪತ್ನಿ, ಅಸ್ಗರ್ ಪಾಷಾ ಹಾಗೂ ಸಲ್ಲು ಎಂಬುವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಕಾರ್ ಡ್ರೈವಿಂಗ್ ಕೆಲಸ ಮಾಡಿಕೊಂಡಿದ್ದ ಪತಿ ಮುಜಾಯಿದ್ ಪಾಷಾ, ಕೆಲ ದಿನಗಳಿಂದ ಕೆಲಸಕ್ಕೆ ಹೋಗದೆ ಯಾವಾಗಲೂ ಬೇಸರದಲ್ಲಿ ಮನೆಯಲ್ಲೇ ಇರುತ್ತಿದ್ದರು. ನಾನು ವಿಚಾರಿಸಿದರೂ ಏನೂ ಹೇಳುತ್ತಿರಲಿಲ್ಲ. ಇನ್ನೋವಾ ಕಾರು ಎಲ್ಲಿದೆ? ಎಂದು ಕೇಳಿದಾಗ ಅಸ್ಗರ್ ಪಾಷಾ ಹಾಗೂ ಸಲ್ಲು ಕಾರನ್ನು ಬಾಡಿಗೆಗೆ ತೆಗೆದುಕೊಂಡು ಹೋಗಿ ಇನ್ನೊಬ್ಬರ ಬಳಿ ಗಿರವಿ ಇಟ್ಟಿದ್ದಾರೆ. ಎಷ್ಟು ಕೇಳಿದರೂ ಕಾರನ್ನು ವಾಪಸ್ಸು ಕೊಡುತ್ತಿಲ್ಲ. ಅಸ್ಗರ್‌ಗೆ ಹಲವು ಬಾರಿ ಹಣ ನೀಡಿದ್ದು ಅದನ್ನೂ ವಾಪಸ್ ನೀಡುತ್ತಿಲ್ಲ ಎಂದರು.

ಏ.3ರಂದು ರಾತ್ರಿ 8 ಗಂಟೆ ಸಮಯದಲ್ಲಿ ನನಗೆ 2 ಸಾವಿರ ರೂ. ಹಣ ನೀಡಿ, ಮನೆಗೆ ದಿನಸಿ ಹಾಗೂ ಮಕ್ಕಳಿಗೆ ಹಬ್ಬಕ್ಕೆ ಬಟ್ಟೆ ತೆಗೆದುಕೊಂಡು ಬಾ ಎಂದರು. ನನ್ನ ಮೊದಲ ಮಗ ನಮಾಜ್‌ಗೆ ಹೋಗಿದ್ದರಿಂದ ಎರಡನೇ ಮಗ ಹಾಗೂ ನನ್ನ ಅಕ್ಕನ ಜೊತೆ ಪ್ರಭಾ ಟಾಕೀಸ್ ಬಳಿಯ ಅಂಗಡಿಗೆ ಹೋಗಿದ್ದಾಗ ನನ್ನ ಪತಿ ಬೆಡ್ ರೂಂನಲ್ಲಿ ನೇಣು ಹಾಕಿಕೊಂಡಿದ್ದು, ಆಸ್ಪತ್ರೆಗೆ ಕರೆದೊಯ್ದಾಗ ಪರೀಕ್ಷಿಸಿದ ವೈದ್ಯರು ಅದಾಗಲೇ ಮೃತಪಟ್ಟಿರುವುದಾಗಿ ತಿಳಿಸಿದರು ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಮಕ್ಕಳಿಗೆ ಒಳ್ಳೆ ಅಭ್ಯಾಸ ರೂಢಿಸಿದರೆ ಮಹಾನ್ ವ್ಯಕ್ತಿಗಳಾಗುತ್ತಾರೆ

● ಶಿಕ್ಷಕರು, ಪೋಷಕರಿಗೆ ಶಿಕ್ಷಣ ತಜ್ಞ ಡಾ.ಗುರುರಾಜ್ ಕರ್ಜಗಿ ಕಿವಿಮಾತು ● ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಎರಡನೇ ವಾರ್ಷಿಕೋತ್ಸವ

ಮೈಸೂರು, ಏ.5(ಎಸ್‌ಬಿಡಿ)– ಪ್ರತಿಯೊಂದು ಮಗುವೂ 'ವಿಶ್ವ ಪ್ರಜೆ' ಎನ್ನುವುದು ಪೋಷಕರು ಹಾಗೂ ಶಿಕ್ಷಕರ ಅರಿವಿನಲ್ಲಿರಬೇಕು ಎಂದು ಶಿಕ್ಷಣ ತಜ್ಞ ಡಾ.ಗುರುರಾಜ್ ಕರ್ಜಗಿ ತಿಳಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ಶುಕ್ರವಾರ 'ಸಮಗ್ರ ಕರ್ನಾಟಕ, ಸಹೋದರ ಕರ್ನಾಟಕ' ಶೀರ್ಷಿಕೆಯಲ್ಲಿ ಆಯೋಜಿಸಿದ್ದ 'ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್' ಶಿಕ್ಷಣ ಸಂಸ್ಥೆಯ ಎರಡನೇ ವಾರ್ಷಿಕೋತ್ಸವವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ, ಮಾತನಾಡಿದರು.

ಮಕ್ಕಳಲ್ಲಿ ಒಳ್ಳೆಯ ಅಭ್ಯಾಸಗಳನ್ನು ಚಿಕ್ಕಂದಿನಿಂದಲೇ ರೂಢಿಸಬೇಕು. ನಿಮ್ಮ ಮಗು ನಿಮಗೆ ಮಾತ್ರ ಮಗುವಲ್ಲ, ಅದು ವಿಶ್ವ ಪ್ರಜೆ ಎನ್ನುವುದು ಅರಿವಿನಲ್ಲಿರಬೇಕು. ಒಳ್ಳೆಯ ಅಭ್ಯಾಸ ರೂಢಿಸಿದರೆ ಮಹಾನ್ ವ್ಯಕ್ತಿಗಳಾಗುತ್ತಾರೆ. ಸರಿಯಾಗಿ ಬೆಳೆಸದಿದ್ದರೆ ಚಾರ್ಲ್ಸ್ ಶೋಭರಾಜ್‌ನಂತಹ ಕುಖ್ಯಾತ ಅಪರಾಧಿಯೂ ಆಗಬಹುದು. ಆತ ಚಿಕ್ಕ ವಯಸ್ಸಿನಲ್ಲಿ ಎರಡು ಕೇಕ್ ಕದ್ದಾಗ ಆತನ ತಾಯಿ ಪೆಟ್ಟು ನೀಡಿ ತಿದ್ದಬೇಕಿತ್ತು. ಹಾಗೆ ಮಾಡದೆ ಬರೀ ಎರಡೇ ತಂದಿದ್ದೀಯಾ, ನಾಲ್ಕೈದು ತರಬಾರದಿತ್ತೇ ಎಂದು ಹೇಳಿದ್ದು, ಆತನ ದುಷ್ಕೃತ್ಯಕ್ಕೆ ಪ್ರೋತ್ಸಾಹ ಸಿಕ್ಕಂತಾಯ್ತು ಎಂದು ಎಚ್ಚರಿಕೆ ನೀಡಿದರು.

ಮಾತಿನ ಮೇಲೆ ನಿಗಾ ಇರಲಿ: ದೂರದಿಂದ ದಣಿದು ಬಂದಿದ್ದ ಅಜ್ಜ–ಅಜ್ಜಿಯ ಬಳಿ ಓಡಿಹೋದ ಮಗು 'ತಾತ ನೀವು ಯಾವಾಗ ವಾಪಸ್ ಹೋಗುತ್ತೀರಾ' ಎಂದು ಕೇಳುತ್ತದೆ. ಇದರಿಂದ ತಕ್ಷಣಕ್ಕೆ ಬೇಸರಿಸಿಕೊಂಡ ಅಜ್ಜ–ಅಜ್ಜಿ, ಈಗ ತಾನೇ ಬಂದಿದ್ದೇವೆ, ವಾಪಸ್ ಹೋಗುವ ಮಾತೇಕೆ ಎನ್ನುತ್ತಾರೆ ಅದಕ್ಕೆ ಮಗು 'ಹಂಗಾದರೆ ಒಂದು ತಿಂಗಳು ಕಿರಿಕಿರಿ ತಪ್ಪಿದ್ದಲ್ಲೆ' ಎನ್ನುತ್ತದೆ ಆದರೆ ಆ ಮಾತು ಮಗುವಿನ ಮನಸ್ಸಿನಿಂದ ಬಂದಿದ್ದಲ್ಲ. ಹಿಂದಿನ ರಾತ್ರಿ ಮಗುವಿನ ಅಪ್ಪ-ಅಮ್ಮನ ಜಗಳದಲ್ಲಿ ಕೇಳಿಸಿ ಕೊಂಡಿದ್ದು. ಪೋಷಕರೇ ಹೀಗಾದರೆ ಮಕ್ಕಳಿಗೆ ಒಳ್ಳೆಯದನ್ನು ಕಲಿಸುವವರು ಯಾರು?. ಮಕ್ಕಳ ಮುಂದೆ ಏನು ಮಾತನಾಡುತ್ತೇವೆ ಎನ್ನುವುದು ಬಹಳ ಮುಖ್ಯ ಎಂದರು.





ಮೈಸೂರಿನ ಕಲಾಮಂದಿರದಲ್ಲಿ ನಡೆದ 'ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್' ಸಂಸ್ಥೆಯ ಎರಡನೇ ವಾರ್ಷಿಕೋತ್ಸವವನ್ನು ಶಿಕ್ಷಣ ತಜ್ಞ ಡಾ.ಗುರುರಾಜ್ ಕರ್ಜಗಿ ಉದ್ಘಾಟಿಸಿದರು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಆರ್.ರಘು ಮತ್ತಿತರರು ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ ನೃತ್ಯ ಪ್ರದರ್ಶಿಸಿದ ಮಕ್ಕಳನ್ನು ಕಾಣಬಹುದು.

ಅತೀ ಮುದ್ದು ಬೇಡ

ಮಕ್ಕಳ ಮೇಲೆ ಪ್ರೀತಿ ಇರಬೇಕು, ಆದರೆ ಅದು ಅತೀ ಆಗಬಾರದು. ತುಂಬಾ ಮುದ್ದು ಮಾಡ ಬಾರದು. ಆರೇಳು ವರ್ಷವಾದರೂ ಊಟ–ತಿಂಡಿ ತಿನ್ನಿಸುವ, ತಾವೇ ಬ್ಯಾಗ್ ಹೊತ್ತುಕೊಂಡು ಹೋಗುವ ಅಗತ್ಯವಿಲ್ಲ. ಇದು ಅತೀಯಾಗಿ ಮುಂದೊಂದು ಮಗು ತಾನು ಕುಳಿತಲ್ಲಿಗೇ ಊಟ ತಂದುಕೊಡು ಎನ್ನುತ್ತದೆ. ಅತಿಯಾದ ಪ್ರೀತಿ ಹಾಳು ಮಾಡುತ್ತದೆ. ಒಂದು ಗಿಡ ನೇರವಾಗಿ ಬೆಳೆಯಲಿ ಎಂದು ಪಕ್ಕದಲ್ಲಿ ಕಡ್ಡಿ ನೆಡುತ್ತೇವೆ. ಅದರ ರಕ್ಷಣೆಗೆ ಸುತ್ತಲೂ ಬೇಲಿ ಹಾಕುತ್ತೇವೆ. ಹಾಗೆಯೇ ಮಕ್ಕಳನ್ನೂ ಚಿಕ್ಕ ವಯಸ್ಸಿನಲ್ಲೇ ನಿಯಂತ್ರಿಸದಿದ್ದರೆ ಅವರು ದೊಡ್ಡವರಾದ ಮೇಲೆ ಸಾಧ್ಯವಾಗುವುದಿಲ್ಲ. ಮಕ್ಕಳಿಗೆ ಸ್ಮಾರ್ಟ್‌ಫೋನ್ ಕೊಟ್ಟು ಹಾಳುಮಾಡಬೇಡಿ. ಮುಂದೆ ಮೊಬೈಲ್ ಬೇಕೇ ಬೇಕು ಎಂಬ ಮೊಂಡುತನ ಬೆಳೆಯುತ್ತದೆ. ಅದೇ ವಿಚಾರಕ್ಕೆ ಜಗಳವಾಗಿ ಕುಟುಂಬದ ನೆಮ್ಮದಿ ಹಾಳಾಗುತ್ತದೆ ಎಂದು ಕಿವಿಮಾತು ಹೇಳಿದರು.

ದೇವರ ನಂಬಿಕೆ ಬೇಕು: ಮಕ್ಕಳಿಗೆ ಅನುಭವದ ಮೂಲಕ ಕಲಿಸಬೇಕು. ಆಗ ಮಾತ್ರ ಕಲಿತದ್ದು ಜೀವನವಿಡೀ ನೆನಪಿರುತ್ತದೆ. ಮಾಡುವ ಕೆಲಸದಲ್ಲಿ ಶ್ರದ್ಧೆ ಅತ್ಯಗತ್ಯ. ನಾನು ಮಾಡೋ ಕೆಲಸದಿಂದ ನನಗೂ, ಪ್ರಪಂಚಕ್ಕೂ ಒಳ್ಳೆಯದಾಗ ಬೇಕೆಂಬ ಜಾಗ್ರತೆ ಇರಬೇಕು. ದೇವರಿದ್ದಾನೆ ಎಂದು ಖಂಡಿತವಾಗಿ ಹೇಳಿಕೊಡಬೇಕು. ಇದರಿಂದ ಯಶಸ್ಸು ಸಿಕ್ಕಾಗ ನಾನೇ ಮೇಲು ಎಂಬ ಅಹಂಕಾರ ಬರುವುದಿಲ್ಲ. ಹಾಗೆಯೇ ಸೋತು ಕಾಲೂರಿ ಕುಳಿತಾಗ ಮೇಲೊಂದು ಶಕ್ತಿ ಇದೆ, ಅದು ನನ್ನನ್ನು ಕಾಪಾಡುತ್ತದೆ ಎಂಬ ನಂಬಿಕೆ ಬರುತ್ತದೆ. ಪಾಠದಿಂದ ಎಲ್ಲವನ್ನೂ ಕಲಿಸಲು ಸಾಧ್ಯವಿಲ್ಲ. ಪೋಷಕರು ಹಾಗೂ ಶಿಕ್ಷಕರು ತಾವು ನಡೆದು ತೋರಿಸಬೇಕು ಎಂದು ಸಲಹೆ ನೀಡಿದರು.

ಕೆಲ ವರ್ಷಗಳಲ್ಲಿ ನಂ.1: ಪಿಹೆಚ್.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು ತುಂಬಾ ಸುಲಭ. ಆದರೆ ಪೂರ್ವ ಪ್ರಾಥಮಿಕ(ಪ್ರೀ ಪ್ರೈಮರಿ) ಮಕ್ಕಳಿಗೆ ಕಲಿಸುವುದು ಸವಾಲಿನ ಕೆಲಸ. 'ನಿದ್ದೆ ಮಾಡುವಾಗ ಏಕೆ ಕಣ್ಣು ಮುಚ್ಚಬೇಕು' ಎನ್ನುವಂತಹ ಮಕ್ಕಳ ಪ್ರಶ್ನೆಗಳಿಗೆ ವೈಜ್ಞಾನಿಕ ನೆಲೆಗಟ್ಟಿನ ಹೊರತಾಗಿ ಅರ್ಥ ಆಗುವ ರೀತಿ ಉತ್ತರಿಸಬೇಕು. 'ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ, ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ' ಎಂಬ ಡಿವಿಜಿ ಅವರ ಸಾಲಿನಂತೆ, ಪುಸ್ತಕಕ್ಕಿಂತ ಮಸ್ತಕದ ಅರಿವು ಶಾಶ್ವತ. ಈ ನಿಟ್ಟಿನಲ್ಲಿ ನೈಪುಣ್ಯ ಶಾಲೆಯಲ್ಲಿ ಬಿತ್ತನೆ ಮಾಡಿ, ಬೆಳೆಯುವುದನ್ನು ಪ್ರಾಯೋಗಿಕವಾಗಿ ಕಲಿಸಿರುವುದನ್ನು ತಿಳಿದು ಖುಷಿ ಆಯಿತು. ಸಲಹಾ ಸಮಿತಿ ಸದಸ್ಯನಾಗಿ ಈ ಶಾಲೆಯ ಜೊತೆಗಿರಲು ಸಂತೋಷವಾಗುತ್ತಿದೆ. 2–3 ವರ್ಷದಲ್ಲಿ ಈ ಶಾಲೆ ಅಗ್ರಪಂಕ್ತಿ ಅಲಂಕರಿಸುವ ವಿಶ್ವಾಸವಿದೆ ಎಂದರು.


ಸಂಸ್ಕೃತಿ ಅನಾವರಣ: ವಾರ್ಷಿಕೋತ್ಸವದ ಸಂಭ್ರಮದ ಜೊತೆಗೆ ಸಂಸ್ಕೃತಿಯ ಅನಾವರಣವಾಯಿತು. ವೀರಗಾಸೆ, ಕಂಸಾಳೆ, ಕೋಲಾಟ, ಭರತನಾಟ್ಯ ಸೇರಿದಂತೆ ನಾಡಿನ ಎಲ್ಲಾ ಕಲಾಪ್ರಕಾರಗಳನ್ನೂ ಶಾಲಾ ಮಕ್ಕಳು ಕಣ್ಣಿಗೆ ಕಟ್ಟಿದರು. ನೆರೆದಿದ್ದ ಪೋಷಕರು ಹಾಗೂ ಅವರ ಸಂಬಂಧಿಕರು, ಶಿಕ್ಷಕರು ಪುಟ್ಟ ಮಕ್ಕಳ ಪ್ರತಿಭೆಯನ್ನು ಆಸ್ವಾದಿಸಿ, ಸಂಭ್ರಮಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಕಾಡೆಮಿಕ್ ಡೀನ್ ವಿಜಯಾ ಅಯ್ಯರ್, ಪ್ರಾಂಶುಪಾಲೆ ಶೋಭಿತಾ ಎಸ್.ಆರಾಧ್ಯ, ಪೂರ್ವ ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ಭಾವನಾ ಶ್ರೀಕಾಂತ್ ಮತ್ತಿತರರು ಉಪಸ್ಥಿತರಿದ್ದರು.

> ಮಕ್ಕಳ ಆಸಕ್ತಿ ವಲಯವನ್ನು ಗುರುತಿಸಿ ಅದನ್ನು ಸಕಾರಾತ್ಮಕವಾಗಿ ಬೆಳೆಸಬೇಕು. ಇದರಲ್ಲಿ ಪೋಷಕರು ಹಾಗೂ ಶಿಕ್ಷಣ ಸಂಸ್ಥೆಯ ಜವಾಬ್ದಾರಿ ಸಮಾನವಾಗಿದೆ. ಮೊಬೈಲ್ ಮಾಹಿತಿ ಕೋಶವಷ್ಟೇ. ಪುಸ್ತಕ ಜ್ಞಾನ ಬಂಡಾರ. ಮಕ್ಕಳ ಬುದ್ಧಿಗೆ ಮಂಕು ಬರಿಸುವ ಸ್ಮಾರ್ಟ್ ಫೋನ್‌ಗಳನ್ನು ದೂರವಿಡಿ. ಮಕ್ಕಳು ಶ್ರೇಷ್ಠ ಗುಣಗಳನ್ನು ರೂಢಿಸಿಕೊಂಡು ಈ ದೇಶದ ಶಕ್ತಿಯಾಗಿ ಬೆಳೆಯಬೇಕು. ಪ್ರತಿಯೊಂದು ಮಗುವಿನಲ್ಲೂ ಒಂದಿಲ್ಲೊಂದು ಪ್ರತಿಭೆ ಸುಪ್ತವಾಗಿರುತ್ತದೆ. ಶಿಕ್ಷಣದ ಜೊತೆಗೆ ಸುಪ್ತ ಪ್ರತಿಭೆಗೆ ನೀರೆರೆದು ಪೋಷಿಸುವುದು ನಮ್ಮ ಸಂಸ್ಥೆ ಉದ್ದೇಶ.
>
> –ಆರ್.ರಘು, ಸಂಸ್ಥಾಪಕ ಅಧ್ಯಕ್ಷ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್

ವೀರಶೈವ ಲಿಂಗಾಯತ ವಧು–ವರರ ಸಮಾವೇಶ

ಮೈಸೂರು, ಏ. 5– ಮೈಸೂರಿನ ಉತ್ತರಾದಿ ಮಠದ ರಸ್ತೆಯಲ್ಲಿರುವ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಏ. 28 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆವರೆಗೆ ವೀರಶೈವ ಲಿಂಗಾಯಿತ ವಧುವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಏ. 27 ರೊಳಗೆ ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ. 9686205346 ಸಂಪರ್ಕಿಸಬಹುದು.



ಮದ್ದೂರಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ರೋಡ್ ಶೋ

ಮಂಡ್ಯವನ್ನು ಅಭಿವೃದ್ಧಿಯಲ್ಲಿ ಮಾದರಿ ಕ್ಷೇತ್ರವಾಗಿಸುವ ಭರವಸೆ





ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಮದ್ದೂರು ತಾಲೂಕಿನ ವಿವಿಧ ಗ್ರಾಮಗಳಲ್ಲಿ ರೋಡ್ ಶೋ ನಡೆಸಿ ಮತಯಾಚನೆ ಮಾಡಿದರು

ಮದ್ದೂರು, ಏ.5– ಮಂಡ್ಯ ಜಿಲ್ಲೆಯಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾರ್ಯಗಳು ಇತರೆ ಲೋಕಸಭಾ ಕ್ಷೇತ್ರಗಳಿಗೆ ಮಾದರಿಯಾಗಬೇಕು. ರಾಜಕೀಯವಾಗಿ ಮಾತ್ರವಲ್ಲ ಅಭಿವೃದ್ಧಿ ವಿಚಾರದಲ್ಲಿ ಕೂಡ ಮಂಡ್ಯ ಹೆಸರು ಇಂಡಿಯಾದ್ಯಂತ ಕೇಳಬೇಕು. ಮಂಡ್ಯವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡುವುದೇ ನನ್ನ ಗುರಿ ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಹೇಳಿದರು.

ಮದ್ದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರೋಡ್ ಶೋ ಮೂಲಕ ಚುನಾವಣಾ ಪ್ರಚಾರ ನಡೆಸುತ್ತಿದ್ದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ಮಂಡ್ಯ ಜಿಲ್ಲೆ ಪ್ರಾಕೃತಿಕವಾಗಿ, ರಾಜಕೀಯವಾಗಿ ಸಾಕಷ್ಟು ಹೆಸರುವಾಸಿ. ಜಿಲ್ಲೆಯಲ್ಲಿ ಕೃಷಿಯೇ ಜೀವಾಳ. ಈ ಭಾಗದ ರೈತರ ಕಲ್ಯಾಣಕ್ಕೆ ಕಂಕಣಬದ್ಧನಾಗಿದ್ದೇನೆ. ಜಿಲ್ಲೆಯಲ್ಲಿ ಸಾಕಷ್ಟು ಪ್ರವಾಸಿ ತಾಣಗಳಿದ್ದು ಅವುಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಪಡಿಸಿ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಸಿಕೊಡಬೇಕೆಂಬ ಕನಸು ಹೊಂದಿದ್ದೇನೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷ ಬಡವರ ದೀನದಲಿತರ ಪರ. ಎಲ್ಲಾ ವರ್ಗದವರನ್ನು ಒಟ್ಟಿಗೆ ಕೊಂಡೊಯ್ಯುವ ಪಕ್ಷ. ಉದ್ಯೋಗ ಸೃಷ್ಟಿ, ಸಾಮಾಜಿಕ ನ್ಯಾಯ, ಆರೋಗ್ಯ ಸೇವೆ ಸೇರಿದಂತೆ ರಾಷ್ಟ್ರದ ಜನತೆಯ ಕಲ್ಯಾಣ ಬಯಸಿ 25 ಭರವಸೆಗಳನ್ನು ಒಳಗೊಂಡ ಪ್ರಣಾಳಿಕೆಯನ್ನು ಕಾಂಗ್ರೆಸ್ ಪಕ್ಷ ಬಿಡುಗಡೆ ಮಾಡಿದೆ. ಮತದಾರರು ಪ್ರಜ್ಞಾವಂತರಿದ್ದಾರೆ. ಕಾಂಗ್ರೆಸ್‌ನ ಜನಪರ ಕಾರ್ಯಕ್ರಮಗಳಿಗೆ ಮನ್ನಣೆ ನೀಡಲಿದ್ದು ನನ್ನನ್ನು ಆಶೀರ್ವದಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿರುಬಿಸಿಲಿನಲ್ಲೂ ಜನಸ್ತೋಮ

ಹಳ್ಳಿಗಳಲ್ಲಿ ರೋಡ್ ಶೋ ನಡೆಸಿದ ಸಂದರ್ಭದಲ್ಲಿ ಎಲ್ಲೆಡೆ ನೆರೆದಿದ್ದ ಜನಸ್ತೋಮ ಕಂಡು ಕಾಂಗ್ರೆಸ್ ಕಾರ್ಯಕರ್ತರಲ್ಲಿ ಉತ್ಸಾಹ ಇಮ್ಮಡಿಗೊಂಡಿತ್ತು ಕಾರ್ಯಕರ್ತರು ಅಭ್ಯರ್ಥಿ ಮೇಲೆ ಹೂ ಮಳೆಯನ್ನೇ ಸುರಿಸಿದರು. ಸುಡುಬಿಸಲನ್ನು ಲೆಕ್ಕಿಸದೇ ನೂರಾರು ಸಂಖ್ಯೆಯಲ್ಲಿ ನೆರೆದಿದ್ದ ಜನರು ಅಭ್ಯರ್ಥಿಯನ್ನು ಕಂಡು ಕೈ ಕುಲುಕಿ ಬೆಂಬಲ ಸೂಚಿಸಿದರು

ಮದ್ದೂರು ತಾಲೂಕಿನಲ್ಲಿ ರೋಡ್ ಶೋ: ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಮದ್ದೂರು ವಿಧಾನಸಭಾ ಕ್ಷೇತ್ರದಾದ್ಯಂತ ಮತಪ್ರಚಾರ ನಡೆಸಿದರು.

ಗೊಲ್ಲರದೊಡ್ಡಿಯ ಜುಂಜಪ್ಪ ದೇವರಿಗೆ ಪೂಜೆ ಸಲ್ಲಿಸಿ ಚುನಾವಣಾ ಪ್ರಚಾರ ಆರಂಭಿಸಿದರು. ಮಲ್ಲನಕುಪ್ಪೆ, ಹೂತಗೆರೆ, ಕೆಸ್ತೂರು, ಆತಗೂರು, ಕದಲೂರು, ಹೆಮ್ಮನಹಳ್ಳಿ, ನಿಡಘಟ್ಟ, ಆಲೂರು, ಹೊನ್ನಲಗೆರೆ, ಬೆಳ್ಳೂರು, ಕೊಳಗೆರೆ, ಗೆಜ್ಜಲಗೆರೆ, ವಳಗೆರಹಳ್ಳಿ, ಹೊಸಕೆರೆ, ನಿಲುವಾಗಿಲು, ಬೆಸಗರಹಳ್ಳಿ, ಚಾಮನಹಳ್ಳಿ ಸೇರಿದಂತೆ ಮದ್ದೂರು ತಾಲೂಕಿನಾದ್ಯಂತ ಮತಯಾಚಿಸಿದರು.


ಮದ್ದೂರು ಶಾಸಕ ಉದಯ್, ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕದಲೂರು ರಾಮಕೃಷ್ಣ, ಶಿವಲಿಂಗೇಗೌಡ ಕೆಪಿಸಿಸಿ ವಕ್ತಾರ ತೈಲೂರು ಸತ್ಯಾನಂದ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಚಿದಂಬರಂ ಸೇರಿದಂತೆ ಹಲವು ಮುಖಂಡರು, ಕಾರ್ಯಕರ್ತರು ಜೊತೆಯಲ್ಲಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಪರ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮತಯಾಚನೆ

ಮೈಸೂರು, ಏ.5(ಎಂಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರವಾಗಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮತಬೇಟೆ ನಡೆಸಿದರು.

ಕೆ.ಆರ್.ವಿಧಾನಸಭಾ ಕ್ಷೇತ್ರದ ಕುರುಬಾರಹಳ್ಳಿಯ ಮನೆ ಮನೆಗೂ ತೆರಳಿದ ಅವರು, ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡುವಂತೆ ಕೋರಿದರು. ಈ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ದೇಶದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದು ಅನಿವಾರ್ಯವಾಗಿದೆ. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ರಾಜ್ಯದ ಜನತೆಗೆ ನೆಮ್ಮದಿ ಜೀವನ ನಡೆಸಲು ಸಹಕಾರಿಯಾಗಿದ್ದು, ದೇಶದ ಜನತೆ ನೆಮ್ಮದಿಯಿಂದ ಜೀವನ ನಡೆಸಲು ದೇಶದಲ್ಲಿಯೂ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಬೇಕು. ಈ ನಿಟ್ಟಿನಲ್ಲಿ ನಮ್ಮ ಅಭ್ಯರ್ಥಿ ಎಂ.ಲಕ್ಷ್ಮಣ ಅವರು ಗೆಲ್ಲಲ್ಲೇಬೇಕಿದೆ ಎಂದರು.

ಈ ವೇಳೆ ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಮಾಹಿತಿಯುಳ್ಳ ಕರಪತ್ರಗಳನ್ನು ವಿತರಣೆ ಮಾಡಲಾಯಿತು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಪ್ರದೀಪ್ ಕುಮಾರ್, ಮುಖಂಡರಾದ ಆರ್.ಹೆಚ್.ಕುಮಾರ್ ಈಶ್ವರ್ ಚಕ್ಕಡಿ, ಅಪ್ಪುಗೌಡ, ಸೋಮು, ರವಿ, ಧನಂಜಯ, ಜೆ.ಪ್ರಕಾಶ್ ಮತ್ತಿತರು ಉಪಸ್ಥಿತರಿದ್ದರು.



ಕಾಂಗ್ರೆಸ್ ಪರ ಪ್ರಚಾರ ಮಾಡ್ತೀನಿ, ಬಿಜೆಪಿಯವರ ಕೈಯ್ಯಲ್ಲಿ ಏನ್ ಮಾಡೋಕಾಗುತ್ತೋ ಮಾಡಲಿ...!

ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ರೆಬೆಲ್ ಡೈಲಾಗ್!!



ಬೆಂಗಳೂರು, ಏ.5– ನನ್ನ ಕ್ಷೇತ್ರಕ್ಕೆ ಯಾರು ಸಹಾಯ ಮಾಡುತ್ತಾರೋ ಅವರಿಗೆ ಬೆಂಬಲ ನೀಡುತ್ತೇನೆ. ಅವರ ಕೈಯ್ಯಲ್ಲಿ ಏನು ಮಾಡೋಕಾಗುತ್ತೋ ಮಾಡಲಿ ಎಂದು ಶಾಸಕ ಎಸ್.ಟಿ.ಸೋಮಶೇಖರ್ ನೇರವಾಗಿ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ ಮಾಡುವ ಘೋಷಣೆ ಮಾಡಿದ್ದಾರೆ.

ಕೆಂಗೇರಿಯಲ್ಲಿ ಇಂದು ಕಾರ್ಯಕರ್ತರ ಸಭೆ ನಡೆಸಿದ ನಂತರ ಮಾತನಾಡಿದ ಅವರು, ಚಿಕ್ಕಮಗಳೂರಿನಿಂದ ಗೋ ಬ್ಯಾಕ್ ಎಂದು ಹೊರ ಹಾಕಿದವರನ್ನು ತಂದು ಇಲ್ಲಿ ಚುನಾವಣೆಗೆ ನಿಲ್ಲಿಸಿದ್ದಾರೆ. ಅಂಥವರನ್ನು ಬೆಂಗಳೂರಿನವರು ಸ್ವಾಗತ ಮಾಡಬೇಕಾ ಎಂದು ಪ್ರಶ್ನಿಸಿದರು.

ಬಿಜೆಪಿಯಿಂದ ಲೋಕಸಭಾ ಅಭ್ಯರ್ಥಿ ಘೋಷಣೆಯಾಗಿದೆ. ಇದುವರೆಗೂ ಯಾರೊಬ್ಬರೂ ನನ್ನನ್ನು ಬೆಂಬಲ ಕೊಡಿ ಎಂದು ಕೇಳಿಲ್ಲ. ನನ್ನ ಕ್ಷೇತ್ರದಲ್ಲಿ 7ರಿಂದ 8 ಬಾರಿ ಪ್ರಚಾರ ಮಾಡಿದ್ದಾರೆ. ಯಾರೂ ನನ್ನನ್ನು ಸಂಪರ್ಕಿಸಿಲ್ಲ. ಬಿಜೆಪಿಯವರು ಏನೆಲ್ಲಾ ಅವಮಾನ ಮಾಡಿದ್ದಾರೆ ಎಂಬುದು ನನಗೆ ಗೊತ್ತಿದೆ. ಮೊನ್ನೆ ಅಮಿತ್ ಶಾ ಬಂದ್ರೂ ಕೂಡ ನನಗೆ ಆಹ್ವಾನ ನೀಡಿಲ್ಲ. ಹಾಗಾಗಿ ಇವತ್ತು ಕಾರ್ಯಕರ್ತರ ಸಭೆ ಕರೆದಿದ್ದೇನೆ. ನಮ್ಮ ಅವಶ್ಯಕತೆ ಇಲ್ಲದವರ ಬಳಿ ನಾವೇಕೆ ಹೋಗಬೇಕು ಎಂದು ಪ್ರಶ್ನಿಸಿದರು.

ಕಾಂಗ್ರೆಸ್‌ಗೆ ಮರು ಸೇರ್ಪಡೆಯಾಗುತ್ತೀರಾ ಎಂಬ ಪ್ರಶ್ನೆಗೆ, ಎಲ್ಲವನ್ನೂ ಕಾದು ನೋಡಿ. ಈಗ ಬಿಜೆಪಿಯ ಯಾರು ಬಂದು ಕೇಳಿದರೂ ನಾನು ಬೆಂಬಲ ನೀಡುವುದಿಲ್ಲ. ನನಗೆ ಯಾವ ಹೈಕಮಾಂಡ್ ಕೂಡ ಇಲ್ಲ. ನನ್ನ ಕ್ಷೇತ್ರದ ಮತದಾರರೇ ನನ್ನ ಹೈಕಮಾಂಡ್. ಮತದಾರರ ತೀರ್ಮಾನವೇ ನನ್ನ ಅಂತಿಮ ನಿರ್ಧಾರ. ಕಾಂಗ್ರೆಸ್ ಅಭ್ಯರ್ಥಿ ಪರ ಮನೆ ಮನೆಗೆ ತೆರಳಿ ಪ್ರಚಾರ ಮಾಡುತ್ತೇನೆ ಎಂದು ತಿಳಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ಡಾ.ಶುಶ್ರುತ್‌ಗೌಡ ನೇಮಕ



ಮೈಸೂರು, ಏ. 5– ಕಾಂಗ್ರೆಸ್ ಪಕ್ಷದ ಅಮೂಲಾಗ್ರ ಸಂಘಟನೆಗೆ ಅವಿರತವಾಗಿ ಶ್ರಮಿಸುತ್ತಿರುವ ಡಾ.ಶುಶ್ರುತ್‌ಗೌಡ ಅವರಿಗೆ ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ)ಪ್ರಧಾನ ಕಾರ್ಯದರ್ಶಿಯಾಗಿ ಮಹತ್ವದ ಜವಾಬ್ದಾರಿ ಒಲಿದು ಬಂದಿದೆ.

ಡಾ.ಶುಶ್ರೂತಗೌಡ ನರರೋಗ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಮೈಸೂರಿನ ಡಾ.ಎಚ್.ಸಿ.ವಿಷ್ಣುಮೂರ್ತಿ ಹಾಗೂ ಕೆ.ಜಿ.ರೇಖಾ ಮೂರ್ತಿ ದಂಪತಿಯ ಪುತ್ರನಾಗಿರುವ ಡಾ.ಶುಶ್ರೂತಗೌಡ ತಂದೆಗೆ ತಕ್ಕ ಮಗನಾಗಿ ಹೆಸರು ಮಾಡಿ ಚಿಕ್ಕವಯಸ್ಸಿನಲ್ಲೇ ಅಪಾರ ಕೀರ್ತಿ ಗಳಿಸಿದ್ದಾರೆ. ಎಂ.ಬಿ.ಪಾಟೀಲ್ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ವ್ಯಾಸಂಗ ಮುಗಿಸಿ, ಚೆನ್ನೈನಲ್ಲಿರುವ ಸ್ಟ್ಯಾನ್ಲಿ ಮೆಡಿಕಲ್ ಕಾಲೇಜು ಮತ್ತು ಅಮೆರಿಕಾದ ಯೂನಿವರ್ಸಿಟಿ ಆಫ್ ಫ್ಲೋರಿಡಾದಲ್ಲಿ ನರರೋಗದ ಬಗ್ಗೆ ಅತ್ಯುನ್ನತ ವಿದ್ಯಾಭ್ಯಾಸ ಪಡೆದು ಪ್ರತಿಭಾವಂತರಾಗಿದ್ದಾರೆ. ಅಮೆರಿಕಾದ ವಿವಿಧ ಯೂನಿವರ್ಸಿಟಿಗಳಲ್ಲಿ ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿದ್ದರು. ಈ ಹಿನ್ನೆಲೆಯಲ್ಲಿ ಇವರ ಸಾಧನೆಯನ್ನು ಗುರುತಿಸಿ ಯೂನಿವರ್ಸಿಟಿ ಆಫ್ ಫ್ಲೋರಿಡಾದಿಂದ ಡಾ.ಕೆನತ್ ಹೆಲ್ ಮ್ಯಾನ್ ರಿಸರ್ಚ್ ಅವಾರ್ಡ್ ಸೇರಿದಂತೆ ಪ್ರತಿಷ್ಠಿತ ಯೂನಿವರ್ಸಿಟಿಗಳಿಂದ ಅತ್ಯುನ್ನತ ಪ್ರಶಸ್ತಿಗಳನ್ನು ಪಡೆದ ಇವರು ಹೆಸರಾಂತ ನರರೋಗ ತಜ್ಞರಲ್ಲಿ ಒಬ್ಬರಾಗಿದ್ದಾರೆ. ಎಐಸಿಸಿ ಮಾಜಿ ಅಧ್ಯಕ್ಷ, ಯುವ ನಾಯಕ ರಾಹುಲ್‌ಗಾಂಧಿ ಅವರು ಕನ್ಯಾಕುಮಾರಿಯಿಂದ ಕಾಶ್ಮೀರ ತನಕ ನಡೆಸಿದ ಭಾರತ್ ಜೋಡೋ ಯಾತ್ರೆಯಲ್ಲಿ ಸಂಪೂರ್ಣವಾಗಿ ಪಾಲ್ಗೊಂಡು ಹಿರಿಯ ನಾಯಕರನ್ನು ಆಕರ್ಷಿಸುವ ಜತೆಗೆ ಹಳ್ಳಿಗಳನ್ನು ಅಭಿವೃದ್ಧಿಪಡಿಸಲು ತಾವು ಕಂಡಿರುವ ಕನಸುಗಳ ಬಗ್ಗೆ ಮನವರಿಕೆ ಮಾಡಿದ ಫಲವಾಗಿ ಇಂದು ಎಲ್ಲರ ಗಮನ ಸೆಳೆದಿದ್ದಾರೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿಗಳ ಆಯ್ಕೆಪಟ್ಟಿಯ ಸಾಲಿನಲ್ಲಿ ಕೂಡ ಇವರ ಹೆಸರು ಕೇಳಿ ಬರುತ್ತಿತ್ತು. ಈಗ ಇವರಿಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸ್ಥಾನ ದೊರೆತ್ತಿರುವುದು ಇವರ ಬೆಂಬಲಿಗರಲ್ಲಿ ಸಂತಸವನ್ನು ಉಂಟು ಮಾಡಿದೆ.

ಸದೃಢ ಭಾರತ ನಿರ್ಮಾಣಕ್ಕೆ ತಪ್ಪದೆ ಮತದಾನ ಮಾಡಿ



ಮೈಸೂರು ಏ.5(ಎಸ್‌ಪಿಎನ್)– ಸದೃಢ ಭಾರತ ನಿರ್ಮಾಣಕ್ಕೆ ಪ್ರತಿಯೊಬ್ಬ ಮತದಾರರು ಕಡ್ಡಾಯ ಮತದಾನ ಮಾಡುವಂತೆ ಜಿಲ್ಲಾ ಪಂಚಾಯತ್ ಸಿಇಓ ಕೆ.ಎಂ. ಗಾಯಿತ್ರಿ ಮನವಿ ಮಾಡಿದರು.

ಮೈಸೂರು ಭಾರತೀಯ ಆಹಾರ ಸಂಶೋಧನಾ ಕೇಂದ್ರದ ಆವರಣದಲ್ಲಿ ಜಿಲ್ಲಾ ಸ್ವೀಪ್ ಕಾರ್ಯಕ್ರಮದಡಿ ಸಿಎಫ್‌ಟಿಆರ್‌ಐ ಸಿಬ್ಬಂದಿಗಳಿಗೆ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ನಗರ ಪ್ರದೇಶದ ಜನರು ಹೆಚ್ಚಾಗಿ ಮತದಾನ ಮಾಡುವುದಿಲ್ಲ ಎಂಬ ಆರೋಪದಿಂದ ಮುಕ್ತರಾಗಬೇಕಾದರೆ ಇಲ್ಲಿನ ವಿದ್ಯಾವಂತ ಮತದಾರರು ಮತದಾನ ಮಾಡಬೇಕು ಎಂದು ತಿಳಿಸಿದರು.

ಕೇಂದ್ರ ಚುನಾವಣಾ ಆಯೋಗವು ಪ್ರತಿ ಚುನಾವಣೆಯಲ್ಲೂ ಸುಧಾರಣೆ ತಂದು, ಸುಲಭ ಮತದಾನಕ್ಕೆ ಅನುವು ಮಾಡಿಕೊಡುತ್ತಿದೆ. ಸರ್ಕಾರಿ ನೌಕರರಲ್ಲಿ ಮತದಾನದ ಪ್ರಮಾಣ ಕಡಿಮೆಯಾಗಿದೆ. ಈ ಬಾರಿ ಎಲ್ಲರೂ ಮತದಾನ ಮಾಡಿ ಸದೃಢ ಭಾರತ ನಿರ್ಮಾಣಕ್ಕೆ ಮುಂದಾಗಬೇಕೆಂದು ಕರೆ ನೀಡಿದರು. ಬಳಿಕ ಕಡ್ಡಾಯ ಮತದಾನದ ಕುರಿತು ಸಿಎಫ್‌ಟಿಆರ್‌ಐ ಸಿಬ್ಬಂದಿಗೆ ಪ್ರಮಾಣ ವಚನ ಬೋಧಿಸಿದರು.

ಸಿಎಫ್‌ಟಿಆರ್‌ಐ ನಿರ್ದೇಶಕಿ ಅನ್ನಪೂರ್ಣ ಮಾತನಾಡಿದರು. ಸಂಸ್ಥೆಯ ಆಡಳಿತಾಧಿಕಾರಿ ಬಿ.ಎಸ್.ರಾಮ್ ಪ್ರಸಾದ್, ಸ್ವೀಪ್ ಸಹಾಯಕ ನೋಡಲ್ ಅಧಿಕಾರಿ ಶಾಂತಾ, ಮಹಾನಗರ ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕೆಸರೆ ಕುರಿಮಂಡಿ, ಗಣೇಶ್‌ನಗರ, ವೀರನಗೆರೆಯಲ್ಲಿ ಯದುವೀರ್ ಮತಯಾಚನೆ

ಮನೆ ಮನೆ ಬಾಗಿಲಿಗೆ ಬಂದ ಮೈಸೂರು ಮಹಾರಾಜರ ಕುಡಿಗೆ ಭವ್ಯ ಸ್ವಾಗತ



ಮೈಸೂರಿನ ಕೆಸರೆ ಕುರಿಮಂಡಿ, ಗಣೇಶ್‌ನಗರ, ವೀರನಗೆರೆಯಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್, ಪಾದಯಾತ್ರೆ ನಡೆಸಿ ಮತಯಾಚಿಸಿದರು.

ಮೈಸೂರು, ಏ.5(ಎಂಕೆ)– ನಗರದ ಕೆಸರೆಯ ಕುರಿಮಂಡಿ, ಗಣೇಶ್‌ನಗರ ಹಾಗೂ ವೀರನಗೆರೆಯಲ್ಲಿ ಶುಕ್ರವಾರ ಪಾದಯಾತ್ರೆ ನಡೆಸಿದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವಿಕಸಿತ ಭಾರತ ನಿರ್ಮಾಣಕ್ಕೆ ಕೈಜೋಡಿಸುವಂತೆ ಮನವಿ ಮಾಡಿದರು.

ಸಂಜೆ ವೇಳೆಗೆ ಕುರಿಮಂಡಿ ವೃತ್ತಕ್ಕೆ ಯದುವೀರ್ ಆಗಮಿಸುತ್ತಿದ್ದಂತೆ ಪುಷ್ಪ ವೃಷ್ಟಿ ಮೂಲಕ ಪೂರ್ಣಕುಂಭ ಸ್ವಾಗತ ಕೋರಲಾಯಿತು. ಬಳಿಕ ಪಾದ ಯಾತ್ರೆ ಆರಂಭಿಸಿದ ಅವರು, ಕುರಿಮಂಡಿಯ ಪ್ರಮುಖ ಬೀದಿಗಳಲ್ಲಿ ಪಾದಯಾತ್ರೆ ನಡೆಸಿ, ಮತದಾರರಲ್ಲಿ ಕೈ ಮುಗಿದು ಬೆಂಬಲ ನೀಡುವಂತೆ ಮನವಿ ಮಾಡಿದರು.

ನಂತರ ಗಣೇಶ್‌ನಗರದ ಪ್ರಮುಖ ಬೀದಿಗಳಲ್ಲಿ ಮಿಂಚಿನ ಸಂಚಾರ ನಡೆಸಿ, ವೀರನಗೆರೆಯಲ್ಲಿ ದೊರೆತ ಅದ್ಧೂರಿ ಸ್ವಾಗತದೊಂದಿಗೆ ಉತ್ಸಾಹದಿಂದ ಮತ ಬೇಟೆ ನಡೆಸಿದರು. ವೀರನಗೆರೆಯ ಬೀದಿ ಬೀದಿಯಲ್ಲಿ ಸಂಚರಿಸಿದ ಅವರು, ಪ್ರತಿ ಮನೆ ಮನೆ ಬಾಗಿಲಿಗೆ ತೆರಳಿ ಮತ ನೀಡಿ ಜಯಶೀಲರನ್ನಾಗಿ ಮಾಡಿ ಎಂದು ಕೋರಿದರು.

ಬಳಿಕ ಮತದಾರನ್ನುದ್ದೇಶಿಸಿ ಮಾತನಾಡಿದ ಅವರು, ತಮ್ಮ ಗ್ರಾಮಕ್ಕೆ ಆತ್ಮೀಯ ಸ್ವಾಗತ ಕೋರಿದ್ದೀರಿ. ಭಾರತ ಅಭಿವೃದ್ಧಿಗಾಗಿ ನಾವೆಲ್ಲರೂ ಒಂದಾಗಬೇಕಿದೆ. ದಕ್ಷಿಣ ಭಾಗದಲ್ಲಿ ದೇಶದ ಪರಂಪರೆಯನ್ನು ರಕ್ಷಣೆ ಮಾಡಿದ್ದು ಕನ್ನಡಿಗರು. ಭಾರತೀಯ ಪರಂಪರೆಯನ್ನು ರಕ್ಷಣೆ ಮಾಡುವ ಮಹತ್ಕಾರ್ಯ ಮಾಡುತ್ತಿರುವ ಪ್ರಧಾನಿ ನರೇಂದ್ರ ಮೋದಿಯವರ ವಿಕಸಿತ ಭಾರತ ಕಲ್ಪನೆಯನ್ನು ಯಶಸ್ವಿಗೊಳಿಸುವ ಜೊತೆಗೆ ದೇಶದ ಪರಂಪರೆಯನ್ನು ಉಳಿಸುವ ಸಂಕಲ್ಪವನ್ನು ಈಡೇರಿಸಲು ನಾವುಗಳು ಕೈಜೋಡಿಸಬೇಕಿದೆ. ಹಾಗೆಯೇ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭಿವೃದ್ಧಿಗಾಗಿ ಬೆಂಬಲ ನೀಡಿ ಎಂದರು. ಇದೇ ವೇಳೆ ಕುರಿಮಂಡಿಯಲ್ಲಿರುವ ಕರುಮಾರಿಯಮ್ಮ ದೇವಸ್ಥಾನ, ವೀರನಗೆರೆ ಅಶೋಕ ರಸ್ತೆಯಲ್ಲಿರುವ ಗಣಪತಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಆತ್ಮೀಯ ಸ್ವಾಗತ, ಹಣೆಗೆ ತಿಲಕ: ಮೊದಲ ಬಾರಿಗೆ ತಮ್ಮ ಬಡಾವಣೆಗೆ ಆಗಮಿಸಿದ ರಾಜವಂಶಸ್ಥರೂ ಆದ ಬಿಜೆಪಿ ಅಭ್ಯರ್ಥಿ ಯದುವೀರ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದ ನಿವಾಸಿಗಳು, ಯದುವೀರ್ ಹಣೆಗೆ ತಿಲಕವನ್ನಿಟ್ಟು ಅಭಿಮಾನ ತೋರಿದರು. ಮಾಜಿ ಶಾಸಕ ಎಸ್.ಎ.ರಾಮದಾಸ್, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಬಿ.ಪಿ.ಮಂಜುನಾಥ್, ಹೇಮಂತ್‌ಕುಮಾರ್‌ಗೌಡ, ಅಲ್ಪಸಂಖ್ಯಾತ ಮೋರ್ಚಾದ ಅನಿಲ್ ಥಾಮಸ್, ನಗರ ಎಸ್.ಟಿ.ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ರಾಮಕೃಷ್ಣ, ನಗರ ಪಾಲಿಕೆ ಮಾಜಿ ಸದಸ್ಯ ಸಾತ್ವಿಕ್, ಬಿಜೆಪಿ ಮುಖಂಡರಾದ ಹೆಚ್.ಜಿ.ಗಿರಿಧರ್, ಮಂಜು ಸಿ.ಗೌಡ, ಪದ್ಮನಾಬ್, ಮಲ್ಲಿಕಾರ್ಜುನ್, ಮಾರ್ಕೆಟ್ ಮಂಜಣ್ಣ, ಶ್ರೀನಿವಾಸ್, ಭಾಸ್ಕರ್, ಕೇಬಲ್ ಶಂಕರ್, ಟೆನ್ನಿಸ್ ಗೋಪಿ, ಮಧು, ರಾಜಣ್ಣ, ಸುಬ್ಬಣ್ಣ ಮತ್ತಿತರರು ಉಪಸ್ಥಿತರಿದ್ದರು.

ಲಕ್ಷ್ಮಣ ಪರ ಡಾ. ಯತೀಂದ್ರ ಸಿದ್ದರಾಮಯ್ಯ ಮತಯಾಚನೆ



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬಸವನಪುರ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮಾಜಿ ಶಾಸಕ ಯತೀಂದ್ರ ಸಿದ್ದರಾಯಮ್ಮ ಮತಯಾಚನೆ ನಡೆಸಿದರು.

ಮೈಸೂರು, ಏ.5(ಎಂಕೆ)– ಬಡವರು ಹಾಗೂ ಜನಸಾಮಾನ್ಯರ ಪರ ಕೆಲಸ ಮಾಡಿ ಅವರ ಕುಂದು ಕೊರತೆಗಳಿಗೆ ಸ್ಪಂದಿಸುವಂತಹ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ಎಂದು ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಕರೆ ನೀಡಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬಸವನಪುರ ಗ್ರಾಮದಲ್ಲಿ ಶುಕ್ರವಾರ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಪ್ರಚಾರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಮುಖ್ಯವಾಗಿ ಯಾವ ಪಕ್ಷಕ್ಕೆ ಮತದಾನ ಮಾಡಬೇಕು ಎಂಬುದನ್ನು ಜನರು ನಿರ್ಧರಿಸಬೇಕು. ಯಾವ ಪಕ್ಷ ಹೆಚ್ಚು ಬಡವರ ಪರವಾಗಿ ಕೆಲಸ ಮಾಡಿದೆ ಎಂಬುದನ್ನು ಗಮನಿಸಿ. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಕಳೆದ 10 ವರ್ಷದಿಂದ ಏನು ಕೆಲಸ ಮಾಡಿದ್ದಾರೆ ಎಂಬುದನ್ನು ಗಮನದಲ್ಲಿ ಇಟ್ಟುಕೊಂಡು ಮತ ನೀಡಿ ಎಂದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮಾತನಾಡಿ, ನಾನೊಬ್ಬ ಸಾಮಾನ್ಯ ಕಾರ್ಯಕರ್ತ. ಜನರ ನಡುವೆ ಇದ್ದು, ತಮ್ಮೆಲ್ಲರ ಸಮಸ್ಯೆಗಳನ್ನು ಆಲಿಸಿ ಅದಕ್ಕೆ ಪರಿಹಾರವನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇನೆ ತಮ್ಮೆಲ್ಲರ ಸೇವೆಗಾಗಿ ನನಗೊಂದು ಅವಕಾಶ ಕೊಡಿ ಎಂದು ಮತದಾರರಲ್ಲಿ ಮನವಿ ಮಾಡಿದರು. ಬಳಿಕ ಬಸವನಪುರದ ಮನೆ ಮನೆಗೆ ಭೇಟಿ ನೀಡಿ ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳು ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಜನರಿಗೆ ತಿಳಿಸುವ ಮೂಲಕ ಮತ ಯಾಚನೆ ಮಾಡಲಾಯಿತು. ಮಾವನಹಳ್ಳಿ ಸಿದ್ದೇಗೌಡ, ಮಾಜಿ ಜಿ.ಪಂ.ಸದಸ್ಯ ರಾಕೇಶ್ ಪಾಪಣ್ಣ, ಮುಖಂಡರಾದ ಬೀರಿಹುಂಡಿ ಬಸವಣ್ಣ, ಲೋಕೇಶ್, ಮಹದೇವ ರವಿಕುಮಾರ್, ಗುರುಸ್ವಾಮಿ ಸೇರಿದಂತೆ ಗ್ರಾಪಂ ಸದಸ್ಯರು ಉಪಸ್ಥಿತರಿದ್ದರು.

ಕೇಂದ್ರದಲ್ಲಿ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬಂದರೆ ಶೋಷಿತರ ಸೌಕರ್ಯಕ್ಕೆ ಕತ್ತರಿ

● ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಆರೋಪ ● ಕಾಂಗ್ರೆಸ್ ಕಚೇರಿಯಲ್ಲಿ ಬಾಬೂಜಿ ಜಯಂತಿ ಕಾರ್ಯಕ್ರಮ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಡಾ.ಬಾಬು ಜಗಜೀವನರಾಂ ಜಯಂತಿ ಕಾರ್ಯಕ್ರಮದಲ್ಲಿ ಮೈಸೂರು–ಕೊಡಗು ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮಾತನಾಡಿದರು.

ಮೈಸೂರು, ಏ.5(ಎಂಟಿವೈ)– ಕೇಂದ್ರದ ಬಿಜೆಪಿ ಸರ್ಕಾರ ಈಗಾಗಲೇ ಮೀಸಲಾತಿಯನ್ನು ಅಲುಗಾಡಿಸಲಾರಂಭಿಸಿದ್ದು, ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಶೋಷಿತ ಸಮುದಾಯ ಗಳಿಸಿರುವ ಸೌಲಭ್ಯವನ್ನು ಹಿಂಪಡೆಯಲಿದ್ದಾರೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಹಯೋಗದಲ್ಲಿ ಶುಕ್ರವಾರ ನಡೆದ ಡಾ.ಬಾಬು ಜಗಜೀವನರಾಂ ಜಯಂತಿ ಸಮಾರಂಭದಲ್ಲಿ ಮಾತನಾಡಿದ ಅವರು, ಕಳೆದ 10 ವರ್ಷದಿಂದ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರದ ಅದ್ವಾನವನ್ನು ಸರಿಪಡಿಸಬೇಕಾದರೆ 40 ವರ್ಷ ಬೇಕಾಗಿದೆ. ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿರುವ ಬಿಜೆಪಿ ನಾಯಕರು ಶೋಷಿತ ಸಮುದಾಯವನ್ನು ಓಲೈಕೆ ಮಾಡಿಕೊಳ್ಳುವ ಬಣ್ಣ ಬಣ್ಣದ ಮಾತುಗಳಾಡುತ್ತಿದ್ದಾರೆ. ಆದರೆ, ಮೀಸಲಾತಿ ತೆಗೆದು ಹಾಕಬೇಕು, ಸಂವಿಧಾನ ಬದಲಿಸಬೇಕು ಎಂಬುದು ಇವರ ಅಜೆಂಡಾ. ಈಗಾಗಲೇ ಮೀಸಲಾತಿಯನ್ನು ಅಲುಗಾಡಿಸುತ್ತಿದ್ದಾರೆ. ಕೇಂದ್ರ ಸ್ವಾಮ್ಯದ ಸಂಸ್ಥೆಗಳಲ್ಲಿ ಶೋಷಿತ ಸಮುದಾಯಕ್ಕೆ ಉದ್ಯೋಗ ನೀಡಬೇಕಾಗುತ್ತದೆ ಎಂಬ ಕಾರಣದಿಂದ ಖಾಲಿ ಹುದ್ದೆ ಭರ್ತಿ ಮಾಡುತ್ತಿಲ್ಲ. ಇರುವ ಅಧಿಕಾರಿಗಳನ್ನೇ ಸ್ವಯಂ ನಿವೃತ್ತಿ ತೆಗೆದುಕೊಳ್ಳುವಂತೆ ಪ್ರೇರೇಪಿಸುತ್ತಿದ್ದಾರೆ. ಇದರಿಂದ ಶೋಷಿತ ಸಮುದಾಯದಲ್ಲಿ ಆತಂಕ ಉಂಟಾಗಿದೆ. ಇನ್ನಾದರೂ ಜನ ಎಚ್ಚೆತ್ತುಕೊಳ್ಳಬೇಕು ಎಂದು ಮನವಿ ಮಾಡಿದರು.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ವಿರುದ್ಧ ಈ ಹಿಂದೆಯೇ ಕ್ರಿಮಿನಲ್ ಮೊಕದ್ದಮೆ ದಾಖಲಾಗಿವೆ. ರಾಜಕಾರಣಕ್ಕೆ ಬರುವ ಮುನ್ನವೇ ಅಮಿತ್ ಷಾ ಗುಜರಾತಿನಲ್ಲಿ ಕ್ರಿಮಿನಲ್ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದರು. ಅವರ ವಿರುದ್ಧ 15ಕ್ಕೂ ಹೆಚ್ಚು ಪ್ರಕರಣಗಳಿವೆ. ರಾಜಕೀಯ ರಕ್ಷಣೆಗಾಗಿ ಅಮಿತ್ ಷಾ ಅವರನ್ನು ಎಲ್.ಕೆ.ಅಡ್ವಾಣಿ ಬಿಜೆಪಿಗೆ ಪರಿಚಯಿಸಿದ್ದಾರೆ. ಅದನ್ನೇ ಮಾಜಿ ಶಾಸಕ ಡಾ.ಯತೀಂದ್ರ ಹೇಳಿದ್ದಾರೆ. ನಿಜ ಹೇಳಿದ್ದನ್ನು ಬಿಜೆಪಿಗರು ಸಹಿಸುತ್ತಿಲ್ಲ ಎಂದು ಕಿಡಿಕಾರಿದರು. ರಾಹುಲ್ ಗಾಂಧಿ ಅವರಿಗೆ ದೇಶದ ಮೇಲಿರುವ ಕಾಳಜಿ ಮತ್ತು ಬದ್ಧತೆ ಯಾರಿಗೂ ಇಲ್ಲ. ಭಾರತ ಜೋಡೋ ಯಾತ್ರೆ, ಭಾರತ ನ್ಯಾಯ ಯಾತ್ರೆಯ ಮೂಲಕ ದೇಶವನ್ನು ಕಾಲ್ನಡಿಗೆಯಲ್ಲಿ ಸುತ್ತುತ್ತಿದ್ದಾರೆ. ಇದು ರಾಜಕೀಯ ಅಧಿಕಾರಕ್ಕಾಗಿ ನಡೆಸುತ್ತಿರುವುದಲ್ಲ. ದೇಶಕ್ಕೆ ಅಪತ್ತಾಗಿರುವ ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸಲು ನಡೆಸುತ್ತಿರುವ ಹೋರಾಟ. 2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ಆದರೂ ರಾಹುಲ್ ಗಾಂಧಿ ಪ್ರಧಾನಿ ಹುದ್ದೆ ಸ್ವೀಕರಿಸುತ್ತಾರೆಯೇ ಎಂಬುದು ಪ್ರಶ್ನೆಯಾಗಿದೆ ಎಂದರು. ಬಾಬು ಜಗಜೀವನ್ ರಾಮ್ ಅವರಂತಹ ಮಹಾನ್ ಚೇತನರನ್ನು ಪೂಜೆ ಮಾಡುವ ಬದಲು ಅವರ ತತ್ವಾದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಪಾಲಿಸೋಣ. ಬಾಬು ಜಗಜೀವನ್ ರಾಮ್ ಅವರನ್ನು ಕೇವಲ ಒಂದು ಜಾತಿಗೆ ಮೀಸಲಿಡಬಾರದು. ಅವರು ದೇಶದ ಸ್ವಾತಂತ್ರ್ಯ ಹೋರಾಟಗಾರರಾಗಿ, ಸಮಾಜ ಸೇವಕರಾಗಿ ದೇಶದ ಕಟ್ಟ ಕಡೆಯ ವ್ಯಕ್ತಿಗೂ ಸಮಾನತೆ ಸಿಗಬೇಕು ಎಂದು ಹೋರಾಟ ಮಾಡಿದ ಮಹಾನ್ ವ್ಯಕ್ತಿಯಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದರು.

ಹಿರಿಯ ಪತ್ರಕರ್ತ ಕೆ.ದೀಪಕ್ ಇದೇ ವೇಳೆ ಬಾಬೂಜಿ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಮೇಯರ್ ನಾರಾಯಣ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ನಗರಪಾಲಿಕೆ ಮಾಜಿ ಸದಸ್ಯ ಸುಬ್ಬಣ್ಣ ಮುಂತಾದವರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶನಿವಾರ 6 ಏಪ್ರಿಲ್ 2024





ಬಿಸಿಲ ಝಳಕ್ಕೆ ಮುದುಡಿದ ಕಾಫಿ ಹೂವು

• ನಿಗದಿತ ಅವಧಿಗೆ ಬೀಳದ ಮಳೆ • ಜಿಲ್ಲೆಯ ಬೆಳೆಗಾರರು ಕಂಗಾಲು

ಮಡಿಕೇರಿ, ಏ.5–ದೇಶದಲ್ಲೇ ಹೆಚ್ಚು ಕಾಫಿ ಬೆಳೆಯುವ ಕೊಡಗು ಜಿಲ್ಲೆಯಲ್ಲಿ ಈ ಬಾರಿ ಮಳೆಯಾಗದ ಕಾರಣ ಕಾಫಿ ಬೆಳೆಗಾರರು ಕಂಗಾಲಾಗಿದ್ದು, ಫಸಲಿಗೆ ಪೂರಕವಾಗಿ ಬರಬೇಕಾದ ಹೂವು, ನಿಗದಿತ ಅವಧಿಗೆ ಮಳೆ ಬೀಳದಿರುವ ಹಿನ್ನೆಲೆಯಲ್ಲಿ ಕಾಫಿ ಮೊಗ್ಗುಗಳು ಗಿಡಗಳಲ್ಲೇ ಬಾಡಿ ಕರಟಿ ಹೋಗುತ್ತಿರುವುದರಿಂದ ಬೆಳೆಗಾರ ಮತ್ತಷ್ಟು ಕಂಗಾಲಾಗಿದ್ದಾನೆ.

ಸಾಮಾನ್ಯವಾಗಿ ಕೊಡಗಿನಲ್ಲಿ ಫೆಬ್ರವರಿ–ಮಾರ್ಚ್‌ನಲ್ಲಿ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಮಳೆ ಸುರಿಯುತ್ತದೆ. ಈ ಮಳೆಯೇ ಕಾಫಿ ಹೂಗಳು ಅರಳಿ, ಮುಂದಿನ ಸಾಲಿನ ಫಸಲನ್ನು ನಿರ್ಧರಿಸುತ್ತದೆ. ಈ ಬಾರಿ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ವರ್ಷದ ಮೊದಲ ಮಳೆ ಆಗಿಲ್ಲ. ಇದರಿಂದ ಮಾರ್ಚ್‌ನಲ್ಲಿ ಅರಳಬೇಕಾದ ಕಾಫಿ ಹೂಗಳು, ಮಳೆಯ ಕೊರತೆಯಿಂದ ಬಹುತೇಕ ಭಾಗಗಳಲ್ಲಿ ಕೆಂಬಣ್ಣಕ್ಕೆ ತಿರುಗುತ್ತಿವೆ. ಶೀಘ್ರ ಮಳೆಯಾಗದಿದ್ದಲ್ಲಿ ಹೂಗಳು ಬಿಸಿಲ ಝಳಕ್ಕೆ ಕರಟಿ ಹೋಗಲಿದ್ದು, ಮುಂದಿನ ಸಾಲಿನ ಫಸಲು ತೀವ್ರ ಕುಸಿತ ಕಾಣುವುದರಲ್ಲಿ ಯಾವುದೇ ಸಂದೇಹವಿಲ್ಲ.

ಬತ್ತಿದ ಜಲಮೂಲಗಳು: ಸಾಮಾನ್ಯವಾಗಿ ಫೆಬ್ರವರಿಯಲ್ಲಿ ಕಾಫಿ ಕೊಯ್ಲು ಪೂರೈಸುವ ಬೆಳೆಗಾರ ಮಾರ್ಚ್‌ನಲ್ಲಿ ಮಳೆಗಾಗಿ ಕಾಯುತ್ತಾನೆ. ಮಳೆ ವಿಳಂಬವಾದಲ್ಲಿ ನೀರಾವರಿಯ ಅನುಕೂಲತೆ ಇರುವವರು ತೋಟಗಳಿಗೆ ಸ್ಪ್ರಿಂಕ್ಲರ್ ಮೂಲಕ ನೀರು ಹಾಯಿಸಿ ಕಾಫಿ ಹೂ ಅರಳಿಸುತ್ತಾರೆ.

ಈ ಬಾರಿ ಒಂದಷ್ಟು ಬೆಳೆಗಾರರು ತಮ್ಮ ತೋಟದ ಕೆರೆಗಳಲ್ಲಿ ನೀರನ್ನು ಕಾಫಿ ಹೂ ಅರಳಿಸಲು ಬಳಸಿದ್ದಾರೆ. ಆದರೆ, ಬಹುತೇಕ ಕಡೆಗಳಲ್ಲಿ ಜಲಮೂಲಗಳನ್ನೇ ಬೆಳೆಗಾರರು ನೆಚ್ಚಿಕೊಂಡಿದ್ದು, ಅಂತಹ ಜಲ ಮೂಲಗಳು ಮಳೆಯ ಕೊರತೆಯಿಂದ ಬತ್ತಿ ಬರಡಾಗಿವೆ. ಈ ಜಲಮೂಲಗಳನ್ನು ನಂಬಿದ್ದ ಬೆಳೆಗಾರರ ತೋಟಗಳಲ್ಲಿ ಕಾಫಿ ಹೂಗಳು ಬಿಸಿಲ ಹೊಡೆತ ತಾಳಲಾರದೆ ಮುದುಡಿ ಹೋಗುತ್ತಿರುವುದು ಆತಂಕ ಮೂಡಿಸುತ್ತಿದೆ. ಮತ್ತೊಂದೆಡೆ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ನದಿ ಮೂಲಗಳಿಂದ ನೀರು ಬಳಸುವಂತಿಲ್ಲ. ನದಿಗಳಿಂದ ನೀರೆತ್ತುವುದು ಕಂಡು ಬಂದಲ್ಲಿ ಕ್ರಮ ಜರುಗಿಸುವುದಾಗಿ ಎಚ್ಚರಿಸಿರುವುದು ಬೆಳೆಗಾರರ ಪಾಲಿಗೆ ಮತ್ತಷ್ಟು ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ಗಗನಕ್ಕೇರಿದ ಕಾಫಿ ದರ: ಜಿಲ್ಲೆಯ ಕಾಫಿ ಬೆಳೆಗಾರರು ಪ್ರಸಕ್ತ ಸಾಲಿನಲ್ಲಿ ತಾವು ಬೆಳೆದ ಕಾಫಿಗೆ ಅತ್ಯಧಿಕ ದರ ಪಡೆದುಕೊಳ್ಳುತ್ತಿದ್ದಾರೆ. ವಿಶ್ವದ ಹೆಚ್ಚು ಕಾಫಿ ಬೆಳೆಯುವ ಬ್ರೆಜಿಲ್‌ನಲ್ಲಿ ಪ್ರಸಕ್ತ ಸಾಲಿನ ಕಾಫಿ ಫಸಲು ಕೈಕೊಟ್ಟ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ರೋಬಸ್ಟಾ ಕಾಫಿ ದರ ಗಗನ ಮುಖಿಯಾಗಿ ಸಾಗುತ್ತಿದೆ. ಪ್ರಸ್ತುತ ಕಾಫಿ ದರ 50 ಕೆಜಿಯ ಚೀಲ ಒಂದಕ್ಕೆ 8500 ರೂ.ಗಳಿಂದ 9 ಸಾವಿರ ರೂ. ವರೆಗೆ ಏರಿದೆ.

> ಬೆಳೆಗಾರರು ಈ ವರ್ಷ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಮಳೆಯ ಕೊರತೆ ಒಂದೆಡೆಯಾದರೆ, ಏರುತ್ತಿರುವ ತಾಪಮಾನದಿಂದ ಕಾಫಿ ಗಿಡಗಳಿಗೆ ಸಮಸ್ಯೆಯಾಗಿದೆ. ನೀರು ಹಾಯಿಸಲು ನೀರಿನ ಮೂಲಗಳೆಲ್ಲ ಬತ್ತಿ ಹೋಗಿವೆ. ರೈತರ ಸಮಸ್ಯೆಗಳಿಗೆ ಸರ್ಕಾರ, ಕಾಫಿ ಮಂಡಳಿ ಸ್ಪಂದಿಸಬೇಕು.
>
> – ಕರವಂಡ ರವಿ ಬೋಪಣ್ಣ, ಕಾಫಿ ಬೆಳೆಗಾರ, ದೊಡ್ಡಪುಲಿಕೋಟು

> ಕೃಷಿಗೆ ನದಿ ನೀರನ್ನು ಬಳಕೆ ಮಾಡುವುದಕ್ಕೆ ಜಿಲ್ಲಾಡಳಿತ ನಿರ್ಬಂಧ ಹೇರಿದೆ. ಕೆಲವು ಬೆಳೆಗಾರರು ಹೊಳೆಗಳ ಕೃತಕ ನೀರಾವರಿ ಮೂಲಕ ಹೂ ಅರಳಿಸುವ ಪ್ರಯತ್ನಕ್ಕೆ ಮುಂದಾಗುತ್ತಿದ್ದರು. ಜಿಲ್ಲಾಡಳಿತದ ನಿರ್ಬಂಧದಿಂದ ಇದೀಗ ಈ ಅವಕಾಶ ಬೆಳೆಗಾರರಿಗೆ ಇಲ್ಲದಾಗಿದೆ. ಮಳೆಯ ನಿರೀಕ್ಷೆಯಲ್ಲಿ ಸಣ್ಣ ಬೆಳೆಗಾರರು ತಲೆ ಮೇಲೆ ಕೈಹೊತ್ತು ಕೂತಿದ್ದಾರೆ. ಕಾಫಿ ಮಂಡಳಿ ಹಾಗೂ ಸಂಬಂಧಪಟ್ಟವರು ಬೆಳೆಗಾರರ ನೆರವಿಗೆ ಸ್ಪಂದಿಸಬೇಕು.
>
> –ಚಂಗೇಟಿರ ಕುಶಾಲಪ್ಪ, ಕಾಫಿ ಬೆಳೆಗಾರರು, ಬಲ್ಲಮಾವಟಿ

ರೋಬಸ್ಟಾ ದಾಖಲೆಯ ಧಾರಣೆ: ಕೊಡಗಿನಲ್ಲಿ ಕಾಫಿ ಕೊಯ್ಲಿನ ಆರಂಭಿಕ ಹಂತದಲ್ಲೇ ಕಾಫಿ ಧಾರಣೆ ಪ್ರತಿ ಚೀಲಕ್ಕೆ 7 ಸಾವಿರ ರೂ.ನಿಂದ 8 ಸಾವಿರ ರೂ. ಗಡಿ ತಲುಪಿದೆ. ಈ ಬೆಲೆ ತಿಂಗಳು ಕಳೆಯುವಷ್ಟರಲ್ಲೇ ಮತ್ತೆ ಜಿಗಿದೇರಿದೆ.

ಧಾರಣೆ ಗಗನ ಮುಖಿಯಾಗಿದ್ದರು, ಜಿಲ್ಲೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವ ಸಣ್ಣ ಬೆಳೆಗಾರರು ಇದರ ಪೂರ್ಣ ಲಾಭ ಪಡೆಯಲು ಸಾಧ್ಯವಾಗಿಲ್ಲ. ಮಾರ್ಚ್ ಅಂತ್ಯಕ್ಕೆ ತಾನು ಪಡೆದ ಸಾಲ ಮರುಪಾವತಿ ಮತ್ತಿತರ ಕಾರಣಗಳಿಂದ ಫಸಲನ್ನು ವಿಲೇವಾರಿ ಮಾಡಿದ್ದಾನೆ. ಹೀಗಿದ್ದರೂ ಸರಾಸರಿ 7300 ರೂ.ಗಳಿಂದ 7700 ರೂ.ವರೆಗೆ ಉತ್ತಮ ಧಾರಣೆಯನ್ನೇ ಪಡೆದಿದ್ದು, ಇದು ದಾಖಲೆಯ ಧಾರಣೆಯಾಗಿದೆ. ಮಧ್ಯಮ ಮತ್ತು ದೊಡ್ಡ ಬೆಳೆಗಾರರು ಫಸಲಿನ 1 ಭಾಗವನ್ನು ಬೆಲೆ ಮತ್ತಷ್ಟು ಹೆಚ್ಚ ಬಹುದೆಂಬ ನಿರೀಕ್ಷೆಯೊಂದಿಗೆ ಗೋದಾಮುಗಳಲ್ಲಿ ಶೇಖರಿಸಿಕೊಂಡಿದ್ದಾರೆ.

ಒಂದು ಅಂದಾಜಿನಂತೆ ರೋಬಸ್ಟಾ ಕಾಫಿ ಧಾರಣೆ 10 ಸಾವಿರ ರೂ. ಗಡಿ ತಲುಪಬಹುದೆನ್ನುವ ನಿರೀಕ್ಷೆಯಿದ್ದು, ಇಂತಹ ಹಂತದಲ್ಲೇ ಮುಂದಿನ ಸಾಲಿನ ಕಾಫಿ ಫಸಲನ್ನು ನಿರ್ಧರಿಸುವ ಮಳೆ ಈ ಬಾರಿ ಕೈಕೊಟ್ಟಿದೆ. ಒಂದೆಡೆ ಕಾಫಿಯ ಉತ್ತಮ ಧಾರಣೆಯ ಸಂತಸ, ಮತ್ತೊಂದೆಡೆ ಮಳೆಯಾಗದ ನೋವು ಏಕ ಕಾಲಕ್ಕೆ ಬೆಳೆಗಾರನನ್ನು ಆವರಿಸಿದೆ.

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಎರಡು ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು

ಕೊಡವರ ಸಮಸ್ಯೆಗೆ ಸ್ಪಂದಿಸುವ ಭರವಸೆ ನೀಡಲಿ



ನಾಚಪ್ಪ

ಮಡಿಕೇರಿ, ಏ.5– ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ, ಸ್ವಯಂ ನಿರ್ಣಯ ಹಾಗೂ ಎಸ್‌ಟಿ ಟ್ಯಾಗ್ ಕುರಿತು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಎರಡು ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು ಪ್ರಣಾಳಿಕೆಯಲ್ಲಿ ಭರವಸೆ ನೀಡುವ ಮೂಲಕ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಒತ್ತಾಯಿಸಿದ್ದಾರೆ.

ಕೊಡವರ ಕುಲ ಸಮಸ್ಯೆಗೆ ಸಂಬಂಧಿಸಿದ 10 ನ್ಯಾಯಸಮ್ಮತ ಬೇಡಿಕೆಗಳನ್ನು ಮುಂದಿಟ್ಟು 34 ವರ್ಷಗಳಿಂದ ಶಾಂತಿಯುತ ಹೋರಾಟ ನಡೆಸಲಾಗುತ್ತಿದೆ. ಇಲ್ಲಿಯವರೆಗೆ ಈಡೇರದ ನಮ್ಮ ಬೇಡಿಕೆಗಳ ಕುರಿತು ಅಭ್ಯರ್ಥಿಗಳು ತಮ್ಮ ಬದ್ಧತೆಯನ್ನು ಶುದ್ಧ ಅಂತಃಕರಣದಿಂದ ಪ್ರದರ್ಶಿಸಬೇಕು ಎಂದು ತಿಳಿಸಿದ್ದಾರೆ.

ಕೊಡವ ಲ್ಯಾಂಡ್‌ಗಾಗಿ ಸಂವಿಧಾನದ ಅಡಿಯಲ್ಲಿ ಭೌಗೋಳಿಕ–ರಾಜಕೀಯ ಸ್ವಾಯತ್ತತೆ, ಕೊಡವ ಬುಡಕಟ್ಟು ಜನಾಂಗವನ್ನು ರಕ್ಷಿಸಿ, ಗೌರವಿಸಬೇಕು ಮತ್ತು ಅಂತಾರಾಷ್ಟ್ರೀಯ ಕಾನೂನಿನಡಿ ಅವರ ಆಂತರಿಕ ರಾಜಕೀಯ ಸ್ವ–ನಿರ್ಣಯವನ್ನು ಗುರುತಿಸಬೇಕು. ಹೊಸ ಮರು ವ್ಯಾಖ್ಯಾನಿಸಲಾದ ಮಾನದಂಡಗಳ ಪ್ರಕಾರ ಸಂವಿಧಾನದ ಶೆಡ್ಯೂಲ್ ಪಟ್ಟಿಯಲ್ಲಿ ಕೂರ್ಗ್‌ನ ಆದಿಮ ಸಂಜಾತ ಮೂಲನಿವಾಸಿ ಕೊಡವ ಜನಾಂಗವನ್ನು ಸೇರಿಸಬೇಕು. ಕೊಡವರ ಕೋವಿ ಹಕ್ಕುಗಳನ್ನು ಸಿಖ್ಖರ ಕಿರ್ಪಾನ್‌ಗೆ ಸಮಾನವಾಗಿ ರಕ್ಷಿಸಬೇಕು. ಕೊಡವ ಭಾಷೆಯನ್ನು ಪಠ್ಯಕ್ರಮ ಮತ್ತು ಆಡಳಿತದಲ್ಲಿ ಪರಿಚಯಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ಭೂಮಿಯಲ್ಲಿ ನಮ್ಮ ಐತಿಹಾಸಿಕ ನಿರಂತರತೆಯನ್ನು ರಕ್ಷಿಸಲು, ಮಣಿಪುರ, ನಾಗಾಲ್ಯಾಂಡ್, ಅರುಣಾಚಲದ ಮಾದರಿಯಲ್ಲಿ ಇನ್ನರ್ ಲೈನ್ ಪರ್ಮಿಟ್ ಅನ್ನು ಕಲ್ಪಿಸಬೇಕು. ಹೊಸ ಸಂಸತ್ತಿನ ಕೇಂದ್ರ ವಿಸ್ತಾದಲ್ಲಿ ಕೊಡವ ಪ್ರಾತಿನಿಧ್ಯವನ್ನು ನೀಡಬೇಕು. ಸಿಕ್ಕಿಂನ ಸಂಘ ಕ್ಷೇತ್ರವನ್ನು ಬೌದ್ಧ ಬಿಕ್ಷುಗಳಿಗೆ ಮೀಸಲಾತಿ ನೀಡಿದಂತೆ ಕೊಡವರಿಗೆ ಅಗೋಚರ ಸಂಸತ್ ಕ್ಷೇತ್ರ ಮತ್ತು ವಿಧಾನಸಭಾ ಕ್ಷೇತ್ರಗಳನ್ನು ಮೀಸಲಿಡಬೇಕು.

ಈ ಬೇಡಿಕೆಗಳನ್ನು ಸಿಎನ್‌ಸಿ ಪ್ರತಿಪಾದಿಸುತ್ತಿದ್ದು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಪ್ರಮುಖ ಪಕ್ಷಗಳ ಇಬ್ಬರು ಅಭ್ಯರ್ಥಿಗಳು ಇವುಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ನಾಚಪ್ಪ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ಪರಮೇಶ್ವರಿ ದೇವಾಲಯದಲ್ಲಿ ಕುಂಭಾಭಿಷೇಕ



ವಿರಾಜಪೇಟೆ ತೆಲುಗರ ಬೀದಿಯ ಅಂಗಾಳ ಪರಮೇಶ್ವರಿ ದೇವಾಲಯದಲ್ಲಿ ಮಹಾಕುಂಭಾಭಿಷೇಕ ನೆರವೇರಿಸಲಾಯಿತು.

ವಿರಾಜಪೇಟೆ: ಇಲ್ಲಿನ ತೆಲುಗರ ಬೀದಿಯ ಶ್ರೀ ಅಂಗಾಳ ಪರಮೇಶ್ವರಿ ದೇವಾಲಯದಲ್ಲಿ ಮೂರು ದಿನ ಮಹಾಕುಂಭಾಭಿಷೇಕ ಹಾಗೂ ವಿಶೇಷ ಪೂಜಾ ಕಾರ್ಯ ವಿಜೃಂಭಣೆಯಿಂದ ನೆರವೇರಿಸಲಾಯಿತು.

ಸುಮಾರು 500ಕ್ಕೂ ಹೆಚ್ಚು ಇತಿಹಾಸವಿರುವ ದೇವಾಲಯವಾಗಿದ್ದು, ಪ್ರತಿನಿತ್ಯ ಧಾರ್ಮಿಕ ಸೇವೆ ನಡೆಸಲಾಗುತ್ತಿದೆ. ಲೋಕ ಕಲ್ಯಾಣಕ್ಕಾಗಿ 12 ವರ್ಷಗಳಿಗೊಮ್ಮೆ ನಡೆಸುವ ಮಹಾಕುಂಭಾಭಿಷೇಕ ಶ್ರೀ ಮಾರಿಯಮ್ಮ ಹಾಗೂ ಅಂಗಳಾ ಪರಮೇಶ್ವರಿ ದೇವಸ್ಥಾನ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿತ್ತು.

ತಮಿಳುನಾಡಿನ 17 ಪುರೋಹಿತ ತಂತ್ರಿಗಳು ತಲಕಾವೇರಿಯಿಂದ ತೀರ್ಥ ತಂದು ಕುಂಭಾಭಿಷೇಕ ನಡೆಸಿದರು. ನಂತರ ವಿವಿಧ ಪೂಜಾ ಕಾರ್ಯ ನಡೆಸಲಾಯಿತು. ಉತ್ತಮ ಮಳೆ ಬೆಳೆಯಾಗುವಂತೆ ವರುಣ ಪೂಜೆಯನ್ನು ನೆರವೇರಿಸಲಾಯಿತು. ಗೋಪುರ ಕಲಶ, ಗಣಪತಿ, ಸುಬ್ರಹ್ಮಣ್ಯ, ಕರುಪ್ಪಸ್ವಾಮಿ, ಅಂಗಾಳ ಪರಮೇಶ್ವರಿ ದೇವಿಗೆ ಕುಂಭಾಭಿಷೇಕ ಹಾಗೂ ಗೋ ಪೂಜೆ ನಡೆಸಲಾಯಿತು.

ಇದೇ ವೇಳೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಪೂಜಾ ಕಾರ್ಯದಲ್ಲಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಟಿ.ಪಿ.ಕೃಷ್ಣ, ಉಪಾಧ್ಯಕ್ಷ ಟಿ.ಜಿ.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಟಿ.ಎನ್.ರಂಜನ್, ಟಿ.ಪಿ. ವೇಣುಗೋಪಾಲ್, ಟಿ.ಪಿ.ಗುರುನಾಥ್, ಟಿ.ಆರ್.ಜನಾರ್ಧನ್, ಟಿ.ಡಿ.ಹರೀಶ್, ಟಿ.ಸಿ.ನಿಶಾಂಕ್ ಹಾಗೂ ಸದಸ್ಯರು ಭಾಗವಹಿಸಿದ್ದರು.

ಜಗಜೀವನ್‌ರಾಂ ಆದರ್ಶ ಮೌಲ್ಯ ಎಲ್ಲರಿಗೂ ಮಾದರಿ

ಮಡಿಕೇರಿ, ಏ.5–ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ್ ರಾಂ ಅವರ ಆದರ್ಶ ಜೀವನ ಮೌಲ್ಯಗಳು ನಮ್ಮೆಲ್ಲರಿಗೂ ಮಾದರಿಯಾಗಿವೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಸ್ಮರಿಸಿದರು.

ನಗರದ ಗಾಂಧಿ ಭವನದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆದ ಡಾ.ಬಾಬು ಜಗಜೀವನ್ ರಾಂ ಅವರ 117ನೇ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜಗಜೀವನ್ ರಾಂ ಬಿಹಾರದಲ್ಲಿ ಬಡ ಕುಟುಂಬದಲ್ಲಿ ಜನಿಸಿ ಬಾಲ್ಯ ಜೀವನವನ್ನು ಕಷ್ಟದಿಂದಲೇ ಎದುರಿಸಿದರು. ತಮ್ಮ ಜೀವನದುದ್ದಕ್ಕೂ ಹೋರಾಟದ ಮೂಲಕ ಬೆಳವಣಿಗೆ ಕಂಡು ರಾಜಕೀಯ ಪ್ರವೇಶಿಸಿ ಕೇಂದ್ರ ಸಚಿವ ಸಂಪುಟದಲ್ಲಿ ಅತ್ಯಂತ ಕಿರಿಯ ವಯಸ್ಸಿನ ಸಚಿವರಾಗಿ ಕಾರ್ಯ ನಿರ್ವಹಿಸಿದ ಸಾಧನೆ ಜಗಜೀವನ್ ರಾಂ ಅವರದ್ದಾಗಿದೆ ಎಂದರು.

ಜಿಪಂ ಸಿಇಓ ವರ್ಣಿತ್ ನೇಗಿ ಮಾತನಾಡಿ, ಜನಸಾಮಾನ್ಯರಿಗೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡುವಲ್ಲಿ ಕೇಂದ್ರದ ಹಲವಾರು ಪ್ರಮುಖ ಖಾತೆಗಳ ಸಚಿವರಾಗಿ ಕಾರ್ಯನಿರ್ವಹಿಸಿ ಸಾಬೀತು ಪಡಿಸಿದ್ದಾರೆ. ಅವರ ಸಾಧನೆಗಳಿಂದಲೇ ಜನರು ಗುರುತಿಸುವಂತೆ ಅಗಾಧ ಸಾಧನೆಗೈದು ಆದರ್ಶ ಜೀವನ ನಡೆಸಿದವರು ಎಂದು ತಿಳಿಸಿದರು.



ಡಾ.ಬಾಬು ಜಗಜೀವನ್ ರಾಂ ಜನ್ಮ ದಿನಾಚರಣೆಯಲ್ಲಿ ಡಾ.ಬಾಬು ಅವರ ಭಾವ ಚಿತ್ರಕ್ಕೆ ಡಿಸಿ ವೆಂಕಟ್ ರಾಜಾ, ಜಿಪಂ ಸಿಇಓ ವರ್ಣಿತ್ ನೇಗಿ ನಮನ ಸಲ್ಲಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಸೈನಿಕ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಾಲಸುಬ್ರಹ್ಮಣ್ಯ, ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕ ಬಸಪ್ಪ, ತಹಶೀಲ್ದಾರ್ ರಮೇಶ್ ಬಾಬು, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿ ಸಿಬ್ಬಂದಿ ಹಾಜರಿದ್ದರು.

ಎಚ್.ಆರ್.ದುಶ್ಯಂತ್ ನಿಧನ



ಕುಶಾಲನಗರ, ಏ.5– ಕೂಡುಮಂಗಳೂರು ಗ್ರಾಮ ಪಂಚಾಯಿತಿ ಕಚೇರಿಯ ಕಂಪ್ಯೂಟರ್ ಆಪರೇಟರ್ ಹಾಗೂ ಹೆಬ್ಬಾಲೆ ಗ್ರಾಮ ನಿವಾಸಿ ಕೆಇಬಿ ನಿವೃತ್ತ ಅಧಿಕಾರಿ ದಿ.ರಾಮಯ್ಯ ಅವರು ಪುತ್ರ ಎಚ್.ಆರ್.ದುಶ್ಯಂತ್ (53) ಶುಕ್ರವಾರ ಅನಾರೋಗ್ಯದಿಂದ ನಿಧನರಾದರು.

ಮೃತರು ತಾಯಿ, ನಾಲ್ವರು ಸಹೋದರು ಹಾಗೂ ಸಹೋದರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಸ್ವಗ್ರಾಮ ಹೆಬ್ಬಾಲೆಯಲ್ಲಿ ಶನಿವಾರ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉಪವಾಸ ಸತ್ಯಾಗ್ರಹ: ಇಬ್ಬರು ಅಸ್ವಸ್ಥ

ಮೂಲಸೌಲಭ್ಯಕ್ಕೆ ಪುರಾಣಿ ಪೋಡಿಯ ಸೋಲಿಗರ ಒತ್ತಾಯ

ಯಳಂದೂರು, ಏ.5–ತಾಲೂಕಿನ ಬಿಳಿಗಿರಿರಂಗನಬೆಟ್ಟದ ಪುರಾಣಿ ಪೋಡಿಗೆ ರಸ್ತೆ, ವಿದ್ಯುತ್ ಸೇರಿದಂತೆ ಮೂಲಸೌಲಭ್ಯ ಒದಗಿಸಬೇಕು. ಇಲ್ಲದಿದ್ದರೆ ಲೋಕಸಭಾ ಚುನಾವಣೆ ಬಹಿಷ್ಕರಿಸುವುದಾಗಿ ಎಚ್ಚರಿಸಿ ನಡೆಯುತ್ತಿರುವ ಉಪವಾಸ ಸತ್ಯಾಗ್ರಹದಲ್ಲಿ ಶುಕ್ರವಾರ ಇಬ್ಬರು ಅಸ್ವಸ್ಥಗೊಂಡಿದ್ದಾರೆ.

ಪುರಾಣಿ ಪೋಡಿಯಲ್ಲಿ ಸೋಲಿಗರು ನಡೆಸುತ್ತಿರುವ ಉಪವಾಸ ಸತ್ಯಾಗ್ರಹ ಶುಕ್ರವಾರಕ್ಕೆ 2ನೇ ದಿನ ಪೂರೈಸಿದ್ದು, ವೀರೇಗೌಡ್ರ ಜಡೇಗೌಡ ಹಾಗೂ ರುದ್ರಮ್ಮ ಅಸ್ವಸ್ಥಗೊಂಡಿದ್ದಾರೆ. ಇದಕ್ಕಿದ್ದಂತೆ ರಕ್ತ ವಾಂತಿ ಮಾಡಿಕೊಂಡು ಅಸ್ವಸ್ಥರಾದ ವೀರೇಗೌಡ್ರ ಜಡೇಗೌಡ ಅವರನ್ನು ಬಿಳಿಗಿರಿರಂಗನಬೆಟ್ಟದ ವಿಜಿಕೆಕೆ ಆಸ್ಪತ್ರೆಗೆ ದಾಖಲಿಸಲಾಗಿದೆ. ರುದ್ರಮ್ಮ ತಲೆಸುತ್ತಿ ಬಿದ್ದಿದ್ದು, ಚಿಕಿತ್ಸೆ ಪಡೆದು ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ.

ಪೋಡಿಯ ಜನರು ರಸ್ತೆ, ವಿದ್ಯುತ್ ಒದಗಿಸುವಂತೆ ಹತ್ತಾರು ದಶಕಗಳಿಂದ ನಿರಂತರವಾಗಿ ಹೋರಾಟ ಮಾಡುತ್ತಿದ್ದರೂ ಮೂಲಸೌಲಭ್ಯ ನೀಡಿಲ್ಲ. ಇಲ್ಲಿ ವಾಸಿಸುವ ನಾವೂ ಮನುಷ್ಯರೇ. ಆದರೆ, ನಮ್ಮನ್ನು ಮೃಗಗಳೆಂದು ಜನಪ್ರತಿನಿಧಿಗಳು, ಸಂಬಂಧಪಟ್ಟ ಇಲಾಖೆಯವರು ಭಾವಿಸಿದ್ದಾರೆ. ರಾತ್ರಿಯಾದರೆ ಪಂಜಿನ ಬೆಳಕಿನಲ್ಲೇ ಕಾಲ ದೂಡುವ ಪರಿಸ್ಥಿತಿ ಇದೆ. ಪೋಡಿಯಲ್ಲಿ ಒಟ್ಟು 139 ಕುಟುಂಬಗಳಿದ್ದು, 645 ಜನರಿದ್ದಾರೆ. ಇದರಲ್ಲಿ 319 ಮತದಾರರು ಇದ್ದೇವೆ ಎಂದು ಧರಣಿನಿರತರು ಆಕ್ರೋಶ ವ್ಯಕ್ತಪಡಿಸಿದರು.



ಬಿಳಿಗಿರಿರಂಗನಬೆಟ್ಟದ ಪುರಾಣಿ ಪೋಡಿಯಲ್ಲಿ ಸೋಲಿಗರು ಲೋಕಸಭಾ ಚುನಾವಣೆ ಬಹಿಷ್ಕರಿಸುವುದಾಗಿ ಸತ್ಯಾಗ್ರಹ ನಡೆಸುತ್ತಿರುವುದು.

ಸ್ಥಳಕ್ಕೆ ಜಿಲ್ಲಾಧಿಕಾರಿ ಬರಬೇಕು, ನಮಗೆ ಮೂಲಸೌಲಭ್ಯ ನೀಡಬೇಕು. ಅಲ್ಲಿಯವರೆಗೂ ಸತ್ಯಾಗ್ರಹ ನಡೆಸಲಾಗುವುದು. ಜೊತೆಗೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡುವುದಿಲ್ಲ ಎಂದು ಹಾಡಿಯ ತಮ್ಮಡಿ ಮುತ್ತೇಗೌಡ, ಸಿದ್ದೇಗೌಡ, ದಾಸೇಗೌಡ, ನಾಗರಾಜು ಎಚ್ಚರಿಸಿದರು.

ಬುಡಕಟ್ಟು ಕಲ್ಯಾಣಾಧಿಕಾರಿ ಭೇಟಿ: ಜಿಲ್ಲಾ ಬುಡಕಟ್ಟು ಕಲ್ಯಾಣಾಧಿಕಾರಿ ಮಂಜುಳಾ ಧರಣಿ ಸ್ಥಳಕ್ಕೆ ಭೇಟಿ ನೀಡಿದರು. ನಂತರ ಮಾತನಾಡಿದ ಅವರು, ಈಗಾಗಲೇ ಮಲೆಮಹದೇಶ್ವರ ಹಾಗೂ ಬಿಳಿಗಿರಿರಂಗನಬೆಟ್ಟದ ಹಲವು ಪೋಡಿಗಳ ಗಿರಿಜನರ ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಯೋಜನೆ ರೂಪಿಸಲಾಗಿದೆ. ಜಿಲ್ಲಾಧಿಕಾರಿ ಈ ಸಂಬಂಧ ಉನ್ನತಾಧಿಕಾರಿಗಳ ಜೊತೆ ನಿರಂತರ ಸಂಪರ್ಕದಲ್ಲಿದ್ದಾರೆ. ಇಲ್ಲಿಗೆ ವಿದ್ಯುತ್ ನೀಡಲು ಕ್ರಮ ವಹಿಸಿದ್ದಾರೆ ಎಂದರು.

ಈಗ ಜಿಲ್ಲಾಧಿಕಾರಿ ಚುನಾವಣಾ ಕರ್ತವ್ಯದಲ್ಲಿರುವುದರಿಂದ ನಾನೇ ಭೇಟಿ ನೀಡಿದ್ದು, ಹಾಡಿಯ ಜನರ ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದರು. ಆದರೂ ಪ್ರತಿಭಟನಾಕಾರರು ಮನವೊಲಿಕೆಗೆ ಒಪ್ಪದೆ ಧರಣಿ ಮುಂದುವರಿಸಿದ್ದಾರೆ.

ಇದೇ ವೇಳೆ ಗ್ರಾಪಂ ಸದಸ್ಯ ಸಿ.ಡಿ.ಮಹದೇವ, ಮಾಜಿ ಸದಸ್ಯ ಬಸವೇಗೌಡ ಗ್ರಾಮದ ದಾಸ, ನಾಗರಾಜು ಬೊಮ್ಮಿ ಸಿದ್ದೇಗೌಡ, ಬೊಮ್ಮಮ್ಮ, ಮುತ್ತಮ್ಮ, ಮಾದಮ್ಮ, ರಂಗಸ್ವಾಮಿ ಇದ್ದರು.

ಸುನೀಲ್ ಬೋಸ್ ವಿರುದ್ಧ ಬಿಜೆಪಿ ದೂರು

• ವೈವಾಹಿಕ ಜೀವನ ಮರೆ ಮಾಚಿರುವ ಆರೋಪ
• ನಾಮಪತ್ರ ಅಸಿಂಧುಗೊಳಿಸುವಂತೆ ಚುನಾವಣಾಧಿಕಾರಿಗೆ ಮನವಿ



ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ವಿರುದ್ಧ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ನಾರಾಯಣ್ ಪ್ರಸಾದ್ ನೇತೃತ್ವದಲ್ಲಿ ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಅವರಿಗೆ ದೂರು ನೀಡಲಾಯಿತು.

ಚಾಮರಾಜನಗರ, ಏ.5–ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ವಿರುದ್ಧ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ನಾರಾಯಣ್ ಪ್ರಸಾದ್ ಜಿಲ್ಲಾ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ನಾಮಪತ್ರದಲ್ಲಿ ತಮ್ಮ ವೈವಾಹಿಕ ಜೀವನ ಕುರಿತ ವಿಚಾರಗಳನ್ನು ಸ್ಪಷ್ಟವಾಗಿ ತಿಳಿಸದೆ ಮರೆ ಮಾಚಿದ್ದಾರೆ. ಆದ್ದರಿಂದ ಅವರ ನಾಮಪತ್ರವನ್ನು ತಿರಸ್ಕರಿಸಬೇಕು ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

ಸುನೀಲ್ ಬೋಸ್ ನಾಮಪತ್ರ ಸಲ್ಲಿಸುವಾಗ ನೀಡಿರುವ ಪ್ರಮಾಣ ಪತ್ರದಲ್ಲಿ ಪತ್ನಿ ಹಾಗೂ ಮಗಳನ್ನು ಉಲ್ಲೇಖ ಮಾಡಿಲ್ಲ. ಜೊತೆಗೆ ಅವರ ಆದಾಯ ಮೂಲಗಳನ್ನು ಸಹ ತಿಳಿಸಿಲ್ಲ. ಅವರಿಗೆ ಸರ್ಕಾರಿ ನೌಕರಿಯಲ್ಲಿರುವ ಪತ್ನಿ ಇದ್ದು, ಮಗಳು ಸಹ ಇದ್ದಾರೆ. ಆದರೆ, ಸಾರ್ವಜನಿಕರಿಗೆ ಸುನೀಲ್ ಬೋಸ್ ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ನಾರಾಯಣ್ ಪ್ರಸಾದ್ ತಿಳಿಸಿದ್ದಾರೆ.

ಈಗಾಗಲೇ ಚುನಾವಣಾಧಿಕಾರಿಗಳು ಸುನೀಲ್ ಬೋಸ್ ನಾಮಪತ್ರವನ್ನು ಕ್ರಮಬದ್ಧಗೊಳಿಸಿದ್ದು, ಇದು ಸರಿಯಾದ ಕ್ರಮವಲ್ಲ. ನಾವು ಸುನೀಲ್ ಬೋಸ್‌ಗೆ ಪತ್ನಿ ಹಾಗೂ ಮಗಳು ಇರುವ ಬಗ್ಗೆ ಛಾಯಾಚಿತ್ರ ಹಾಗೂ ಫೇಸ್‌ಬುಕ್, ವಾಟ್ಸ್‌ಆ್ಯಪ್, ದಾಖಲಾತಿಗಳ ಸಮೇತ ದೂರು ಸಲ್ಲಿಸಿದ್ದೇವೆ. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಸುನೀಲ್ ಬೋಸ್ ಅವರ ಮನೆಗೆ ಹೋಗಿದ್ದಾಗ ಅವರ ಕುಟುಂಬದೊಂದಿಗೆ ಫೋಟೋ ತೆಗೆಸಿಕೊಂಡಿದ್ದಾರೆ ಎಂದು ದೂರಿದ್ದಾರೆ.

ಪ್ರಮಾಣ ಪತ್ರದಲ್ಲಿ ಪತ್ನಿಯಿಂದ 1 ಲಕ್ಷ ರೂ. ಸಾಲ ಪಡೆದಿರುವುದಾಗಿ ತೋರಿಸಿದ್ದಾರೆ. ಇವರು ಯಾರು ಎಂಬುವುದು ಸಾರ್ವಜನಿಕರಿಗೆ ತಿಳಿಯಬೇಕಲ್ಲವೇ? ಒಬ್ಬ ಹೆಣ್ಣು ಮಗಳು ಸುನೀಲ್ ಬೋಸ್‌ಗೆ ಸಾಲ ಕೊಟ್ಟಿದ್ದಾರೆ. ಅವರು ಯಾರು ಎಂಬ ಪ್ರಶ್ನೆ ಬರುತ್ತದೆ. ಹೀಗಾಗಿ ಎಲ್ಲಾ ಪ್ರಶ್ನೆಗಳನ್ನು ನಾವು ಚುನಾವಣಾಧಿಕಾರಿಗಳಿಗೆ ಸಲ್ಲಿಸಿರುವ ದೂರಿನಲ್ಲಿ ತಿಳಿಸಿದ್ದೇವೆ.

ಕೂಡಲೇ ಅವರ ನಾಮಪತ್ರವನ್ನು ತಿರಸ್ಕೃತಗೊಳಿಸಬೇಕು ಎಂಬುದು ನಮ್ಮ ಒತ್ತಾಯವಾಗಿದೆ. ಈಗಾಗಲೇ ಬಿಜೆಪಿಯ ರಾಜ್ಯ ಹಾಗೂ ರಾಷ್ಟ್ರೀಯ ನಾಯಕರಿಗೆ ಈ ವಿಚಾರವನ್ನು ತಿಳಿಸಿದ್ದೇವೆ. ರಾಜ್ಯ ಚುನಾವಣಾ ಆಯೋಗಕ್ಕೂ ದೂರು ಸಲ್ಲಿಸುತ್ತೇವೆ ಎಂದು ನಾರಾಯಣ ಪ್ರಸಾದ್ ತಿಳಿಸಿದರು. ಪಕ್ಷದ ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ಚುಡಾ ಮಾಜಿ ಅಧ್ಯಕ್ಷ ಕುಲಗಾಣ ಶಾಂತಮೂರ್ತಿ, ಸಹ ಪ್ರಮುಖ್ ಅಶ್ವಿನ್, ಯೋಗಹಂಸ್ ಇತರರು ಇದ್ದರು.

ರಾಜ್ಯ ಸರ್ಕಾರದಿಂದ ಜನಪರ ಯೋಜನೆ ಅನುಷ್ಠಾನ



ಶಾಸಕ ಸಿ.ಪುಟ್ಟರಂಗಶೆಟ್ಟಿ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮತಯಾಚಿಸಿದರು.

ಚಾಮರಾಜನಗರ, ಏ.5– ತಾಲೂಕಿನ ಶಿವಪುರ ಹಾಗೂ ಹೆಗ್ಗೋಠಾರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ, ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಶುಕ್ರವಾರ ಪ್ರಚಾರ ನಡೆಸಿದರು.

ಶಿವಪುರ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ನಂತರ ಚುನಾವಣಾ ಪ್ರಚಾರ ಆರಂಭಿಸಿದರು. ನಂತರ ಸಮೀಪದ ಯಡಪುರ, ಉತ್ತುವಳ್ಳಿ, ಮಲ್ಲಯ್ಯನಪುರ, ಕೆ.ಕೆ.ಹುಂಡಿ ಹಾಗೂ ಹೆಗ್ಗೋಠಾರ ಗ್ರಾಮ ಪಂಚಾಯಿತಿ ಗ್ರಾಮಗಳಲ್ಲಿ ಮತಯಾಚನೆ ನಡೆಸಿದರು.

ಇದೇ ವೇಳೆ ಮಾತನಾಡಿದ ಶಾಸಕರು, ಸಿದ್ದರಾಮಯ್ಯ ಎರಡು ಬಾರಿ ಮುಖ್ಯಮಂತ್ರಿಯಾಗಿ ಜಿಲ್ಲೆಗೆ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚು ಅನುದಾನ ನೀಡಿದ್ದಾರೆ. ಮಾಜಿ ಸಚಿವ ಹೆಚ್.ಎಸ್.ಮಹದೇವ ಪ್ರಸಾದ್, ಮಾಜಿ ಸಂಸದ ಆರ್.ಧ್ರುವನಾರಾಯಣ್ ಹಾಗೂ ನಾನು ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಕೆಲಸ ಮಾಡಿದ್ದೇವೆ. ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ 167 ಭರವಸೆಗಳಲ್ಲಿ 158 ಭರವಸೆ ಈಡೇರಿಸಿದ್ದಾರೆ. ಈ ಬಾರಿ ಐದು ಗ್ಯಾರಂಟಿಗಳನ್ನು ನೀಡಿ ಬಡವರ ಪರ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕ ಮಹದೇವ್, ಆರ್.ಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎ.ಎಸ್.ಗುರುಸ್ವಾಮಿ, ಮಹಮದ್ ಅಸ್ಗರ್, ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಎ.ಮಹದೇವಶೆಟ್ಟಿ, ಎಪಿಎಂಸಿ ಅಧ್ಯಕ್ಷ ಮಹದೇವ ಸ್ವಾಮಿ, ಕನಿಷ್ಠ ವೇತನ ಸಲಹಾ ಮಂಡಳಿ ಮಾಜಿ ಅಧ್ಯಕ್ಷ ಆರ್.ಉಮೇಶ್, ಮಾಜಿ ಅಧ್ಯಕ್ಷ ನಾಗೇಂದ್ರ, ಗ್ರಾಪಂ ಮಾಜಿ ಅಧ್ಯಕ್ಷ ಸ್ವಾಮಿ, ಶಿವಕುಮಾರ್ ಮತ್ತಿತರರಿದ್ದರು.

ಆಹಾರ ಸ್ವಾವಲಂಬನೆಗೆ ಜಗಜೀವನ್‌ರಾಂ ಕೊಡುಗೆ ಅಪಾರ

ಚಾಮರಾಜನಗರ, ಏ.5–ದೇಶದ ಆಹಾರ ಕ್ಷೇತ್ರದ ಸ್ವಾವಲಂಬನೆಗೆ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ್‌ರಾಂ ಕೊಡುಗೆ ಅಪಾರವಾಗಿದೆ ಎಂದು ಮೈಸೂರಿನ ಪ್ರಗತಿಪರ ಚಿಂತಕ ದಾಸ ನೂರು ಕೂಸಣ್ಣ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾಡಳಿತ ಭವನದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಡಾ.ಬಾಬು ಜಗಜೀವನ್ ರಾಂ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜಕೀಯ ಮುತ್ಸದ್ದಿಯಾಗಿದ್ದ ಜಗಜೀವನ್‌ರಾಂ ಅವರು ದೇಶ ಆಹಾರ ಸಮಸ್ಯೆ ಎದುರಿಸಿದ ಸಮಯದಲ್ಲಿ ಸಮಗ್ರ ಆಹಾರ ನೀತಿಯನ್ನು ಜಾರಿಗೊಳಿಸಿ ಭಾರತ ಆಹಾರ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು ಎಂದು ತಿಳಿಸಿದರು.

ದೇಶದ ದಲಿತ ಚರಿತ್ರೆಯಲ್ಲಿ ಅಸಮಾನತೆ, ಹಸಿವು, ಅಪಮಾನ, ದೌರ್ಜನ್ಯಕ್ಕೊಳಗಾದವರನ್ನು ಸಂಕಷ್ಟದಿಂದ ಮೇಲೆತ್ತಿ ಸಮಾನತೆಯ ಬೆಳಕು ಚೆಲ್ಲಿದವರಲ್ಲಿ ಜಗಜೀವನ್‌ರಾಂ ಹಾಗೂ ಅಂಬೇಡ್ಕರ್ ಅಗ್ರಗಣ್ಯರು. ವ್ಯಕ್ತಿತ್ವ, ನಡೆ–ನುಡಿ ಬದ್ಧತೆ, ಕ್ರಿಯಾಶೀಲತೆಯಲ್ಲಿ ಇಂದಿನ ರಾಜಕಾರಣಿಗಳಿಗೆ ಜಗಜೀವನ್‌ರಾಂ ಮಾದರಿಯಾಗಿದ್ದಾರೆ ಎಂದರು.



ಚಾಮರಾಜನಗರದ ಚಾಮರಾಜೇಶ್ವರ ದೇವಾಲಯದ ಬಳಿ ಮೆರವಣಿಗೆಗೆ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ ಚಾಲನೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಪಂ ಯೋಜನಾ ನಿರ್ದೇಶಕ ಕಿರಣ್ ಪಡ್ನೇಕರ್, ಡಾ.ಬಾಬು ಜಗಜೀವನರಾಂ ದೇಶದಲ್ಲಿ ಉತ್ತಮ ಆಹಾರ ನೀತಿ ಅನುಷ್ಠಾನಗೊಳಿಸಿ ರೈತರ ಬೆನ್ನುಲುಬು ಆಗಿದ್ದರು. ಶೋಷಿತರ ಪರವಾಗಿ ವಿದ್ಯಾರ್ಥಿ ದೆಸೆಯಲ್ಲೇ ಹೋರಾಡಿದ ಜಗಜೀವನ್‌ರಾಂ ಹಲವಾರು ಮಹೋನ್ನತ ಸ್ಥಾನಗಳನ್ನು ಅಲಂಕರಿಸಿ ದೇಶದ ರಾಜಕೀಯ ಕ್ಷೇತ್ರಕ್ಕೆ ಮೆರುಗು ತಂದಿದ್ದಾರೆ ಎಂದು ಹೇಳಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕ ಆರ್.ಎಸ್.ಸುರೇಶ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಬೀಬ್ ಮಾತನಾಡಿದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಚಿಕ್ಕಬಸವಯ್ಯ, ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕಿ ಪದ್ಮಜಾ, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕಿ ಮಂಜುಳಾ, ಜನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ, ಇತರರು ಉಪಸ್ಥಿತರಿದ್ದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ನಗರದ ಶ್ರೀ ಚಾಮರಾಜೇಶ್ವರ ದೇವಾಲಯದಿಂದ ಹೊರಟ ಮೆರವಣಿಗೆಗೆ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ ಚಾಲನೆ ನೀಡಿದರು.

22 ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧ

ಚಾಮರಾಜನಗರ, ಏ.5–ಚಾಮರಾಜನಗರ ಲೋಕಸಭಾ ಕ್ಷೇತ್ರದ ನಾಮಪತ್ರ ಪರಿಶೀಲನಾ ಕಾರ್ಯ ಶುಕ್ರವಾರ ನಡೆದಿದ್ದು, 25 ಅಭ್ಯರ್ಥಿಗಳ ಪೈಕಿ 3 ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತಗೊಂಡಿವೆ. ಉಳಿದ 22 ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧವಾಗಿವೆ.

ಪಕ್ಷೇತರ ಅಭ್ಯರ್ಥಿಗಳಾಗಿ ಗುರುಲಿಂಗಯ್ಯ, ಸಿ.ರಾಜು ಹಾಗೂ ಸಮಾಜವಾದಿ ಜನತಾ ಪಾರ್ಟಿ (ಕರ್ನಾಟಕ) ಯಿಂದ ಚಾಮುದಾಸಯ್ಯ ಸಲ್ಲಿಸಿದ್ದ ನಾಮಪತ್ರ ತಿರಸ್ಕೃತವಾಗಿವೆ.

ಕ್ರಮಬದ್ಧ ಅಭ್ಯರ್ಥಿಗಳು: ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳಾದ ಎಂ.ಕೃಷ್ಣಮೂರ್ತಿ (ಬಹುಜನ ಸಮಾಜ ಪಾರ್ಟಿ), ಎಸ್. ಬಾಲರಾಜು (ಭಾರತೀಯ ಜನತಾ ಪಾರ್ಟಿ), ಸುನೀಲ್ ಬೋಸ್ (ಇಂಡಿಯನ್ ನ್ಯಾಷನಲ್ ಕಾಂಗ್ರೆಸ್), ನೋಂದಾಯಿತ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಾದ ಸಿ.ಎಂ.ಕೃಷ್ಣ (ಡಾ.ಅಂಬೇಡ್ಕರ್ ಪೀಪಲ್ಸ್ ಪಾರ್ಟಿ), ಎಸ್.ನಿಂಗರಾಜು(ಕರ್ನಾಟಕ ಜನತಾ ಪಕ್ಷ), ಬಿ.ಪ್ರಸನ್ನ ಕುಮಾರ್ (ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ), ಕಂದಳ್ಳಿ ಮಹೇಶ್ (ಕರ್ನಾಟಕ ರಾಷ್ಟ್ರ ಸಮಿತಿ), ಎಸ್.ಸುಮ (ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷ) ಹಾಗೂ ಪಕ್ಷೇತರ ಅಭ್ಯರ್ಥಿಗಳಾದ ಕದಂಬ ನಾ.ಅಂಬರೀಷ್, ನಟರಾಜು, ಎಂ.ನಾಗೇಂದ್ರಬಾಬು, ಜಿ.ನಿಂಗರಾಜು, ಜೆ.ನಿಂಗರಾಜು, ಪಟಾಸ್ ಎಂ.ಪ್ರದೀಪ್ ಕುಮಾರ್, ಬಲ್ಲಯ್ಯ (ಬಾಲು), ಬಿ.ಎಂ. ಮಹದೇವಸ್ವಾಮಿ (ಪಂಪಿ), ಜಿ.ಡಿ.ರಾಜಗೋಪಾಲ (ಹೆಚ್.ಡಿ.ಕೋಟೆ), ಕೆ.ರಾಜು, ಸಿ.ಶಂಕರ ಅಂಕನಶೆಟ್ಟಿಪುರ, ಸಣ್ಣಸ್ವಾಮಿ, ಹೆಚ್.ಕೆ.ಸ್ವಾಮಿ ಹರದನಹಳ್ಳಿ, ಕೆ.ಸುಭಾಷ್ ಚಂದ್ರ ಅವರ ನಾಮಪತ್ರಗಳು ಕ್ರಮಬದ್ಧವಾಗಿವೆ ಎಂದು ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಹೊಸ ಮನೆ ಮಾರಾಟಕ್ಕಿದೆ
In Vijayanagar 1st Stage 1st Main 40x60 East Facing 4 Bed Rooms (All attached) As per Vasthu 60ft Road, Mysore Price : 3.6 Cr (Slightly Negotiable)
9880718980

PART TIME ಕೆಲಸಕ್ಕೆ ಬೇಕಾಗಿದ್ದಾರೆ
ಕೆಲಸದ ಸಮಯ ಸಂಜೆ : 5.00 ರಿಂದ ರಾತ್ರಿ 9.30 ರವರೆಗೆ (ಭಾನುವಾರ ರಜೆ) ಹುಡುಗರು : Office ಮತ್ತು Dispatch Boys ಕೆಲಸಕ್ಕೆ ಬೇಕಾಗಿದ್ದಾರೆ. ಹುಡುಗಿಯರು / ಮಹಿಳೆಯರು: Billing Section/Store Section ಕೆಲಸಕ್ಕೆ ಬೇಕಾಗಿದ್ದಾರೆ. ಆಶೀರ್ವಾದ್ ಫಾರ್ಮಾಸ್ಯೂಟಿಕಲ್ಸ್, ಮೈಸೂರು
9341816171
0821-4242888

SITE FOR SALE
30 X 40 East & West Facing 40 Lakhs & 20 Lakhs
30 X 40 West Facing 36 Lakhs
Near Infosys Off Hunsur Road & Bogadi Jettihundi 4 kms Ring road
Ph: 77956 09173/98800 65122

Sri Murugan Pharma @ Vijayanagar 3rd Stage
REQUIRED STAFFS
Freshers and Experienced
Attractive Salary
Call: 99802 53762
Email: srimuruganpharmacymysuru@gmail.com

ಹೊಸ ಮನೆ ಮಾರಾಟಕ್ಕಿದೆ
20x30 ಡ್ಯೂಪ್ಲೆಕ್ಸ್ 3 ಬೆಡ್ ರೂಂ, 2 ಇಟಾಲಿಯನ್ ಕಿಚನ್, ಆಲ್ ಟೀಕ್‌ವುಡ್, ಗ್ರಾನೈಟ್, ವಾಸ್ತು ಪ್ರಕಾರವಾಗಿರುವ ಮನೆ, ದಟ್ಟಗಳ್ಳಿ. ಶ್ರೀ ಬನಶಂಕರಿ ರಿಯಲ್ ಎಸ್ಟೇಟ್
Mob: 8618495118

ಸೈಟ್ ಮಾರಾಟಕ್ಕಿದೆ
30x43 S/F, BEML ಲೇಔಟ್, ರಾಜರಾಜೇಶ್ವರಿ ನಗರ, ದಟ್ಟಗಳ್ಳಿ. ಬೆಲೆ: 70 ಲಕ್ಷ. ಸಂಪರ್ಕಿಸಿ:
9741561111, 9945042875

ಕೆಲಸಕ್ಕೆ ಬೇಕಾಗಿದ್ದಾರೆ
ಕಂಪ್ಯೂಟರ್ ಜ್ಞಾನವುಳ್ಳ ಆಫೀಸ್ ಅಸಿಸ್ಟೆಂಟ್ ಬೇಕಾಗಿದ್ದಾರೆ.
Contact: SLD Law Firm
9731390641

WALK IN INTERVIEW
ಶಾಲಾ ಆವರಣ ಮತ್ತು ಸ್ವಿಮ್ಮಿಂಗ್ ಪೂಲ್ ನೋಡಿಕೊಳ್ಳಲು ಶಾಲೆಯಲ್ಲಿ ಆಯಾ ಮತ್ತು ಸೆಕ್ಯೂರಿಟಿ ಕೆಲಸ ಮಾಡಲು ಕುಟುಂಬ ಸಮೇತ ಬೇಕಾಗಿದ್ದಾರೆ. ಉಚಿತ ವಸತಿ ಸೌಲಭ್ಯವಿದೆ. ಸಂಬಳ: 18,000 to 20,000
9538787037
9535332633

ಬಾಡಿಗೆಗೆ ಮಳಿಗೆಗಳು ದೊರೆಯುತ್ತವೆ
ಗೋಕುಲಂ 3ನೇ ಹಂತದ ಶ್ರೀಕೃಷ್ಣ ದೇವಸ್ಥಾನದ ಆವರಣದಲ್ಲಿ. ಸಂಪರ್ಕಿಸಿ:
Mob: 9880707190

ಹೊಸ ಮನೆ ಮಾರಾಟಕ್ಕಿದೆ ಹಾಗೂ ಸೈಟುಗಳು ಮಾರಾಟಕ್ಕಿದೆ
(ಮೂಡಾ ಅಪ್ರೂವಡ್) ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರೋಡ್ ಮೈಸೂರು
8050345574

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

30x40, 2 BHK ground floor
30x40, 2 BHK ground floor, West facing, solar, parking at Dattagalli, behind old Kadamba Bakery. Brokers excuse. Contact after 6 pm
9480102135
9611091429

ಜಮೀನು ಮಾರಾಟಕ್ಕಿದೆ
ರಮಾಬಾಯಿನಗರಕ್ಕೆ ಹೊಂದಿಕೊಂಡಂತಿರುವ ಗುರೂರಿನಲ್ಲಿ 21 ಗುಂಟೆ ಜಮೀನು ಮಾರಾಟಕ್ಕಿದೆ. ನಿವೇಶನಕ್ಕೆ ಸೂಕ್ತ ಸ್ಥಳವಾಗಿದ್ದು, ಜೆ.ಪಿ. ನಗರದಿಂದ ಕೆಲವೇ ಅಂತರದಲ್ಲಿದೆ.
9845725796, 9880454995

ರೂಂ ಬಾಡಿಗೆಗೆ ಇದೆ
ವಿಳಾಸ: ನಂ. 65/ಎ, 5ನೇ ಕ್ರಾಸ್, ಚಾಮುಂಡಿ ವಿಹಾರ ಬಡಾವಣೆ, ನಜರ್‌ಬಾದ್, ಮೈಸೂರು
9900160604, 9845391016

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ 15,000
ಸೆಕ್ಯೂರಿಟಿ ಗಾರ್ಡ್ಸ್ 14,000
ESI / PF ಸೌಲಭ್ಯವಿರುತ್ತದೆ. ಕೂರ್ಗಳ್ಳಿ ಸುತ್ತಮುತ್ತ ಕೈಗಾರಿಕಾ ಪ್ರದೇಶ. ಹೌಸ್‌ಕೀಪಿಂಗ್ ಕೆಲಸಕ್ಕಾಗಿ ಮಹಿಳೆಯರು / ಹುಡುಗರು ಬೇಕು. ಸಂಪರ್ಕಿಸಿ:
Mob: 9035367083

WANTED PART TIME LECTURER
Physics, Chemistry, Maths Biology, Accountancy Busstand Statisitics, Computer Science, Kannada, Spoken English
Tele Callers - 10
7975907596

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಸುವರ್ಣ ಯಾತ್ರ
1) ಚಾರ್ದಾಮ್ ಯಾತ್ರಾ ಯಮುನೋತ್ರಿ ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್, ಹರಿದ್ವಾರ್, ಋಷಿಕೇಶ್, ದೆಹಲಿ, 22–5–24 & 12–6–24 13 ದಿನಗಳು
2) ನೇಪಾಳ ಪ್ರವಾಸ ಪಶುಪತಿನಾಥ ಅಯೋಧ್ಯ, ಮುಕ್ತಿನಾಥ, ಪೋಕ್ರ, ಕಟ್ಮಂಡು, ಮನೋಕಾಮನದೇವಿ 29–4–24 ಮತ್ತು 25–5–24, 9 ದಿನಗಳು.
3) ಕಾಶಿ ಪ್ರವಾಸ ಬಾಬಾ ವೈದ್ಯನಾಥ್ ಗಯಾ, ಬುದ್ಧ ಗಯಾ, ತ್ರಿವೇಣಿ ಸಂಗಮ ನೈಮಿಶರಣ್ಯ, ಅಯೋಧ್ಯ 29–4–24 & 24–5–24 7 ದಿನಗಳು.
9019462508,8660233673

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಉತ್ತಮ ತಳಿಯ ಹಸುಗಳು ಮಾರಾಟಕ್ಕೆ ದೊರೆಯುತ್ತವೆ.
ಗೀರ್, ಹೆಚ್ ಎಫ್, ಜರಸೀ, ಇತ್ಯಾದಿ ತಳಿಯ ಹಸುಗಳು ಮಾರಾಟಕ್ಕೆ ದೊರೆಯುತ್ತದೆ. ಸಂಪರ್ಕಿಸಿ: ಉಮಕಾಂತ ಮಿತ್ರ, ಮಹಾರಾಜ ಪೂಜಾರಿ ಫಿಶ್ ಲ್ಯಾಂಡ್ ಹತ್ತಿರ, ಕಳಸ್ತವಾಡಿ, ಮೈಸೂರು–ಬೆಂಗಳೂರು ಹೈವೆ
9388159977

WANTED CAPTAINS
Male / Female
Full time / Part time
Contact: Bopy's Bar & Restaurant Hunsur Road, Mysore.
Mob: 9606632166

ಸೈಟ್‌ಗಳು
30x40 ಸೈಟ್ 70, ದಟ್ಟಗಳ್ಳಿ ಹತ್ತಿರ
30x40 ಸೈಟ್ 26 ಲಕ್ಷ ಬೋಗಾದಿ ರೋಡ್
30x40 ಸೈಟ್ 30 ಲಕ್ಷ, ಸುವರ್ಣ ಲೇಔಟ್
40x60 - 85 ಲಕ್ಷ, ಸುವರ್ಣ ಲೇಔಟ್
ಹಳೆ ಮನೆ, ಸೈಟ್, ಹೊಸ ಮನೆ ಮಾರುವವರು, ಕೊಳ್ಳುವವರು ಸಂಪರ್ಕಿಸಿ:
Mob: 9945042875

SITE FOR SALE
30x40 KHB Nisarga Layout, Ilwala 3rd Block, North Facing
7619328883

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

ಉಚಿತ ಭವಿಷ್ಯ ಶಾಶ್ವತ ಪರಿಹಾರ
ಶ್ರೀ ಸಾಯಿ ಕೃಷ್ಣ ಜ್ಯೋತಿಷ್ಯಾಲಯ ಪಂ॥ ಕೃಷ್ಣ ಪ್ರಸಾದ್
ಮನೆಯಲ್ಲಿ ಅಶಾಂತಿ ಸತಿಪತಿ ಕಲಹ ಸಾಲಬಾದೆ, ದಾಂಪತ್ಯ ಸಮಸ್ಯೆ ಭೂಮಿವಶ ಸ್ತ್ರೀಪುರುಷ, ಶತ್ರುಕಾಟ, ಕೋರ್ಟ್‌ಕೇಸ್, ಲೈಂಗಿಕ ಸಮಸ್ಯೆ, ನೀವು ಬೇರೆ ಜ್ಯೋತಿಷ್ಯರಲ್ಲಿ ಹಣ ನೆಮ್ಮದಿ ವಿಶ್ವಾಸ ಕಳೆದುಕೊಂಡಿದಲ್ಲಿ ನಿಮ್ಮ ಜೀವನದ ಯಾವುದೇ ಗುಪ್ತ ಸಮಸ್ಯೆ ಇದ್ದರೂ ಕೊಳ್ಳೇಗಾಲದ 500 ವರ್ಷದ ಪ್ರಾಚೀನ ಕಾಲದ ಯಂತ್ರ ವಿದ್ಯೆ 9 ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ
9535161120

HOUSE FOR SALE
Newly builted house 30x40 Triplex house, good location, near Teju Corner, Vijayanagar 4th Stage, Mysore. *Contact:* Trasta Constructions
Mob: 9164456176

SITES FOR SALE
Ready for Registration
Starts from Rs. 10,80,000*
H.D. Kote Main Road and Mysore-Hunsur Main Road. Contact:
Mob: 6363082326

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9591815191

ಮನೆ ಬಾಡಿಗೆಗೆ ಇದೆ
2BHK, 30x40, G/F ಪೂರ್ವಕ್ಕೆ ಬಾಗಿಲು ಸೋಲಾರ್ ಮತ್ತು ವಾಲ್ ಡ್ರೂಪ್ ವ್ಯವಸ್ಥೆ SVEI ಕಾಲೇಜು ಹತ್ತಿರ ಹೆಚ್.ಪಾರ್ಕ್ ಮತ್ತು ಫಿಲ್ಟರ್ ವಾಟರ್ ಎದುರು ವಿಜಯನಗರ 4ನೇ ಹಂತ, 2ನೇ ಫೇಸ್
9880467085

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಶೇಖರ್: 9945911118
ಅನಿಲ್: 7026996123
ARTHOR SERVICES PVT.LTD
NO. LIG119, 1st Stage, Panchamantra Road, Kuvempunagar, Mysore-570023

HOUSE FOR SALE
@ MUDA Layout 2+1 BHK 20x30 South facing site East facing door, Shanthaveri Gopalagowda Nagar, Mysore.
9740019514, 9738884777

ಮುಡಾ ಅಪ್ರೂವ್ಡ್ ಸೈಟ್ ಮಾರಾಟಕ್ಕಿದೆ. ಕಮರ್ಷಿಯಲ್
ಬಾಮ್ಹಿನ್ ಲೇಔಟ್ 'A' ಬ್ಲಾಕ್, 60 ಅಡಿ ರಸ್ತೆ, (ಪೂ.ಪ. 47 ಅಡಿ, ದ.ಉ. 127 ಅಡಿ) 2 ವಿಸ್ತೀರ್ಣ 2900 ಸ್ಕ್ವೇರ್ ಫೀಟ್. ಚದರ ಅಡಿಗೆ 1950.
8618644886, 9880280299

ಸೈಟ್ ಮಾರಾಟಕ್ಕಿದೆ
30x40 S/E ಕಾರ್ನರ್, ಬೋಗಾದಿ ರೋಡ್. ಜೆಟ್ಟಿಹುಂಡಿ. ಬೆಲೆ: 26 ಲಕ್ಷ. ಸಂಪರ್ಕಿಸಿ:
Mob: 9741561111

SITE FOR SALE
30x40, Somanathanagar, Dattagalli, Near Ring Road, Mysore.
8496923919, 9449323272

We are hiring
ACCOUNTANT (M/F)
Experience: 2 to 3 years. Well known Tally ERP-9. Salary: 18000 above. Contact: Century Mattress, Distributor Vijayanagar 2nd Stage, Mysore.
0821-4286890, 8217411158

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಪುರುಷರು/ ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 12000/–
9148187290

ಮೈಸೂರಿನ ಬಸ್ ನಿಲ್ದಾಣದಿಂದ 10 ಕಿ.ಮೀ
ಮೈಸೂರಿನ ಬಸ್ ನಿಲ್ದಾಣದಿಂದ 10 ಕಿ.ಮೀ ದೂರದಲ್ಲಿರುವ FREEDOM HOME Stay Farm ತಿಂಗಳ ಬಾಡಿಗೆಗೆ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ
7676557984
9620507480

ಕಾರ್ನರ್ ಸೈಟ್ ಸೇಲ್
ಈಸ್ಟ್ ಫೇಸಿಂಗ್ ಮುಡಾ ಖಾತೆ
Mob: 93421 23373

ವಿವಾಹ ಭಾಗ್ಯ
MRJ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿದುರರು
FREE REGISTRATION
8904890413

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

REQUIRED
For a Reputed Firm in Hebbal Industrial Estate, Mysore.
1. OFFICE ASSISTANT(Female) - 1No
Qualification : B.Com., B.Sc, M.Com
Experience : Minimum 1-2years
Excellent Communication in Kannada English, Hindi. Salary - Rs. 15,000/-
99720 29007

REQUIRED
For a Reputed Firm in Hebbal Industrial Estate, Mysore.
1. MARKETING EXECUTIVE(MALE) - 3 Nos
Qualification:ITI/Diploma/Any Degree
Experience: Minimum 1-2years/ Fresher also Can apply. Excellent Communication in Kannada/English/Hindi.
Salary :- Rs.20,000 - Rs.25,000/-
99720 29007

ಉಚಿತವಾಗಿ ಪಡೆಯಿರಿ
26 Kg BT ರೈಸ್‌ನ್ನು ಖರೀದಿಸಿದರೆ 2kg ಸಕ್ಕರೆ, 2kg ಗೋಧಿ ಹಿಟ್ಟು, 1kg ತೊಗರಿ ಬೇಳೆ, 1kg ಕಡ್ಲೆ ಬೇಳೆ 1Ltr ಸನ್‌ಫ್ಲೂರ್ ಎಣ್ಣೆ, 200grm ಹಪ್ಪಳ PKT ನ್ನು ಉಚಿತವಾಗಿ ಪಡೆಯಿರಿ. ಬೆಲೆ ರೂ. 2050/– ಮಾತ್ರ (ಷರತ್ತು ಅನ್ವಯ) ಶ್ರೀ ಅನ್ನಪೂರ್ಣೇಶ್ವರಿ ರೈಸ್ ಕಾರ್ನರ್ # 1498, 1ನೇ ಕ್ರಾಸ್, ಶಿವರಾಂಪೇಟೆ, ಮೋರ್ ಮೆಗಾಸ್ಟೋರ್ ಎದುರಿನ ರಸ್ತೆ, ಮೈಸೂರು–570001
9741859037
9902158019

ಹೋಂ ನರ್ಸಿಂಗ್‌ನಲ್ಲಿ ಉದ್ಯೋಗಾವಕಾಶ
ವಯೋವೃದ್ಧರನ್ನು ಆರೈಕೆ ಮಾಡಲು full Time, Day/Night Shift ಕೆಲಸಕ್ಕೆ ಯುವತಿಯರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ವೇತನ: 10,000 ರಿಂದ 18000 ಅನುಭವದ ಅಗತ್ಯವಿಲ್ಲ, ಉಚಿತ ತರಬೇತಿ ವಸತಿಯೊಂದಿಗೆ ಕೆಲಸ ನೀಡಲಾಗುವುದು
9606714441, 7349278501, 0821–4242351

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED
ಹೆಲ್ಪರ್ಸ್ ಹುಡುಗರು
ಐಟಿಐ ಎಲೆಕ್ಟ್ರಿಕಲ್ಸ್ / ಪಿಯುಸಿ ಆದವರಿಗೆ ಆದ್ಯತೆ ದ್ವಿಚಕ್ರ ವಾಹನ ಹೊಂದಿರಬೇಕು ವಯಸ್ಸು 18–25 ವರ್ಷ
ಸರಸ್ವತಿಪುರಂ, ಮೈಸೂರು
98808 28999

ಕೆಲಸಕ್ಕೆ ಬೇಕಾಗಿದ್ದಾರೆ
MNC ಕಂಪನಿಗಳಿಗೆ Nanjangud, Mysore, ಎಲ್ಲಾ ಕಂಪನಿಗಳಿಗೆ Cashier, Billing, Data Entry Accounts, HR, Q/C, Packing, Helper, Driver ಬೇಕಾಗಿದ್ದಾರೆ. 7th, 10th, ITI, Diploma, Any Degree, M.Com., MBA pass or fail. ಯುವಕ, ಯುವತಿಯರು ಬೇಕಾಗಿದ್ದಾರೆ. ESI, PF, OT ನೊಂದಿಗೆ ಸಂಬಳ 15,000 ರಿಂದ 40,000/–. ಸಂಪರ್ಕಿಸಿ:
Mob: 9916641959

SITE FOR SALE
Site No: 12365 South Facing Opp park near to Ring Road, Vijaynagar 4th stage Price: 1.50Cr
78992174181

HOUSE FOR SALE
20x30 In Vijaynagar 4th stage, near Sankalp Apartments ground Floor / East Facing
CALL: 8884133677

N/W ಕಾರ್ನರ್ 27x40 ಸೈಟು ಮಾರಾಟಕ್ಕಿದೆ
(ರೇರಾ ಅಪ್ರೂವಡ್) 15 ಲಕ್ಷಗಳು TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

SITE FOR SALE
50x80 South Face Pragathi Nagar attached to Anandasagar Hunsuru Road
8217042841

SITE FOR SALE
40x60 Muda Alloted Site for sale Vijaynagar 4th stage 1.45 Cr Negotiable
CALL: 8197707001

SITE FOR SALE
40X60 NORTH SITE, OPP PARK, SUVARNA LAYOUT, BOGADI
CALL: 9880273834

SBIT TRAVELS PVT LTD
Group Departures with Best Details
- Bhutan - 6N7D | 52,500/- Apr 25th - May 5th, 25th
- Dubai- 4N5D | 74,500/- May 1st, 6th, 9th
- Baku-5N6D | 89,000/- April - 29th | May-1st, 24th

9342524127 | 9343524127

Sudarshan Saur
SOLAR WATER HEATER



SUNZONE SOLAR SYSTEM
Vishwamanava Double Road, Kuvempunagar, Mysuru
9845175443

SC ಆದಿಕರ್ನಾಟಕ (ಬಲಗೈ)
BE, M.Tech, MBBS, MD, MS, BAMS, MSc, M.Com, MCA, MBA, MAPhd, Bcom, BSc, BA, BEd ವಧು ವರರಿಗೆ ಸಂಪರ್ಕಿಸಿ: ಮೈಸೂರು ಸಿಟಿ ವಧುವರರ ಮಾಹಿತಿ ಕೇಂದ್ರ, ಎನ್.ಆರ್.ಮೊಹಲ್ಲಾ, ಮೈಸೂರು
8711974172

WANTED OFFICE BOY
7259016514
7259016509

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಮಹಿಳೆಯರು /ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 12000/– ಸಮಯ: ಬೆಳಿಗ್ಗೆ 8 ರಿಂದ ಸಂಜೆ 5ರ ವರೆಗೆ
9591135324

ಬೇಕಾಗಿದೆ
ಜೆಪಿ ನಗರ ಮೈಸೂರಿನಲ್ಲಿ 30x40 East ಅಥವಾ North Face Site ಬೇಕಾಗಿದೆ ಅಥವಾ ಹಳೆ ಮನೆ
7892381659
9986603572

SITE FOR SALE
50x80 80ft Road Vijayanagara 4th Stage 2nd Phase Mysore
20x30 House for Sale (Booking open) Lalabahudur Shastrinagara (Brokers Excuse)
7348940508

SC ಆದಿಕರ್ನಾಟಕ (ಬಲಗೈ)
40 ವರ್ಷ ವಿಚ್ಛೇದಿತ ವಧು MA ಮಾಡಿ ಸರ್ಕಾರಿ ನೌಕರಿಯಲ್ಲಿ ಕೆಲಸ ಮಾಡುತ್ತಿರುವ ವಿಚ್ಛೇದಿತ ವಧುವಿಗೆ, ಪದವಿ ಮಾಡಿರುವ ಸರ್ಕಾರಿ ನೌಕರಿಯಲ್ಲಿ ಅಥವಾ MNC Company ಯಲ್ಲಿ ಕೆಲಸ ಮಾಡುತ್ತಿರುವ ವರ ಬೇಕಾಗಿದ್ದಾರೆ. ಸಂಪರ್ಕಿಸಿ: ಮೈಸೂರು ಸಿಟಿ ವಧುವರರ ಮಾಹಿತಿ ಕೇಂದ್ರ, ಎನ್.ಆರ್.ಮೊಹಲ್ಲಾ, ಮೈಸೂರು
8711974172

ಪಾರ್ಟ್ ಟೈಂ ಜಾಬ್ಸ್
ಮೈಸೂರಿನಾದ್ಯಂತ ಪಾರ್ಟ್ ಟೈಂ ಕೆಲಸಗಳು ಲಭ್ಯವಿದೆ. ಮನೆಯಿಂದಲೇ ಕುಳಿತು ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಡೇಟಾ ಎಂಟ್ರಿ ಕೆಲಸಗಳು ಮೊಬೈಲ್‌ನಿಂದ ಕೆಲಸ ಮತ್ತು ಪ್ಯಾಕಿಂಗ್ ಕೆಲಸಗಳು ಲಭ್ಯವಿದೆ. ಗಳಿಸಿ ತಿಂಗಳಿಗೆ 15000/– ದಿಂದ 20000/– ವರೆಗೆ
8970168796

ಬೇಕಾಗಿದ್ದಾರೆ
Computer ಜ್ಞಾನ ಹೊಂದಿರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ. Sales ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. ಸಮಯ: 10 am to 8 pm ವಿಚಾರಿಸಿ: ಚೇತನ ಬುಕ್ ಹೌಸ್ ನಾರಾಯಣಶಾಸ್ತ್ರಿ ರಸ್ತೆ

ಅನುಬಂಧ ಮ್ಯಾರೇಜಸ್
ಬೆಂಗಳೂರಿನಲ್ಲಿರುವ SC ಆದಿ ಕರ್ನಾಟಕ BA, LLB ಬ್ಯಾಂಕ್ ಅಧಿಕಾರಿ ಸುಂದರ ಶ್ರೀಮಂತ ಡೈವೋರ್ಸಿ ವರನಿಗೆ ಸುಂದರ ವಿದ್ಯಾವಂತ ವಧು–ವಿಧವೆ ವಿಚ್ಛೇದಿತರು ನೇರಸಂಪರ್ಕಿಸಿ:
6361740552

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಮತ್ತು ಹೆಬ್ಬಾಳು ಏರಿಯಾದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವ ಹಾಗೂ 3 ವರ್ಷ ಸೆಕ್ಯೂರಿಟಿ ಸೂಪರ್ ವೈಸರ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ್ ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು PUC ಸಂಬಳ: ಸೂಪರ್‌ವೈಸರ್ 23500/- + W/o (8 hrs) ಗಾರ್ಡ್ 23000/- + W/o (8 hrs)
9880727819
9620777819

ಬೇಕಾಗಿದ್ದಾರೆ /Wanted
ಮೈಸೂರ್ ನಲ್ಲಿ ಕಾಳಿದಾಸ ರೋಡ್‌ನಲ್ಲಿ ಪಂಚವಟಿ ಸರ್ಕಲ್ ಹತ್ತಿರ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ, ಅನುಭವವುಳ್ಳ (1) ಅಸಿಸ್ಟೆಂಟ್ ಸೌತ್ ಕುಕ್ (ಸಹಾಯಕ ಕುಕ್) Cutting, Grinding (2) Indian All rounder (3) Tandoori Roti ತಂದೂರಿ ರೋಟಿ ಮಾಡುವ (4) ಕೌಂಟರ್ ಪಾರ್ಸೆಲ್ (5) ಸಪ್ಲೈಯರ್, ವೇಟರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಹಾಗು ಉತ್ತಮ ಸೌಲಭ್ಯಗಳನ್ನೂ ನೀಡಲಾಗುತ್ತದೆ
9019916266

ಬೇಕಾಗಿದ್ದಾರೆ
ಮೈಸೂರಿನ ಬೋಗಾದಿ 2ನೇ ಹಂತದ ಬಡಾವಣೆಯಲ್ಲಿ ವಾಸವಿರುವ ಇಬ್ಬರು ಮಹಿಳೆಯರಿಗೆ ಪಾರ್ಟ್ / ಫುಲ್ ಟೈಮ್ ಸಸ್ಯಹಾರಿ ಅಡುಗೆಯರವರು ಬೇಕಾಗಿದ್ದಾರೆ. ವಿವರಗಳೊಂದಿಗೆ ಸಂಪರ್ಕಿಸಿ
9901897660

ಶ್ರೀ ಗುರುರಾಘವೇಂದ್ರ ಹಾಲಿಡೇಸ್
ಕಾಶಿ, ವೈಷ್ಣೋದೇವಿ, ನೇಪಾಳ, ಅಯೋಧ್ಯ, ಮನಾಲಿ, 18 ದಿನಗಳ ವಿಮಾನ ಹಾಗೂ ಬಸ್ಸಿನಲ್ಲಿ ಪ್ರವಾಸದ ಹಾಲಿಡೇಸ್ ಪ್ಯಾಕೇಜ್ ಮೇ ತಿಂಗಳಿಗೆ ಕೇವಲ ಆರು (06) ಸೀಟುಗಳು ಖಾಲಿ ಇರುತ್ತವೆ. 1) ಲಕ್ನೋ, 2) ಅಯೋಧ್ಯ, 3) ನೇಪಾಳ 4) ಕಾಶಿ, 5) ಆಗ್ರಾ, 6) ಮಥುರಾ 7) ಬೃಂದಾವನ, 8) ಮನಾಲಿ, 9) ಪ್ರಯೋಗ್ ರಾಜ್, 10) ಹರಿದ್ವಾರ್, 11) ಋಷಿಕೇಶ್, 12) ಅಮೃತ್‌ಸರ್, 13) ವಾಘಾಬಾರ್ಡರ್, 14) ಕುರುಕ್ಷೇತ್ರ, 15) ದೆಹಲಿ. ಬೆಳಿಗ್ಗೆ ತಿಂಡಿ, ಮಧ್ಯಾಹ್ನ ಊಟ, ರಾತ್ರಿ ಊಟ, ಉಳಿದುಕೊಳ್ಳಲು ಎಸಿ ರೂಂ ಎಲ್ಲಾ ಸೇರಿ 43000/– ಒಂದು ಸೀಟಿಗೆ (ಮೇ ತಿಂಗಳಿನಲ್ಲಿ ಪ್ರವಾಸ) (ಗೈಡ್, ಆಟೋ, ದೋಣಿ, ಡೋಲಿ ಚಾರ್ಜ್ ಪ್ರತ್ಯೇಕ)
9482847729,7019528922

ಬೇಕಾಗಿದ್ದಾರೆ
ಕೊರಿಯರ್ ಸಂಸ್ಥೆಯಲ್ಲಿ ಆಫೀಸ್ ಕೆಲಸಕ್ಕೆ ಹುಡುಗಿಯರು ಅಥವಾ ಮಹಿಳೆ (30 ವರ್ಷದೊಳಗೆ) ಬೇಕಾಗಿದ್ದಾರೆ ಹಾಗೂ ಬೆಳಿಗ್ಗೆ 8am to 2pm ವರೆಗೆ Part Time ಹುಡುಗರು ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು) ಸಂಪರ್ಕಿಸುವ ಸಮಯ:ಬೆ.10.30 ರಿಂದ 5.30
9449871790

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/SC ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ: (II Marriages Also)
9343175000

S.K. CONSTRUCTION
ಹೊಸ ಮನೆ ಕಟ್ಟ ಬೇಕೇ? ಚಿಂತೆ ಬೇಡ. ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineering Plan, 3D Elivation ಸಹಿತ ನಾವೇ Loan ಮಾಡಿ ನಿಮ್ಮ ಕನಸಿನ ಮನೆ ನಿರ್ಮಿಸಿ ಕೊಡುತ್ತೇವೆ.
9620528490

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಕಂಪನಿಗಳಿಗೆ ಹೂಟಗಳ್ಳಿ ಮತ್ತು ಹೆಬ್ಬಾಳು ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು & ಹುಡುಗಿಯರು ಬೇಕಾಗಿದ್ದಾರೆ. ಅನುಕೂಲತೆ : ESI, PF ಮತ್ತು ಊಟದ ಸೌಲಭ್ಯವಿರುತ್ತದೆ. Salary: 14500 to 18000 ರೂ.ಗಳಿರುತ್ತದೆ. ಚಾಮುಂಡೇಶ್ವರಿ ಎಂಟರ್‌ಪ್ರೈಸಸ್ ಬಿಳಿಕೆರೆ, ಮೈಸೂರು
ಮಂಜು: 9900664343
ಆಫೀಸ್: 7892431374

ರೋಗ ಯಾವುದೇ ಇರಲಿ
ಯಾವುದೇ ನಿಶ್ಶಕ್ತಿ, ಸೋರಿಯಾಸಿಸ್, ಬಿಳಿಮಚ್ಚೆ, ನವೆ, ವೀರ್ಯದಲ್ಲಿ ಅಣು ಕಡಿಮೆ ಇದ್ದು ಮಕ್ಕಳಿಲ್ಲದಿರುವಿಕೆ, ಮೂತ್ರ ಉರಿ, ಯಾವುದೇ ಸಮಸ್ಯೆಗೆ ಸಂಪರ್ಕಿಸಿ: ಪರಸ್ಥಳದವರು ಕರೆ ಮಾಡಿ ಔಷಧಿ ತರಿಸಿಕೊಳ್ಳಬಹುದು ಡಾ. ಆರ್.ತ್ಯಾಗರಾಜು Govt.Reg. No. 7358
9902505474

ಬೇಕಾಗಿದ್ದಾರೆ
ಹೂಟಗಳ್ಳಿ ಮತ್ತು ಮೇಟಗಳ್ಳಿ ಇಂಡಸ್ಟ್ರಿಯಲ್ Area ದಲ್ಲಿ ಕೆಲಸ ಮಾಡಲು 18 ರಿಂದ 50 ವರ್ಷದೊಳಗಿರುವ ಹುಡುಗರು ಬೇಕಾಗಿದ್ದಾರೆ. ಅನುಕೂಲತೆ : PF & ESI, Canteen ಸೌಲಭ್ಯವಿರುತ್ತದೆ. Salary: 14000 to 20000
6362491336,9611601179
8105651601,9845743950

NAATYA (R)
MAKKALA SAINYA
SUMMER CAMP-2024
APRIL 10th TO MAY 1th
9964491957
9964566070

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಕಾಂಗ್ರೆಸ್ ಪ್ರಣಾಳಿಕೆ 'ನ್ಯಾಯ ಪತ್ರ' ಬಿಡುಗಡೆ

ಸಾಲ ಮನ್ನಾ, 'ಮಹಾಲಕ್ಷ್ಮಿ' ಅಡಿ ಮಹಿಳೆಯರಿಗೆ ಲಕ್ಷ ಹಣ, ಜಾತಿ ಗಣತಿ, 25 ಲಕ್ಷ ಆರೋಗ್ಯ ವಿಮೆ...

ನವದೆಹಲಿ, ಏ.5– ಇಂಡಿಯಾ ಮೈತ್ರಿಯ ಪ್ರಮುಖ ಪಕ್ಷ ಕಾಂಗ್ರೆಸ್ ಲೋಕಸಭೆ ಚುನಾವಣೆಗೆ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ಇದಕ್ಕೆ 'ನ್ಯಾಯ ಪತ್ರ' ಎಂದು ಹೆಸರಿಟ್ಟಿದೆ. ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ 25 ವಿವಿಧ ಬಗೆಯ ಗ್ಯಾರಂಟಿಗಳನ್ನು ನೀಡಲಾಗಿದೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಂಎಸ್‌ಪಿಗೆ ಕಾನೂನಾತ್ಮಕ ಸ್ಥಾನಮಾನ ನೀಡಿ, ಶೇ.50ರ ಮೀಸಲಾತಿ ಮಿತಿ ರದ್ದು ಪಡಿಸಿ ಮೀಸಲಾತಿ ಮಿತಿ ಹೆಚ್ಚಿಸುವುದಾಗಿ ತಿಳಿಸಿದೆ. ಜಾತಿ ಗಣತಿ ನಡೆಸುವುದಾಗಿಯೂ ತಿಳಿಸಿದ್ದು ಸಾಲಮನ್ನಾ ಆಯೋಗದ ರಚನೆ ಹಾಗೂ ಉದ್ಯೋಗ ಖಾತ್ರಿಯನ್ನು ನೀಡಲಿದೆ ಎಂದು ತಿಳಿಸಲಾಗಿದೆ.


ರಾಜಸ್ಥಾನದಲ್ಲಿ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ಚಿರಂಜೀವಿ ಯೋಜನೆಯ ರೀತಿಯಲ್ಲೇ ದೇಶಾದ್ಯಂತ 25 ಲಕ್ಷ ರೂಪಾಯಿವರೆಗಿನ ಉಚಿತ ಚಿಕಿತ್ಸೆ ಯೋಜನೆಗಾಗಿ ನಗದು ರಹಿತ ವಿಮಾ ಸೌಲಭ್ಯವನ್ನು ಜಾರಿಗೆ ತರಲಾಗುವುದು ಎಂದು ಹೇಳಿದೆ. ಮಹಾಲಕ್ಷ್ಮಿ ಯೋಜನೆಯಡಿ ಕುಟುಂಬದ ಹಿರಿಯ ಮಹಿಳೆಯರಿಗೆ ವಾರ್ಷಿಕ 1 ಲಕ್ಷ ರೂಪಾಯಿ ನೀಡುವುದಾಗಿ ತಿಳಿಸಿದೆ.

ಭರವಸೆಗಳು: ಜಾತಿಗಳು ಮತ್ತು ಉಪ–ಜಾತಿಗಳು ಮತ್ತು ಅವರ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳನ್ನು ಎಣಿಸಲು ಕಾಂಗ್ರೆಸ್ ರಾಷ್ಟ್ರವ್ಯಾಪಿ ಸಾಮಾಜಿಕ–ಆರ್ಥಿಕ ಮತ್ತು ಜಾತಿ ಗಣತಿಯನ್ನು ನಡೆಸುತ್ತದೆ. ಡೇಟಾದ ಆಧಾರದ ಮೇಲೆ ಯೋಜನೆಗಳ ಪ್ರಯೋಜನಗಳನ್ನು ನೀಡುತ್ತದೆ. ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಯ ಮೀಸಲಾತಿ ಮಿತಿಯನ್ನು 50 ಪ್ರತಿಶತದಷ್ಟು ಹೆಚ್ಚಿಸಲು ಸಂವಿಧಾನದ ತಿದ್ದುಪಡಿಯನ್ನು ಅಂಗೀಕರಿಸುವುದಾಗಿ ಕಾಂಗ್ರೆಸ್ ಭರವಸೆ ನೀಡಿದೆ. ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಉದ್ಯೋಗ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ 10 ಪ್ರತಿಶತ ಮೀಸಲಾತಿಯನ್ನು ಯಾವುದೇ ತಾರತಮ್ಯವಿಲ್ಲದೆ ಎಲ್ಲಾ ಜಾತಿಗಳು ಮತ್ತು ಸಮುದಾಯಗಳಿಗೆ ಜಾರಿಗೊಳಿಸಲಾಗುವುದು. ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಾಗಿ ಕಾಯ್ದಿರಿಸಿದ ಪೋಸ್ಟ್‌ಗಳ ಎಲ್ಲಾ ಬ್ಯಾಕ್‌ಲಾಗ್ ಹುದ್ದೆಗಳನ್ನು ಒಂದು ವರ್ಷದ ಅವಧಿಯಲ್ಲಿ ಭರ್ತಿ ಮಾಡಲಾಗುತ್ತದೆ. ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ನಿಯಮಿತ ಉದ್ಯೋಗಗಳ ಗುತ್ತಿಗೆ ವ್ಯವಸ್ಥೆಯನ್ನು ರದ್ದುಗೊಳಿಸಲಾಗುವುದು. ಅಂತಹ ನೇಮಕಾತಿಗಳನ್ನು ಪರ್ಮನೆಂಟ್ ಮಾಡಲಾಗುತ್ತದೆ.

ಎಸ್‌ಸಿ ಮತ್ತು ಎಸ್‌ಟಿಗಳು ಮನೆ ನಿರ್ಮಾಣ, ವ್ಯವಹಾರ ಹಾಗೂ ಆಸ್ತಿ ಖರೀದಿ ಮಾಡಲು ಬಯಸಿದಲ್ಲಿ ಅವರಿಗೆ ಸಾಂಸ್ಥಿಕ ಸಾಲವನ್ನು ನೀಡಲಾಗುತ್ತದೆ. ಭೂ ಸೀಲಿಂಗ್ ಕಾಯ್ದೆಯಡಿ ಬಡವರಿಗೆ ಸರ್ಕಾರಿ ಭೂಮಿ ಮತ್ತು ಹೆಚ್ಚುವರಿ ಭೂಮಿಯನ್ನು ವಿತರಿಸುವುದನ್ನು ಮೇಲ್ವಿಚಾರಣೆ ಮಾಡಲು ಪ್ರಾಧಿಕಾರವನ್ನು ಸ್ಥಾಪಿಸಲಾಗುವುದು. ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳಿಗೆ ಸೇರಿದ ಗುತ್ತಿಗೆದಾರರಿಗೆ ಹೆಚ್ಚಿನ ಸಾರ್ವಜನಿಕ ಕಾಮಗಾರಿ ಗುತ್ತಿಗೆಗಳನ್ನು ನೀಡಲು ಸಾರ್ವಜನಿಕ ಸಂಗ್ರಹಣೆ ನೀತಿಯ ವ್ಯಾಪ್ತಿಯನ್ನು ವಿಸ್ತರಿಸಲಾಗುವುದು. ಒಬಿಸಿ, ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಮೊತ್ತವನ್ನು ದ್ವಿಗುಣಗೊಳಿಸಲಾಗುವುದು. ವಿಶೇಷವಾಗಿ ಉನ್ನತ ಶಿಕ್ಷಣಕ್ಕಾಗಿ. ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ವ್ಯಾಸಂಗ ಮಾಡಲು ನೆರವು ನೀಡಲಾಗುವುದು. ಅವರಿಗೆ ಪಿಎಚ್‌ಡಿ ವಿದ್ಯಾರ್ಥಿವೇತನದ ಸಂಖ್ಯೆಯನ್ನು ದ್ವಿಗುಣಗೊಳಿಸಲಾಗುವುದು. ಕಾಂಗ್ರೆಸ್ ಬಡವರಿಗೆ, ವಿಶೇಷವಾಗಿ ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳ ನೆಟ್‌ವರ್ಕ್ ಸ್ಥಾಪಿಸುತ್ತದೆ ಮತ್ತು ಅದನ್ನು ಪ್ರತಿ ಬ್ಲಾಕ್‌ಗೆ ವಿಸ್ತರಿಸುತ್ತದೆ.

ಅಲ್ಪಸಂಖ್ಯಾತರಿಗೆ ಭರವಸೆ: ಸಂವಿಧಾನದ 15, 16, 25, 26, 28, 29 ಮತ್ತು 30 ನೇ ವಿಧಿಗಳ ಅಡಿಯಲ್ಲಿ ಒಬ್ಬರ ನಂಬಿಕೆ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ನೀಡಲಾದ ಹಕ್ಕುಗಳನ್ನು ಆಚರಿಸುವ ಮೂಲಭೂತ ಹಕ್ಕನ್ನು ಗೌರವಿಸುತ್ತದೆ ಮತ್ತು ನಿರ್ವಹಿಸುತ್ತದೆ. ಸಂವಿಧಾನದ 15, 16, 29 ಮತ್ತು 30ನೇ ವಿಧಿಗಳ ಅಡಿಯಲ್ಲಿ ಖಾತರಿಪಡಿಸಲಾದ ಭಾಷಾ ಅಲ್ಪಸಂಖ್ಯಾತರ ಹಕ್ಕುಗಳನ್ನು ಸಹ ಗೌರವಿಸುತ್ತದೆ ಮತ್ತು ನಿರ್ವಹಿಸುತ್ತದೆ. ಶಿಕ್ಷಣ, ಉದ್ಯೋಗ, ವ್ಯಾಪಾರ, ಸೇವೆಗಳು, ಕ್ರೀಡೆ, ಕಲೆ ಮತ್ತು ಇತರ ಕ್ಷೇತ್ರಗಳಲ್ಲಿ ಹೆಚ್ಚುತ್ತಿರುವ ಅವಕಾಶಗಳ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಮತ್ತು ಯುವಕರನ್ನು ಪ್ರೋತ್ಸಾಹಿಸುವುದು ಮತ್ತು ಸಹಾಯ ಮಾಡುವುದು. ವಿದೇಶದಲ್ಲಿ ಅಧ್ಯಯನಕ್ಕಾಗಿ ಮೌಲಾನಾ ಆಜಾದ್ ವಿದ್ಯಾರ್ಥಿವೇತನ ಯೋಜನೆಯನ್ನು ಮರುಸ್ಥಾಪಿಸುವುದು ಮತ್ತು ವಿದ್ಯಾರ್ಥಿವೇತನದ ಸಂಖ್ಯೆಯನ್ನು ಹೆಚ್ಚಿಸುವುದು. ಅಲ್ಪಸಂಖ್ಯಾತರ ಆರ್ಥಿಕ ಸಬಲೀಕರಣವು ತನ್ನ ಸಂಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳಲು ಭಾರತಕ್ಕೆ ಅತ್ಯಗತ್ಯ ಹೆಜ್ಜೆಯಾಗಿದೆ.

ಬ್ಯಾಂಕ್‌ಗಳು ಯಾವುದೇ ತಾರತಮ್ಯವಿಲ್ಲದೆ ಅಲ್ಪಸಂಖ್ಯಾತರಿಗೆ ಸಾಂಸ್ಥಿಕ ಸಾಲಗಳನ್ನು ನೀಡುವ ವ್ಯವಸ್ಥೆ. ಶಿಕ್ಷಣ, ಆರೋಗ್ಯ ರಕ್ಷಣೆ, ಸಾರ್ವಜನಿಕ ಉದ್ಯೋಗ, ಲೋಕೋಪಯೋಗಿ ಗುತ್ತಿಗೆಗಳು, ಕೌಶಲ್ಯ ಅಭಿವೃದ್ಧಿ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಯಾವುದೇ ತಾರತಮ್ಯವಿಲ್ಲದೆ ಅಲ್ಪಸಂಖ್ಯಾತರಿಗೆ ನ್ಯಾಯಯುತವಾದ ಅವಕಾಶಗಳು ಸಿಗುವಂತೆ ನೋಡಿಕೊಳ್ಳುವುದು. ಪ್ರತಿಯೊಬ್ಬ ನಾಗರಿಕರಂತೆ ಅಲ್ಪಸಂಖ್ಯಾತರಿಗೂ ಉಡುಗೆ, ಆಹಾರ, ಭಾಷೆ ಮತ್ತು ವೈಯಕ್ತಿಕ ಕಾನೂನುಗಳ ಆಯ್ಕೆಯ ಸ್ವಾತಂತ್ರ್ಯ ನೀಡುವುದು. ವೈಯಕ್ತಿಕ ಕಾನೂನಿನಲ್ಲಿ ಸುಧಾರಣೆಗಳನ್ನು ಉತ್ತೇಜಿಸಲಾಗುವುದು. ಅಂತಹ ಸುಧಾರಣೆಯನ್ನು ಸಂಬಂಧಿಸಿದ ಸಮುದಾಯಗಳ ಭಾಗವಹಿಸುವಿಕೆ ಮತ್ತು ಒಪ್ಪಿಗೆಯೊಂದಿಗೆ ಮಾಡಲಾಗುತ್ತದೆ. ಸಂವಿಧಾನದ ಎಂಟನೇ ಶೆಡ್ಯೂಲ್‌ನಲ್ಲಿ ಹೆಚ್ಚಿನ ಭಾಷೆಗಳನ್ನು ಸೇರಿಸುವ ದೀರ್ಘಕಾಲದ ಬೇಡಿಕೆಗಳನ್ನು ಈಡೇರಿಸುವ ಭರವಸೆ.



ಕಾಂಗ್ರೆಸ್ ಲೋಕಸಭೆ ಚುನಾವಣೆಗೆ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿತು. ಈ ವೇಳೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಉಪಸ್ಥಿತರಿದ್ದರು.

ಪ್ರಣಾಳಿಕೆಯಲ್ಲಿ ಐದು ರೀತಿಯ ನ್ಯಾಯವನ್ನು ಪ್ರಸ್ತಾಪಿಸಲಾಗಿದ್ದು, ಕನಿಷ್ಠ ಕೂಲಿ 400 ರೂಪಾಯಿಗೆ ಏರಿಕೆ, 40 ಲಕ್ಷ ಸರ್ಕಾರಿ ಉದ್ಯೋಗ, ಬಡ ಮಹಿಳೆಯರಿಗೆ 1 ಲಕ್ಷ ನೆರವು, ತರಬೇತಿಗೆ 1 ಲಕ್ಷ ನೆರವು, ನಗರ ಉದ್ಯೋಗ ಖಾತ್ರಿ ಯೋಜನೆ ತರುವ ಭರವಸೆ ನೀಡಲಾಗಿದೆ.

ರೈಟ್ ಟು ಅಪ್ರೆಂಟಿಸ್‌ಶಿಪ್ ಕಾಯಿದೆ

25 ವರ್ಷದೊಳಗಿನ ಪ್ರತಿಯೊಬ್ಬ ಡಿಪ್ಲೊಮಾ ಹೊಂದಿರುವವರು ಅಥವಾ ಕಾಲೇಜು ಪದವೀಧರರು ಖಾಸಗಿ ಅಥವಾ ಸಾರ್ವಜನಿಕ ವಲಯದ ಕಂಪನಿಯಲ್ಲಿ ಒಂದು ವರ್ಷದ ತರಬೇತಿಯನ್ನು ಖಾತರಿಪಡಿಸುವ ಹೊಸ ರೈಟ್ ಟು ಅಪ್ರೆಂಟಿಸ್‌ಶಿಪ್ ಕಾಯಿದೆ ಜಾರಿ. ತರಬೇತಿ ಪಡೆಯುವವರಿಗೆ ವರ್ಷಕ್ಕೆ 1 ಲಕ್ಷ ರೂ. ತರಬೇತಿಯು ಕೌಶಲ್ಯಗಳನ್ನು ಒದಗಿಸುತ್ತದೆ. ಉದ್ಯೋಗಾವಕಾಶವನ್ನು ಹೆಚ್ಚಿಸುತ್ತದೆ ಮತ್ತು ಲಕ್ಷಗಟ್ಟಲೆ ಯುವಕರಿಗೆ ಪೂರ್ಣ ಸಮಯದ ಉದ್ಯೋಗಾವಕಾಶಗಳನ್ನು ಒದಗಿಸು ತ್ತದೆ. ಉದ್ಯೋಗ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸೋರಿಕೆಯ ಪ್ರಕರಣಗಳನ್ನು ನಿರ್ಣಯಿಸಲು ತ್ವರಿತ ನ್ಯಾಯಾಲಯಗಳನ್ನು ಒದಗಿಸಲಾಗುವುದು ಮತ್ತು ಸಂತ್ರಸ್ತರಿಗೆ ಪರಿಹಾರ ನೀಡಲಾಗುವುದು. ಕೇಂದ್ರ ಸರ್ಕಾರದಲ್ಲಿ ವಿವಿಧ ಹಂತಗಳಲ್ಲಿ ಮಂಜೂರಾಗಿರುವ ಸುಮಾರು 30 ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ರಾಜ್ಯ ಸರ್ಕಾರಗಳೊಂದಿಗೆ ಒಪ್ಪಿಕೊಂಡ ವೇಳಾಪಟ್ಟಿಯಂತೆ ಪಂಚಾಯತ್ ಮತ್ತು ಪುರಸಭೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಕಾಂಗ್ರೆಸ್ ಸ್ಟಾರ್ಟ್–ಅಪ್‌ಗಳಿಗಾಗಿ ಫಂಡ್ ಆಫ್ ಫಂಡ್ಸ್ ಸ್ಕೀಮ್ ಅನ್ನು ಪುನರ್ ರಚಿಸುತ್ತದೆ. ತಮ್ಮ ಸ್ವಂತ ವ್ಯವಹಾರಗಳನ್ನು ಪ್ರಾರಂಭಿಸಲು ಮತ್ತು 40 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯುವಕರಿಗೆ ಉದ್ಯೋಗವನ್ನು ಒದಗಿಸಲು ಹಣವನ್ನು ಒದಗಿಸಲು – ಎಲ್ಲಾ ಜಿಲ್ಲೆಗಳಲ್ಲಿ ಸಾಧ್ಯವಾದಷ್ಟು, ಲಭ್ಯವಿರುವ ನಿಧಿಯಲ್ಲಿ 50 ಪ್ರತಿಶತವನ್ನು ಸಮಾನವಾಗಿ ವಿನಿಯೋಗಿಸಲಾಗುತ್ತದೆ. ಕೊರೊನಾ ಸಾಂಕ್ರಾಮಿಕ ರೋಗದಿಂದಾಗಿ 1 ಏಪ್ರಿಲ್ 2020 ರಿಂದ 30 ಜೂನ್ 2021 ರವರೆಗೆ ಅರ್ಹತಾ ಸಾರ್ವಜನಿಕ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದ ಅರ್ಜಿದಾರರಿಗೆ ಸರ್ಕಾರವು ಒಂದು ಬಾರಿ ಪರಿಹಾರವನ್ನು ನೀಡುತ್ತದೆ.

ಸರ್ಕಾರಿ ಪರೀಕ್ಷೆಗಳು ಮತ್ತು ಸರ್ಕಾರಿ ಹುದ್ದೆಗಳಿಗೆ ಅರ್ಜಿ ಶುಲ್ಕವನ್ನು ರದ್ದುಗೊಳಿಸಲಾಗುವುದು. ವ್ಯಾಪಕವಾದ ನಿರುದ್ಯೋಗದ ಕಾರಣದಿಂದಾಗಿ ಪರಿಹಾರದ ಒಂದು–ಬಾರಿ ಕ್ರಮವಾಗಿ, ಎಲ್ಲಾ ವಿದ್ಯಾರ್ಥಿ ಶೈಕ್ಷಣಿಕ ಸಾಲಗಳಿಗೆ ಸಂಬಂಧಿಸಿದಂತೆ ಮಾರ್ಚ್ 15, 2024 ರವರೆಗೆ ಪಾವತಿಸದ ಬಡ್ಡಿಯನ್ನು ಒಳಗೊಂಡಂತೆ ಬಾಕಿಯಿರುವ ಮೊತ್ತವನ್ನು ಮನ್ನಾ ಮಾಡಲಾಗುತ್ತದೆ ಮತ್ತು ಬ್ಯಾಂಕ್‌ಗಳಿಗೆ ಸರ್ಕಾರದಿಂದ ಪರಿಹಾರವನ್ನು ನೀಡಲಾಗುತ್ತದೆ. 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ಪ್ರತಿಭಾವಂತ ಮತ್ತು ಉದಯೋನ್ಮುಖ ಕ್ರೀಡಾಪಟುಗಳಿಗೆ ಕಾಂಗ್ರೆಸ್ ತಿಂಗಳಿಗೆ 10,000 ರೂಪಾಯಿಗಳ ಕ್ರೀಡಾ ವಿದ್ಯಾರ್ಥಿವೇತನವನ್ನು ನೀಡುತ್ತದೆ.

ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ದಕ್ಷತೆ ಮತ್ತು ಬ್ಯಾಲೆಟ್ ಪೇಪರ್‌ನ ಪಾರದರ್ಶಕತೆಯನ್ನು ಸಂಯೋಜಿಸಲು ಚುನಾವಣಾ ಕಾನೂನುಗಳನ್ನು ತಿದ್ದುಪಡಿ ಮಾಡುತ್ತದೆ. ಇವಿಎಂಗಳ ಮೂಲಕ ಮತದಾನ ನಡೆಯುತ್ತದೆ ಆದರೆ ಮತದಾರರು ವಿವಿಪ್ಯಾಟ್ ಘಟಕದಲ್ಲಿ ಮತದಾನದ ಚೀಟಿಯನ್ನು ಇಟ್ಟುಕೊಳ್ಳಲು ಮತ್ತು ಸಲ್ಲಿಸಲು ಸಾಧ್ಯವಾಗುತ್ತದೆ. ಎಲೆಕ್ಟ್ರಾನಿಕ್ ಮತಗಳ ಸಂಖ್ಯೆಯನ್ನು ವಿವಿಪ್ಯಾಟ್ ಘಟಕದೊಂದಿಗೆ ಹೊಂದಿಸಲಾಗುತ್ತದೆ. ಎಲೆಕ್ಟ್ರಾನಿಕ್ ಮತ ಎಣಿಕೆಯನ್ನು ವಿವಿಪ್ಯಾಟ್ ಸ್ಲಿಪ್ ಟ್ಯಾಲಿಯೊಂದಿಗೆ ಹೊಂದಾಣಿಕೆ ಮಾಡಲಾಗುತ್ತದೆ.

ಒಂದನೇ ಪುಟದಿಂದ

ಸಂಸದೆ ಸುಮಲತಾ ಬಿಜೆಪಿ ಸೇರ್ಪಡೆ

ಆರ್.ಅಶೋಕ್ ಸೇರಿದಂತೆ ಹಲವು ನಾಯಕರು ಪಕ್ಷದ ಬಾವುಟ ನೀಡಿ, ಬರ ಮಾಡಿಕೊಂಡರು. ನಂತರ ಮಾತನಾಡಿದ ಸುಮಲತಾ ಅವರು, ನರೇಂದ್ರ ಮೋದಿ ಅವರನ್ನು ಮತ್ತೆ ಪ್ರಧಾನಿಯನ್ನಾಗಿ ಮಾಡಬೇಕೆಂಬ ದೃಷ್ಟಿಯಿಂದ ಬಿಜೆಪಿ ಸೇರಿದ್ದೇನೆ. ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ 10 ವರ್ಷಗಳಲ್ಲಿ ಭ್ರಷ್ಟಾಚಾರ ರಹಿತ ಆಡಳಿತ ನೀಡಿ ದೇಶದ ದೃಷ್ಟಿಕೋನ ವನ್ನು ಬದಲಿಸಿದ್ದಾರೆ. 2047ರ ವೇಳೆಗೆ ರಾಷ್ಟ್ರವನ್ನು ವಿಶ್ವದಲ್ಲೇ ಬಲಿಷ್ಠ ದೇಶವನ್ನಾಗಿ ರೂಪಿಸುವ ಕನಸು ಹೊಂದಿದ್ದಾರೆ. ಅವರ ಕನಸು ನನಸು ಮಾಡಲು ನಾವೆಲ್ಲರೂ ಒಗ್ಗೂಡಿ ದುಡಿಯೋಣ. ನಾನು ನನ್ನ ಭವಿಷ್ಯದ

ದೃಷ್ಟಿಯಿಂದ ಬಿಜೆಪಿ ಸೇರ್ಪಡೆಯಾಗಿಲ್ಲ, ಮಂಡ್ಯ ಮತ್ತು ದೇಶದ ಹಿತದೃಷ್ಟಿಯಿಂದ ಬಿಜೆಪಿ ಸೇರಿದ್ದೇನೆ. ಈ ದಿನ ನನ್ನ ರಾಜಕೀಯ ಜೀವನದಲ್ಲಿ ಸುದಿನವಾಗಿದೆ. ಐದು ವರ್ಷಗಳ ಹಿಂದೆ ಮಂಡ್ಯ ಕ್ಷೇತ್ರದಲ್ಲಿ ಐತಿಹಾಸಿಕ ಗೆಲುವು ಸಿಕ್ಕಿತ್ತು. ಆ ಚುನಾವಣೆ, ಆ ಸಂದರ್ಭವನ್ನು ಎಂದಿಗೂ ಮರೆಯುವುದಿಲ್ಲ. ಮಂಡ್ಯದ ಜನತೆ, ಅಂಬರೀಶ್ ಅಭಿಮಾನಿಗಳ ಬಳಗ ನನಗೆ ಬೆನ್ನೆಲುಬಾಗಿ ನಿಂತಿದೆ. ಐದು ವರ್ಷದ ಹಿಂದೆ ಪ್ರಧಾನಿ ನರೇಂದ್ರ ಮೋದಿ ಅವರು ಸಹ ನನಗೆ ಬೆಂಬಲ ನೀಡಿದ್ದರು, ಅದನ್ನು ನಾನು ಎಂದಿಗೂ ಮರೆಯುವುದಿಲ್ಲ ಎಂದರು. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆದ ಸಂದರ್ಭದಲ್ಲಿ ನನ್ನನ್ನು ಕರೆದು ಕ್ಷೇತ್ರಕ್ಕೆ ಏನಾಗಬೇಕೆಂದು ಮಾಹಿತಿ ಪಡೆದು, ಜಿಲ್ಲೆಯ ಅಭಿವೃದ್ಧಿಗೆ ನಾಂದಿ ಹಾಡಿದರು.

ಮಂಡ್ಯದ ಸಕ್ಕರೆ ಕಾರ್ಖಾನೆ ಪುನರುಜ್ಜೀವನಕ್ಕೆ 50 ಕೋಟಿ ರೂ. ನೀಡುವ ಮೂಲಕ ಕಾರ್ಖಾನೆಯಲ್ಲಿ ಮತ್ತೆ ಕಬ್ಬು ಅರೆಯುವುದಕ್ಕೆ ಚಾಲನೆ ನೀಡಿದರು. ಇಂದಿನ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಕೆಲವರು ನಾವೇ ಎಲ್ಲಾ ಹೊಸದಾಗಿ ಮಾಡುತ್ತಿದ್ದೇವೆ ಎನ್ನುತ್ತಿದ್ದಾರೆ. ಸತ್ಯ ಏನೆಂಬುದನ್ನು ನಿಮ್ಮ ಮುಂದಿಟ್ಟಿದ್ದೇನೆ ಎಂದರು.

ಮಂಡ್ಯದಲ್ಲಿ ಎನ್‌ಡಿಎ ಜಯ ನಿಶ್ಚಿತ: ಸುಮಲತಾ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡ ನಂತರ ಮಾತನಾಡಿದ ವಿಜಯೇಂದ್ರ, ಕರ್ನಾಟಕ ಸೇರಿ ದೇಶಾದ್ಯಂತ ಬಿಜೆಪಿ ಹಾಗೂ ಮೋದಿ ಪರ ಅಲೆ ಇದೆ. ಅವರ ನಾಯಕತ್ವ ಮೆಚ್ಚಿ ಸುಮಲತಾ ಅಂಬರೀಶ್ ಅವರು ಬಿಜೆಪಿ ಸೇರ್ಪಡೆಯಾಗಿದ್ದಾರೆ. ಇದರಿಂದ ಪಕ್ಷಕ್ಕೆ ಬಲ ಬಂದಿದೆ. ಈ ಲೋಕಸಭೆ ಚುನಾವಣೆಯಲ್ಲಿ ಮಂಡ್ಯದಲ್ಲಿ ಎನ್‌ಡಿಎ ಗೆಲುವು ನಿಶ್ಚಿತ ಎಂದರು. ಮೋದಿ ಪರ ಅಲೆಯಿಂದಾಗಿ ಕಾಂಗ್ರೆಸ್ಸಿನ ಯಾವುದೇ ಸಚಿವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಮುಂದಾಗಿಲ್ಲ, 28ಕ್ಕೆ 28 ಕ್ಷೇತ್ರಗಳಲ್ಲಿ ಬಿಜೆಪಿ–ಜೆಡಿಎಸ್ ಗೆಲುವಿನ ಸಂಕಲ್ಪ ನಮ್ಮದು ಎಂದರು. ಇದೇ ಸಂದರ್ಭದಲ್ಲಿ ಕೊಪ್ಪಳ ಕ್ಷೇತ್ರದ ಮಾಜಿ ಸಂಸದ ಎಸ್.ಶಿವರಾಮೇಗೌಡ, ವಿಜಯಪುರ ಜಿಲ್ಲೆಯ ಯುವ ನಾಯಕ ಹಾಗೂ ಸಚಿವ ಶಿವಾನಂದ ಪಾಟೀಲ್ ಸಹೋದರನ ಪುತ್ರ ಹರ್ಷಗೌಡ ಶಿವಶರಣ ಪಾಟೀಲ್, ಮಾಜಿ ಕ್ರಿಕೆಟ್ ಪಟು ದೊಡ್ಡ ಗಣೇಶ್, ಗಾಯತ್ರಿ ತಿಮ್ಮಾರೆಡ್ಡಿ, ಉತ್ತರ ಕನ್ನಡ ಜಿಲ್ಲೆ ಹಳಿಯಾಳದ ಶ್ರೀನಿವಾಸ್, ತುಕಾರಾಂಗೌಡ ಪಾಟೀಲ್, ಕಾಂಗ್ರೆಸ್ ಮುಖಂಡ ಪ್ರಭುರಾಜ ಎಸ್. ಪಾಟೀಲ್, ಗಂಗಾವತಿ ತಾಲೂಕು ಪಂಚಾಯತ್ ಅಧ್ಯಕ್ಷ ವೀರಭದ್ರಗೌಡ ಸೇರಿದಂತೆ ಹಲವು ಮಂದಿ ಪಕ್ಷ ಸೇರ್ಪಡೆಗೊಂಡರು.

ತಾಯಿ, ಪುತ್ರಿಯರು ದುರ್ಮರಣ

ಸಹಾಯದಿಂದ ಶವಗಳನ್ನು ಜಲಾಶಯದಿಂದ ಹೊರ ತೆಗೆದು, ಮಲೆಮಹದೇಶ್ವರಬೆಟ್ಟ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದರು. ನಂತರ ವಾರಸುದಾರರಿಗೆ ಶವಗಳನ್ನು ಹಸ್ತಾಂತರಿಸಿದರು. ಮಹದೇಶ್ವರಬೆಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಮದಲ್ಲಿ ನೀರವ ಮೌನ: ಒಂದೇ ಕುಟುಂಬದ ಮೂವರು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ವಿಚಾರ ಗೋಪಿನಾಥಂ ಸುತ್ತಮುತ್ತಲಿನ ಗ್ರಾಮಸ್ಥರಿಗೆ ತಿಳಿಯುತ್ತಿದ್ದಂತೆ ಜಲಾಶಯದ ಬಳಿ ಭಾರೀ ಸಂಖ್ಯೆಯಲ್ಲಿ ಧಾವಿಸಿದರು. ಈ ದುರಂತ ಕಂಡು ಎಲ್ಲರೂ ಕಣ್ಣೀರು ಸುರಿಸಿದ್ದಾರೆ. ಅಯ್ಯನ್ ಹಾಗೂ ಮೀನಾ ದಂಪತಿ ಕೂಲಿ ಕೆಲಸ ಮಾಡಿಕೊಂಡು ತನ್ನ ಮೂವರು ಮಕ್ಕಳೊಂದಿಗೆ ಜೀವನ ಸಾಗಿಸುತ್ತಿದ್ದರು. ಆದರೆ, ಬೆಳಗ್ಗೆ ಖುಷಿಯಿಂದ ಇದ್ದ ಕುಟುಂಬಕ್ಕೆ ಮಧ್ಯಾಹ್ನದ ವೇಳೆಗೆ ಬರಸಿಡಿಲಿನಂತೆ ದುರಂತ ಸಂಭವಿಸಿದೆ. ಗ್ರಾಮದಲ್ಲಿ ನೀರವ ಮೌನ ಆವರಿಸಿದೆ. ಮೃತರ ಕುಟುಂಬಕ್ಕೆ ಸರ್ಕಾರ ಹಾಗೂ ಜಿಲ್ಲಾಡಳಿತದಿಂದ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ರಾಜ್ಯದಲ್ಲಿ 6 ಮಂದಿಗೆ ಕಾಲರಾ

ಆರೋಗ್ಯ ಇಲಾಖೆಯಿಂದ ಎಚ್ಚರಿಕಾ ಕ್ರಮ



ಕಾಲರಾ ವರದಿ	
2019	02
2020	40
2021	20
2022	42
2023	108
2024	06

ಬೆಂಗಳೂರು, ಏ.5– ಬಿಸಿ ಗಾಳಿಯ ಜೊತೆಗೆ ಹೆಚ್ಚು ತಾಪಮಾನ ಪರಿಣಾಮ ಕಾಲರಾ ಭೀತಿ ಹೆಚ್ಚಾಗುತ್ತಿದ್ದು, ರಾಜ್ಯದಲ್ಲಿ 6 ಮಂದಿಗೆ ಕಾಲರಾ ರೋಗ ದೃಢಪಟ್ಟಿದೆ.

ಬಿಸಿಲಿನ ತಾಪದಿಂದ ಏಕಾಏಕಿ ಶಂಕಿತ ಕಾಲರಾ ಹಾಗೂ ಬಿಸಿಗಾಳಿ ಹಿನ್ನೆಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಡಿ.ರಂದೀಪ್ ಸುದ್ದಿಗೋಷ್ಠಿ ನಡೆಸಿ, ಬೆಂಗಳೂರು ನಗರದಲ್ಲಿ ಇಬ್ಬರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮೂವರು ಹಾಗೂ ರಾಮನಗರದ ಒಬ್ಬರು ಸೇರಿ ಒಟ್ಟು ಆರು ಮಂದಿಯಲ್ಲಿ ಕಾಲರಾ ಪತ್ತೆಯಾಗಿದೆ ಎಂದು ತಿಳಿಸಿದ್ದಾರೆ.

ವ್ಯಕ್ತಿ ಸಾವು; ಪರೀಕ್ಷೆ: ಕಲಬುರಗಿ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ತಲಾ ಇಬ್ಬರು ಮೃತಪಟ್ಟಿದ್ದು, ಬಿಸಿಲಿನ ತಾಪದಿಂದ ಅವರು ಮೃತಪಟ್ಟಿಲ್ಲ ಎಂಬ ಮಾಹಿತಿ ಬಂದಿದೆ ಇತರೆ ರೋಗಗಳಿಂದ ಬಳಲುತ್ತಿದ್ದ ಓರ್ವ ವ್ಯಕ್ತಿ ಮೃತಪಟ್ಟಿದ್ದಾನೆ. ಆತನ ಸಾವಿಗೆ ಬಿಸಿಲಿನ ತಾಪ ಕಾರಣವಿರಬಹುದೇ ಎಂಬುದರ ಬಗ್ಗೆ ಪರೀಕ್ಷೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ಬೆಡ್ ಮೀಸಲು: ಬಿಸಿಗಾಳಿ ಆಘಾತದ ನಿರ್ವಹಣೆಗೆ ಜಿಲ್ಲಾಸ್ಪತ್ರೆಗಳಲ್ಲಿ 5, ತಾಲೂಕು ಆಸ್ಪತ್ರೆಗಳಲ್ಲಿ 2 ಬೆಡ್ ಮೀಸಲಿಡಲಾಗಿದೆ. ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿ, ಆರೋಗ್ಯ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರಿಗೆ ತರಬೇತಿ ನೀಡಲಾಗುವುದು. ಬಿಸಿಲಿನ ತಾಪ, ಬಿಸಿಗಾಳಿ, ಕಾಲರಾ ಬಗ್ಗೆ ಕಟ್ಟೆಚ್ಚರ ವಹಿಸಲು ಸುತ್ತೋಲೆ ಹೊರಡಿಸಿದ್ದು, ಸಾಂಕ್ರಾಮಿಕ ರೋಗಿಗಳ ಡೇಟಾ ನೀಡಲು ಖಾಸಗಿ ಆಸ್ಪತ್ರೆಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಬಿಸಿಲಿನ ತಾಪ ಸಂಬಂಧ 341, ಹೀಟ್ ಕ್ರಾಂಪ್‌ನಿಂದ 212 ಹಾಗೂ ಹೀಟ್ ಎಕ್ಸಾಷನ್‌ನ 58 ಪ್ರಕರಣಗಳು ವರದಿ ಆಗಿದೆ. ಬಿಸಿಲಿನ ತಾಪದಿಂದ ಯಾವುದೇ ಸಾವು ಸಂಭವಿಸಿಲ್ಲ. ಅಗತ್ಯವಿರುವ ಎಲ್ಲಾ ಔಷಧಿಗಳನ್ನು ಸಂಗ್ರಹಿಸಿಡಲು ತಿಳಿಸಿದ್ದೇವೆ. ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ತಪ್ಪು ಗ್ರಹಿಕೆ ಬೇಡ: ಬರೀ ವಾಂತಿ–ಭೇದಿಯನ್ನು ಕಾಲರಾ ಲಕ್ಷಣ ಎಂದು ತಿಳಿದು ಆತಂಕಕ್ಕೆ ಒಳಗಾಗಬೇಡಿ. ಕಳಪೆ ಗುಣಮಟ್ಟದ ಆಹಾರ ಮತ್ತು ನೀರು ಕುಡಿಯುವುದರಿಂದ ಕಾಲರಾ ಬರುವ ಸಾಧ್ಯತೆ ಇದೆ. ಕಾಲರಾದ ಬಗ್ಗೆ ಸುಳ್ಳು ಮಾಹಿತಿಗಳು ಹರಿದಾಡುತ್ತಿದೆ. ಶೇ.50ರಷ್ಟು ಕಾಲರಾ ಏರಿಕೆ ಆಗಿದೆ ಎನ್ನುವುದು ಸುಳ್ಳು. ಕಾಲರಾ ಸ್ಫೋಟವಾಗಿಲ್ಲ. ಒಂದೇ ಪ್ರದೇಶದಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗಿಲ್ಲ ಎಂದರು.

ಅನುಸರಿಸಿ: ಕೈ ಶುದ್ಧವಾಗಿರಬೇಕು, ಕೈ ಸ್ವಚ್ಛಗೊಳಿಸಿಯೇ ಆಹಾರ ಸೇವಿಸಬೇಕು, ಶುದ್ಧ ಕುಡಿಯುವ ನೀರು ಬಳಸಬೇಕು, ಸೀವೇಜ್ ಹಾಗೂ ಕುಡಿಯುವ ನೀರು ಬೆರೆಯದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಮತದಾನ ಜಾಗೃತಿ

ಮೈಸೂರು, ಏ.5(ಎಂಕೆ)– ಮೈಸೂರು ನಗರ ಪಾಲಿಕೆ, ಬಾಲ್ಯ ಫೌಂಡೇಶನ್ ವತಿಯಿಂದ ನಾಳೆ(ಏ.6) ಬೆಳಗ್ಗೆ 10 ಗಂಟೆಗೆ ಪಾಲಿಕೆ ವಲಯ ಕಚೇರಿ–4ರ ವ್ಯಾಪ್ತಿಯಲ್ಲಿ ಮತದಾನ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜಾಗೃತಿ ಕಾರ್ಯಕ್ರಮದಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಸೇರಿದಂತೆ 1100 ಮಂದಿ ವಿದ್ಯಾರ್ಥಿಗಳು ಭಾಗವಹಿಸಲಿದ್ದು, ಮತದಾನ ಜಾಗೃತಿಯ ಫಲಕಗಳನ್ನಿಡಿದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಚೆನ್ನೈ ವಿರುದ್ಧ ಎಸ್‌ಆರ್‌ಹೆಚ್‌ಗೆ ಭರ್ಜರಿ ಜಯ



ಹೈದರಾಬಾದ್, ಏ.5– ಅಭಿಷೇಕ್ ಶರ್ಮಾ ಅವರ ಮಿಂಚಿನ ಬ್ಯಾಟಿಂಗ್ ಹಾಗೂ ಐಡೆನ್ ಮಾರ್ಕ್ರಾಮ್ ಅವರ ಅರ್ಧಶತಕದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 6 ವಿಕೆಟ್‌ಗಳ ಜಯ ಸಾಧಿಸಿದೆ.

ಇಲ್ಲಿನ ರಾಜೀವ್ ಗಾಂಧಿ ಅಂತರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಚೆನ್ನೈ ನೀಡಿದ 166 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಸನ್‌ರೈಸರ್ಸ್ ಹೈದರಾಬಾದ್ ಸ್ಫೋಟಕ ಆರಂಭ ಪಡೆಯಿತು. ಟ್ರಾವಿಸ್ ಹೆಡ್ ಹಾಗೂ ಅಭಿಷೇಕ್ ಶರ್ಮಾ ಆರಂಭಕ್ಕೆ ಸಿಎಸ್‌ಕೆ ಬೆಚ್ಚಿ ಬಿದ್ದಿತ್ತು. ಅಭಿಷೇಕ್ ಶರ್ಮಾ 12 ಎಸೆತದಲ್ಲಿ 3 ಬೌಂಡರಿ ಹಾಗೂ 4 ಸಿಕ್ಸರ್ ಮೂಲಕ 37 ರನ್ ಸಿಡಿಸಿ ಔಟಾದರು. ಮತ್ತೊಂದೆಡೆ 24 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಒಳಗೊಂಡ 31 ರನ್ ಗಳಿಸಿ ಟ್ರಾವಿಸ್ ಹೆಡ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಐಡೆನ್ ಮಾರ್ಕ್ರಾಮ್ ಅರ್ಧಶತಕ ಸಿಡಿಸಿ ಮಿಂಚಿದರು. ಆದರೆ ತಂಡ ಗೆಲುವಿನ ಸನಿಹಕ್ಕೆ ಬರುತ್ತಿದ್ದ ವೇಳೆ ಮಾರ್ಕ್ರಾಮ್ 36 ಎಸೆತಗಳಲ್ಲಿ 4 ಬೌಂಡರಿ, 1 ಸಿಕ್ಸರ್ ಒಳಗೊಂಡ 50 ರನ್ ಗಳಿಸಿ ನಿರ್ಗಮಿಸಿದರು. ಶೆಹಬಾಜ್ ಅಹಮ್ಮದ್ 18 ರನ್ ಸಿಡಿಸಿ ಔಟಾದರು. ಹೆನ್ರಿಚ್ ಕ್ಲಾಸೆನ್ ಹಾಗೂ ನಿತೀಶ್ ರೆಡ್ಡಿ ಅಂತಿಮ ಹಂತದಲ್ಲಿ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶನ ನೀಡಿದರು. ನಿತೀಶ್ ರೆಡ್ಡಿ ಅಜೇಯ 14 ರನ್ ಹಾಗೂ ಕ್ಲಾಸೆನ್ ಅಜೇಯ 10 ರನ್ ಸಿಡಿಸಿದರು. ಈ ಮೂಲಕ ಸನ್‌ರೈಸರ್ಸ್ ಹೈದರಾಬಾದ್ 18.1 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಗುರಿ ತಲುಪಿತು. ಚೆನ್ನೈ ಪರ ಮೊಯಿನ್ ಅಲಿ 2, ಮತೀಶ ತೀಕ್ಷಣ, ದೀಪಕ್ ಚಹಾರ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 165 ರನ್ ಗಳಿಸಿತು. ಬ್ಯಾಟಿಂಗ್ ಇಳಿದ ಚೆನ್ನೈ ಸೂಪರ್ ಕಿಂಗ್ಸ್ ನಿರೀಕ್ಷಿತ ಆರಂಭ ಪಡೆಯಲಿಲ್ಲ. ತಂಡದ ಮೊತ್ತ 25ರನ್ ಆಗುವಷ್ಟರಲ್ಲಿ ರಚಿನ್ ರವೀಂದ್ರ 12 ರನ್ ಸಿಡಿಸಿ ವಿಕೆಟ್ ಒಪ್ಪಿಸಿದರು. ನಾಯಕ ರುತುರಾಜ್ ಗಾಯಕ್ವಾಡ್ 26 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಅಜಿಂಕ್ಯಾ ರಹಾನೆ ನಿಧಾನಗತಿಯಲ್ಲಿ ಬ್ಯಾಟ್ ಬೀಸಿ 35 ರನ್ ಗಳಿಸಿ ಔಟಾದರು. ಈ ವೇಳೆ ಕ್ರೀಸ್‌ಗೆ ಆಗಮಿಸಿದ ಶಿವಂ ದುಬೆ 24 ಎಸೆತಗಳಲ್ಲಿ 2 ಬೌಂಡರಿ, 4 ಸಿಕ್ಸರ್ ಒಳಗೊಂಡ ಬಿರುಸಿನ 45 ರನ್ ಗಳಿಸಿ ಅಬ್ಬರಿಸಿ ವಿಕೆಟ್ ಒಪ್ಪಿಸಿದರು. ರವೀಂದ್ರ ಜಡೇಜಾ ಹೋರಾಟ ಚೆನ್ನೈ ತಂಡದ ಮೊತ್ತವನ್ನು 150ರ ಗಡಿ ದಾಟಿಸಿತು. ಇತ್ತ ಡ್ಯಾರಿಯಲ್ ಮಿಚೆಲ್ ಸಾಥ್ ಉತ್ತಮ ಸಾಥ್ ನೀಡಿದರು. ಆದರೆ ಮಿಚೆಲ್ 11 ಎಸೆತದಲ್ಲಿ 13 ರನ್ ಸಿಡಿಸಿದರೆ, ರವೀಂದ್ರ ಜಡೇಜಾ 23 ಎಸೆತದಲ್ಲಿ ಅಜೇಯ 31 ರನ್ ಗಳಿಸಿದರು. ಇತ್ತ ಧೋನಿ ಕೊನೆ ಹಂತದಲ್ಲಿ 2 ಎಸೆತದಲ್ಲಿ 1 ರನ್ ಸಿಡಿಸಿದರು. ಹೈದರಾಬಾದ್ ಪರ ಭುವನೇಶ್ವರ್ ಕುಮಾರ್, ಟಿ.ನಟರಾಜನ್, ಪ್ಯಾಟ್ ಕಮ್ಮಿನ್ಸ್, ಶಹಬ್ಬಾಸ್ ಅಹಮದ್ ಹಾಗೂ ಜಯದೇವ್ ಉನಾದ್ಕಟ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಅಭಿಷೇಕ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು v/s ರಾಜಸ್ಥಾನ್ ರಾಯಲ್ಸ್
ಸ್ಥಳ: ಜೈಪುರ, ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣ.
ಸಮಯ: ಮಧ್ಯಾಹ್ನ 7.30ಕ್ಕೆ

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಕೊಲ್ಕತ್ತಾ	3	3	0	0	6
ರಾಜಸ್ಥಾನ್	3	3	0	0	6
ಚೆನ್ನೈ	4	2	2	0	4
ಲಕ್ನೋ	3	2	1	0	4
ಹೈದರಾಬಾದ್	4	2	2	0	4
ಪಂಜಾಬ್	4	2	2	0	4
ಗುಜರಾತ್	4	2	2	0	4
ಬೆಂಗಳೂರು	4	1	3	0	2
ಡೆಲ್ಲಿ	4	1	3	0	2
ಮುಂಬೈ	3	0	3	0	0

ಮೈಸೂರು ಮಿತ್ರ
ಶನಿವಾರ 6 ಏಪ್ರಿಲ್ 2024

ಮಂತ್ರಿಗಿರಿ ಹೋಗುವ ಭಯದಿಂದ ಪುತ್ರನಿಗೆ ಟಿಕೆಟ್ ಕೊಡಿಸಿದ್ದಾರೆ

• ಸಚಿವ ಹೆಚ್‌ಸಿಎಂ ವಿರುದ್ಧ ಮಾಜಿ ಎಂಎಲ್‌ಸಿ ಸಿ.ರಮೇಶ್ ವ್ಯಂಗ್ಯ • ಬಿಜೆಪಿ ಅಭ್ಯರ್ಥಿ ಪರ ಪ್ರಚಾರ

ತಿ.ನರಸೀಪುರ, ಏ.5– ಚಾಮರಾಜನಗರದಲ್ಲಿ ನಿಂತು ಸೋತರೆ ತಮ್ಮ ಮಂತ್ರಿಗಿರಿ ಹೋಗುತ್ತದೆ ಎಂಬ ಭಯದಿಂದ ಸಚಿವ ಮಹದೇವಪ್ಪ ತಮ್ಮ ಮಗನಿಗೆ ಟಿಕೆಟ್ ಕೊಡಿಸಿ ಚುನಾವಣೆಯಲ್ಲಿ ನಿಲ್ಲಿಸಿ ದಾರೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ವ್ಯಂಗ್ಯವಾಡಿದರು.

ಪಟ್ಟಣದ ಮಹದೇವಪ್ಪ ಸ್ಮಾರಕ ಭವನದಲ್ಲಿ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಭೈರಾಪುರ ಮಹಾಶಕ್ತಿ ಕೇಂದ್ರದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಮಹದೇವಪ್ಪನವರ ಮಗನಿಗೆ ಲೋಕಸಭಾ ಸದಸ್ಯನಾಗುವಷ್ಟು ಪ್ರಬುದ್ಧತೆ ಇದೆಯೇ ಎಂದು ಪ್ರಶ್ನಿಸಿದ ಅವರು, ಈಗ ರಾಜ್ಯದಲ್ಲಿ ಗಾಂಧೀಜಿಯವರ ಕಾಂಗ್ರೆಸ್ ಎಲ್ಲಿದೆ. ಪ್ರಸ್ತುತ ಇರುವುದು ಸಿದ್ದರಾಮಯ್ಯ ಮತ್ತು ಮಹದೇವಪ್ಪನವರ ಕಾಂಗ್ರೆಸ್ ಹೊರತು ಗಾಂಧೀಜಿಯವರ ಕಾಂಗ್ರೆಸ್ ಅಲ್ಲ. ಮುನಿಸಿಪಾಲಿಟಿಯಲ್ಲಿ ಸ್ವಚ್ಛತೆಯಾಗುತ್ತಿಲ್ಲ. ಶಾಸಕರಾಗಿ ಜನರ ಸಮಸ್ಯೆ ಕೇಳದೆ ಮಂತಿಯಾಗಿ ಇದೀಗ ಮಗನನ್ನು ಎಂ.ಪಿ ಮಾಡಲು ಹೊರಟಿದ್ದಾರೆ ಎಂದು ಆರೋಪಿಸಿದರು.

ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಮಾತನಾಡಿ, ಒಂದು ಬಾರಿ ಶಾಸಕನಾಗಿ ಉತ್ತಮ ಕೆಲಸ ಮಾಡಿದ್ದೇನೆ. ಬಳಿಕವೂ ನಿರಂತರವಾಗಿ ಕಾರ್ಯಕರ್ತರೊಡನಿದ್ದು, ಜನರ ನೋವು ನಲಿವುಗಳಿಗೆ ಸ್ಪಂದಿಸಿ, ಪ್ರತಿಯೊಬ್ಬರ ಭಾವನೆಗಳನ್ನು ಗೌರವಿಸಿ ಕೆಲಸ ಮಾಡಿದ್ದೇನೆ. ಯಾರಿಗೂ ನೋವು ಮಾಡಿಲ್ಲ. ಈಗ ಬಿಜೆಪಿ ವರಿಷ್ಠರು ನನ್ನ ಮೇಲೆ ವಿಶ್ವಾಸವಿಟ್ಟು ಅವಕಾಶ ಕೊಟ್ಟಿದ್ದಾರೆ. ಮತದಾರರು ನನಗೆ ಆಶೀರ್ವಾದ ಮಾಡಿದರೆ ನಿಮ್ಮ ಮನೆ ಮಗನಂತೆ ಕೆಲಸ ಮಾಡುತ್ತೇನೆ ಎಂದು ನುಡಿದರು.

ಈ ಚುನಾವಣೆ ಪ್ರಧಾನಿ ನರೇಂದ್ರ ಮೋದಿ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಚುನಾವಣೆ, ನಿಮ್ಮೆಲ್ಲರ ಚುನಾವಣೆ. ಪ್ರತಿ ಬೂತ್ ಮಟ್ಟದಲ್ಲಿ ಜನರಿಗೆ ಪ್ರಧಾನಿ ಮೋದಿಯವರ ಆಡಳಿತ, ಜನಪರ ಯೋಜನೆಗಳನ್ನು ಮನವರಿಕೆ ಮಾಡಿ ಮತ ಪಡೆಯಲು ಶ್ರಮಿಸುವಂತೆ ಕೋರಿದರು.

ಮೋದಿಯವರ ವಿಕಸಿತ ಭಾರತದಲ್ಲಿ ಪ್ರತಿ ಹೆಣ್ಣು ಮಕ್ಕಳು ದುಡಿಮೆ ಮಾಡಿ ಅವರೇ ದೇಶಕ್ಕೆ ಆಧಾರಸ್ಥಂಭವಾಗುವಂತಹ 32 ಯೋಜನೆಗಳನ್ನು ಕೊಟ್ಟಿದ್ದಾರೆ. ಮೋದಿ ಅವರ ಯೋಜನೆಯಲ್ಲಿ ಯಾರೊಬ್ಬರೂ ಬ್ಯಾಂಕ್‌ನಲ್ಲಿ ಯಾವುದೇ ಅಡಮಾನ ಇಡದೇ ಆನ್‌ಲೈನ್ ಮೂಲಕ 10 ಲಕ್ಷದಿಂದ 1 ಕೋಟಿ ವರೆಗೆ ಸಾಲ ಪಡೆಯಬಹುದಾಗಿದೆ. ಹಾಗಾಗಿ ಮೋದಿಯವರು ಮತ್ತೆ 3ನೇ ಬಾರಿಗೆ ದೇಶದ ಪ್ರಧಾನಿಯಾಗಬೇಕೆಂಬ ಕನಸು ಪ್ರತಿಯೊಬ್ಬ ಭಾರತೀಯನದ್ದಾಗಿದ್ದು, ಸುಭದ್ರ ಸರ್ಕಾರಕ್ಕಾಗಿ ಬಿಜೆಪಿ ಬೆಂಬಲಿಸುವಂತೆ ಅವರು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎನ್.ಮಹೇಶ್, ಪುರಸಭಾ ಸದಸ್ಯ ಅರ್ಜುನ್ ರಮೇಶ್, ಜಿಪಂ ಮಾಜಿ ಸದಸ್ಯ ಸದಾನಂದ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಸಿದ್ದಪ್ಪ, ಕ್ಷೇತ್ರ ಅಧ್ಯಕ್ಷ ಸತೀಶ್, ಭೈರಾಪುರ ಶಕ್ತಿ ಕೇಂದ್ರದ ಅಧ್ಯಕ್ಷ ಬಾಗಳಿ ಯೋಗೇಶ್, ಬಾಲು, ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಮಹದೇವಯ್ಯ, ಮಮತಾ ಶಿವಪ್ರಸಾದ್, ಸ್ಟಾರ್ ಮಲ್ಲೇಶ, ಮಣಿಕಂಠರಾಜ್‌ಗೌಡ, ಓಬಿಸಿ ಕಾರ್ಯದರ್ಶಿ ಮಹೇಶ್, ಮುದ್ದುಕೃಷ್ಣ, ವೆಂಕಟರಮಶೆಟ್ಟಿ, ಸಿಡಿ ವೆಂಕಟೇಶ್, ಕಾರ್ ಮಲ್ಲಪ್ಪ, ಕಿರಗಸೂರು ಮಹದೇವಸ್ವಾಮಿ, ಚೌಹಳ್ಳಿ ಸಿದ್ದರಾಜು, ಶಿವರಾಜ್, ಹಾಜರಿದ್ದರು.


ಬಿಜೆಪಿ ಕಾರ್ಯಕರ್ತರ ಸಭೆಯನ್ನು ಅಭ್ಯರ್ಥಿ ಎಸ್.ಬಾಲರಾಜ್ ಉದ್ಘಾಟಿಸಿದರು.

ತೋಟದಪ್ಪ ಬಸವರಾಜು ಪ್ರತ್ಯಕ್ಷ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮಗೆ ಟಿಕೆಟ್ ಸಿಗಲಿಲ್ಲ ಎಂದು ಮುನಿಸಿಕೊಂಡು ಬಿಜೆಪಿ ಪಕ್ಷಕ್ಕೆ ರಾಜೀನಾಮೆ ನೀಡಿದ್ದ ಹಿರಿಯ ಮುಖಂಡ ತೋಟದಪ್ಪ ಬಸವರಾಜು ಇಂದು ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಕಾಣಿಸಿಕೊಂಡು ಅಚ್ಚರಿ ಮೂಡಿಸಿದರು.

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಆದೇಶದ ಮೇರೆಗೆ ನಾನು ಮತ್ತೆ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡಿದ್ದು, ಪಕ್ಷದ ಅಭ್ಯರ್ಥಿ ಬಾಲರಾಜ್ ಪರ ಚುನಾವಣಾ ಪ್ರಚಾರದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತೇನೆ ಎಂದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಫ್ಯಾಮಿಲಿ ಸ್ಟಾರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಯುವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ಯಾಮಿಲಿ ಸ್ಟಾರ್ (ತೆ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು
ಪ್ರಭಾ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಬೆ.8ಕ್ಕೆ, ಮ.3.50ಕ್ಕೆ, ಕುಂಗ್ ಫು ಪಾಂಡ 4 (3ಡಿ) (ಇಂ): ಬೆ.11.20ಕ್ಕೆ, ಕ್ರೂವ್ (ಹಿಂ): ಮ.1.20ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ದಿ ಫಸ್ಟ್ ಓಮನ್ (ಇಂ): ಬೆ.10.50ಕ್ಕೆ, ರಾ.10.05ಕ್ಕೆ, ಅವತಾರ ಪುರುಷ 2 (ಕ): ಮ.1.35ಕ್ಕೆ, ಸಂ.4.15ಕ್ಕೆ, ಆಡುಜೀವಿತಂ (ಮ): ಸಂ.6.50ಕ್ಕೆ
ಸ್ಕ್ರೀನ್ 3	ಮ್ಯಾಟ್ನಿ (ಕ): ಬೆ10.35ಕ್ಕೆ, ರಾ.7.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.1.15ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಸಂ.4ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ರಾ.9.55ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಮ.1.35ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಅವತಾರ ಪುರುಷ 2 (ಕ): ಬೆ.9.35ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಯುವ (ಕ): ಬೆ9.30ಕ್ಕೆ ಮ.12.45ಕ್ಕೆ, ಸಂ.6.45ಕ್ಕೆ ರಾ.10ಕ್ಕೆ, ಕ್ರೂವ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 3	ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.55ಕ್ಕೆ, ಮಾರಿಗೋಲ್ಡ್ (ಕ): ಮ.1.20ಕ್ಕೆ, ಆಡುಜೀವಿತಂ (ಮ): ಸಂ.4.05ಕ್ಕೆ, ಅವತಾರ ಪುರುಷ 2 (ಕ): ರಾ.7.40ಕ್ಕೆ, ಮ್ಯಾಟ್ನಿ (ಕ): ರಾ.10.20ಕ್ಕೆ.
ಸ್ಕ್ರೀನ್ 4	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಬೆ.10.40ಕ್ಕೆ, ಸಂ.4.40ಕ್ಕೆ, ದಿ ಫಸ್ಟ್ ಓಮನ್ (ಇಂ): ಮ.1.15ಕ್ಕೆ, ರಾ.7.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ10.35ಕ್ಕೆ ಸಪ್ತಸಾಗರದಾಚೆ ಎಲ್ಲೋ 2 (ಕ): ಮ1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಹಿಂ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸರಗೂರಲ್ಲಿ ಬಾಬೂಜಿ ಜಯಂತಿ


ಸರಗೂರಲ್ಲಿ ಡಾ.ಬಾಬು ಜಗಜೀವನರಾಂ ಜಯಂತಿ ಆಚರಿಸಲಾಯಿತು.

ಸರಗೂರು, ಏ.5– ಪಟ್ಟಣದಲ್ಲಿ ತಾಲೂಕು ಆಡಳಿತದ ವತಿಯಿಂದ ಹಸಿರು ಕ್ರಾಂತಿ ಹರಿಕಾರ ಬಾಬು ಜಗಜೀವನ ರಾಂ ಜಯಂತಿ ಆಚರಿಸಲಾಯಿತು.

ಸಾಹಿತಿ ಡಾ.ವೈ.ಡಿ.ರಾಜಣ್ಣ ಮಾತನಾಡಿ, ಕೇಂದ್ರ ಕಾರ್ಮಿಕ, ರೈಲ್ವೆ ರಕ್ಷಣಾ, ಕೃಷಿ ಸಚಿವರಾಗಿ ಬಾಬು ಜಗಜೀವನ ರಾಂ ಅವರು ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಅಲ್ಲದೇ ಕೃಷಿ ಕ್ಷೇತ್ರಕ್ಕೆ ಆಧುನಿಕ ಸ್ಪರ್ಶ ನೀಡಿದರು. ವಿಶೇಷವಾಗಿ ಕಾರ್ಮಿಕ ಮಂತ್ರಿಯಾಗಿ ಅಸಂಘಟಿತ ಕಾರ್ಮಿಕರಿಗಾಗಿ ಸಮಾನ ಕೆಲಸಕ್ಕೆ ಸಮಾನ ಕೂಲಿ ನೀತಿ ಜಾರಿ ಮಾಡಿ ಸುಧಾರಣೆ ತಂದ ಜನಪರ ಆಡಳಿತಗಾರ ಎಂದರು.

ತಹಸೀಲ್ದಾರ್ ಕೆ.ಕೆ.ಕೃಷ್ಣಮೂರ್ತಿ, ಬಿ.ಮಟಕೆರೆ ಗ್ರಾಪಂ ಸದಸ್ಯ ಬೆಟ್ಟಸ್ವಾಮಿ, ಡಾ.ಬಾಬು ಜಗಜೀವನರಾಂ ವಿಚಾರ ವೇದಿಕೆ ಹೆಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ಸಿ.ತಿಮ್ಮಯ್ಯ, ಸರಗೂರು ತಾಲೂಕು ಅಧ್ಯಕ್ಷ ನಾಗಣ್ಣ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗ್ರೇಡ್ 2 ತಹಸೀಲ್ದಾರ್ ಪರಶಿವಮೂರ್ತಿ, ಉಪ ತಹಸೀಲ್ದಾರ್ ಸುನೀಲ್, ಆದಿಜಾಂಬವ ಮಾದಿಗ ಸಮಾಜದ ಗಡಿ ಯಜಮಾನ ವೆಂಕಟಪ್ಪ ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಕಾರ್ಯದರ್ಶಿ ಮಲ್ಲೇಶ್, ಪಪಂ ಸದಸ್ಯೆ ಸಣ್ಣತಾಯಮ್ಮ, ಕೊತ್ತೇಗಾಲ ಗ್ರಾಪಂ ಸದಸ್ಯ ಮಹದೇವಯ್ಯ, ದಸಂಸ ಸಂಚಾಲಕ ರಾಜಣ್ಣ, ಮುಖಂಡರಾದ ಕೆ.ಟಿ.ಹರೀಶ್, ಮಹೇಶ್, ಪುಟ್ಟಹನುಮಯ್ಯ ಸೇರಿದಂತೆ ಇನ್ನಿತರರಿದ್ದರು.

ದೇಶದ ಮಹಾನಾಯಕರಲ್ಲಿ ಬಾಬೂಜಿ ಅಗ್ರಗಣ್ಯರು

ಕೆ.ಆರ್.ನಗರ, ಏ.5– ದೇಶವೇ ಕೊಂಡಾಡುವ ಮಹಾನಾಯಕರಲ್ಲಿ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ ರಾಂ ಅಗ್ರಗಣ್ಯರು ಎಂದು ತಹಸೀಲ್ದಾರ್ ಸಿ.ಎಸ್.ಪೂರ್ಣಿಮಾ ತಿಳಿಸಿದರು.

ಪಟ್ಟಣದ ಪುರಸಭೆ ಬಳಿಯ ಡಾ.ಬಾಬು ಜಗಜೀವನ್ ರಾಂ ಪ್ರತಿಮೆ ಬಳಿ ತಾಲೂಕು ಆಡಳಿತ, ಮಾದಿಗ, ದಲಿತ ಸಂಘಟನೆಗಳ ವತಿಯಿಂದ ಆಯೋಜಿಸಿದ್ದ ಬಾಬು ಜಗಜೀವನ್ ರಾಂ ಜಯಂತಿಯಲ್ಲಿ ಮಾತನಾಡಿದ ಅವರು, ಯಾರೂ ಹುಟ್ಟಿನಿಂದಲೇ ಪ್ರಖ್ಯಾತಿ ಪಡೆದಿರುವುದಿಲ್ಲ. ತಾವು ನಡೆದು ಬಂದ ದಾರಿ, ಆದರ್ಶಗಳು ಮತ್ತು ತತ್ವ ಸಿದ್ಧಾಂತಗಳಿಂದ ಮಹಾತ್ಮರಾಗುತ್ತಾರೆ ಎಂದರು.

ನಾವು ಎಲ್ಲಾ ಮಹನೀಯರ ಜಯಂತಿಗಳನ್ನು ಆಚರಿಸುವಾಗ ತಿಳಿಯಬೇಕಾದುದು ಅವರು ಸಮಾಜಕ್ಕೆ ನೀಡಿದ ಕೊಡುಗೆಗಳ ಬಗ್ಗೆ. ಉಪ ಪ್ರಧಾನಿಯಾಗಿದ್ದ ಅವರು ರಕ್ಷಣಾ ಸಚಿವರಾಗಿ ಸೈನಿಕರಲ್ಲಿ ಧೈರ್ಯ ತುಂಬಿ ಇಂಡೋ–ಪಾಕ್ ಯುದ್ಧ ಜಯಿಸಲು ಕಾರಣರಾದರು. ಕಾರ್ಮಿಕ ಸಚಿವರಾಗಿ ಕಾರ್ಮಿಕರಲ್ಲಿದ್ದ ಅಸಮಾನತೆ ತೊಡೆದು ಹಾಕಲು ಹಲವು ಯೋಜನೆಗಳನ್ನು ಜಾರಿಗೊಳಿಸಿದರು. ಇಂತಹ ಹಲವು ಯೋಜನೆಗಳನ್ನು ಜಾರಿಗೊಳಿಸಿದ ದಕ್ಷತೆ ಹಾಗೂ ಪ್ರಾಮಾಣಿಕವಾಗಿ ಆಡಳಿತ ನಡೆಸಿದ ಬಾಬೂಜಿ ನಮ್ಮೆಲ್ಲರಿಗೂ ಆದರ್ಶವಾಗಿದ್ದಾರೆ ಎಂದರು.

ತಾಪಂ ಇಓ ಜಿ.ಕೆ.ಹರೀಶ್, ತಾಲೂಕು ಆದಿಜಾಂಬವ ಸಂಘದ ಅಧ್ಯಕ್ಷ ಎಂ.ಲೋಕೇಶ್, ನಿವೃತ್ತ ಪ್ರಾಂಶುಪಾಲ ಡಾ.ಕೃಷ್ಣ ಮಾತನಾಡಿದರು. ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಎಂ.ಹೆಚ್.ಸ್ವಾಮಿ, ಪುರಸಭಾ ಮಾಜಿ ಅಧ್ಯಕ್ಷ ಡಿ.ಕಾಂತರಾಜ್, ಸದಸ್ಯರಾದ ನಟರಾಜು, ಶಂಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ನಗರಾಧ್ಯಕ್ಷ ಎಂ.ಜೆ.ರಮೇಶ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ಎಂಎಸ್‌ಎಸ್ ತಾಲೂಕು ಅಧ್ಯಕ್ಷ ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಬಿ.ಹೆಚ್.ಕುಮಾರ್, ಸಂಘಟನಾ ಕಾರ್ಯದರ್ಶಿ ಸ್ವಾಮಿ, ಅಖಿಲ ಭಾರತ ಜೈ ಭೀಮ್ ದಲಿತ ಹೋರಾಟ ಸಮಿತಿ ತಾಲೂಕು ಅಧ್ಯಕ್ಷ ಚಂದ್ರಶೇಖರ್, ಮುಖಂಡರಾದ ಪರಶುರಾಂ, ರಮೇಶ್, ರಾಜೇಶ್, ರವಿ ಪೂಜಾರಿ, ರಾಮಚಾರಿ, ಶಾಂತಮ್ಮ, ಸಿದ್ದರಾಜು, ವಜ್ರೇಶ್, ಪುರಸಭಾ ಮುಖ್ಯಾಧಿಕಾರಿ ಹೇಮಂತ್ ದೊಲ್ಲೆ, ಟಿಎಸ್‌ಡಬ್ಲ್ಯೂ ಎಸ್.ಎಂ.ಅಶೋಕ್ ಕುಮಾರ್ ಸೇರಿದಂತೆ ಇನ್ನಿತರರಿದ್ದರು.


ಕೆ.ಆರ್.ನಗರದಲ್ಲಿ ಬಾಬೂಜಿ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಜಯಂತಿ ಆಚರಿಸಲಾಯಿತು.

ದೇಶ ಕಂಡ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಬಾಬೂಜಿ



ತಿ.ನರಸೀಪುರ, ಏ.5– ಡಾ.ಬಾಬು ಜಗಜೀವನರಾಂ ದೇಶ ಕಂಡ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಹಾಗೂ ದಕ್ಷ ಆಡಳಿತಗಾರ ಎಂದು ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ತಿಳಿಸಿದರು.

ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ ರಾಂ ಜಯಂತಿ ಅಂಗವಾಗಿ ಪುರಸಭೆ ವ್ಯಾಪ್ತಿಯ ಭೈರಾಪುರ ಗ್ರಾಮದ ಮುಖ್ಯ ದ್ವಾರದಲ್ಲಿರುವ ಬಾಬೂಜಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ದೇಶದಲ್ಲಿದ್ದ ಮೇಲು–ಕೀಳು, ಜಾತಿ ಪದ್ಧತಿ, ಅಸ್ಪೃಶ್ಯತೆ ತೊಡೆದು ಹಾಕಲು ಅನೇಕರು ಸಾಮಾಜಿಕ ನೆಲೆಗಟ್ಟಿನಲ್ಲಿ ಹೋರಾಡಿದರು. ಆದರೆ ಅವರ ಏಳಿಗೆಗೆ ಚುರುಕು ನೀಡಿ ಒಂದು ಸ್ಪಷ್ಟ ರೂಪ ಕೊಟ್ಟ ಕೆಲವೇ ಕೆಲವು ನಾಯಕರಲ್ಲಿ ಬಾಬು ಜಗಜೀವನ ರಾಂ ಒಬ್ಬರು ಎಂದರು.

ಕಾಂಗ್ರೆಸ್ ಜಿಲ್ಲಾ ವೈದ್ಯಕೀಯ ವಿಭಾಗದ ಗ್ರಾಮಾಂತರ ಅಧ್ಯಕ್ಷ ಡಾ.ಎಂ.ಪ್ರದೀಪ್ ಮಾತನಾಡಿ, ಜಗಜೀವನ ರಾಂ ಅವರು ದೇಶದಲ್ಲಿ ಆಹಾರ ಉತ್ಪಾದನೆ ಕುಂಠಿತವಾಗಿರುವುದನ್ನು ಕಂಡು ಆಹಾರ ಉತ್ಪಾದನೆಯಲ್ಲಿ ಹಸಿರು ಕ್ರಾಂತಿಯನ್ನೇ ಮಾಡಿ ವಿದೇಶಗಳಿಂದ ಆಹಾರ ಉತ್ಪನ್ನಗಳ ಆಮದಿನ ಪ್ರಮಾಣವನ್ನು ತಗ್ಗಿಸಿದರು ಎಂದರು. ಈ ವೇಳೆ ಪುರಸಭಾ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಸದಸ್ಯರಾದ ತುಂಬಲಾ ಪ್ರಕಾಶ್, ಎಲ್.ಮಂಜುನಾಥ್, ಸಿಸ್ಟಮ್ ಸಿದ್ದು, ದಿವಾಕರ್, ಯಜಮಾನ್ ದಿಲೀಪ, ಸಿದ್ದನಹುಂಡಿ ನಟರಾಜು, ಸುರೇಶ್, ಮಹದೇವ ಪ್ರಸಾದ್ ಮತ್ತಿತರರಿದ್ದರು.

ಆಹಾರ ಸಮಸ್ಯೆ ನೀಗಿಸಿದ ಜಗಜೀವನ್‌ರಾಂ

ಉಪವಿಭಾಗಾಧಿಕಾರಿ ಮೊಹಮ್ಮದ್ ಹ್ಯಾರೀಸ್ ಸುಮೇರ್



ಹುಣಸೂರು, ಏ.5– ದೇಶ ಆಹಾರದ ಸಮಸ್ಯೆಯಲ್ಲಿ ಬಳಲುತ್ತಿದ್ದ ವೇಳೆ ಆಹಾರದ ಸಮಸ್ಯೆ ನೀಗಿಸಿದವರು ಬಾಬು ಜಗಜೀವನರಾಂ ಎಂದು ಉಪವಿಭಾಗಾಧಿಕಾರಿ ಮೊಹಮ್ಮದ್ ಹ್ಯಾರೀಸ್ ಸುಮೇರ್ ತಿಳಿಸಿದರು.

ನಗರದ ತಾಲೂಕು ಕಚೇರಿಯಲ್ಲಿ ಆಯೋಜಿಸಿದ್ದ ಬಾಬು ಜಗಜೀವನರಾಂ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ದೇಶ ಕೃಷಿಯಲ್ಲಿ ಮುಂದಿದ್ದರೂ, ಆಧುನಿಕ ತಂತ್ರಜ್ಞಾನದ ಕೊರತೆಯಿಂದಾಗಿ ಆಹಾರದ ಸಮಸ್ಯೆ ಉಂಟಾಗಿ ಜನರು ಸಂಕಷ್ಟದಲ್ಲಿದ್ದಾಗ ಪಂಚವಾರ್ಷಿಕ ಯೋಜನೆಗಳ ಮೂಲಕ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿ ಆಹಾರ ಸಮಸ್ಯೆ ನೀಗಿಸಿ ಹಸಿರು ಕ್ರಾಂತಿ ಹರಿಕಾರ ಎಂಬ ಕೀರ್ತಿಗೆ ಪಾತ್ರರಾದರು ಎಂದರು.

ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ ಮಾತನಾಡಿ, ಬಾಬು ಜಗಜೀವನರಾಂ ಬಡತನದಲ್ಲಿ ಹುಟ್ಟಿ ಅಸ್ಪೃಶ್ಯತೆ, ಅಸಮಾನತೆ ಸೇರಿದಂತೆ ಅನೇಕ ಸಮಸ್ಯೆಗಳನ್ನು ಎದುರಿಸಿ ರಾಜಕೀಯವಾಗಿ ನೆಹರೂ ಸರ್ಕಾರದಲ್ಲಿ ಕೃಷಿ ಮಂತ್ರಿಗಳಾಗಿ, ಉಪಪ್ರಧಾನಿಗಳಾಗಿ ಹಂತ ಹಂತವಾಗಿ ಮೇಲೆ ಬಂದವರು. ದಲಿತರ ಮೇಲಿನ ಸೌರ್ಜನ್ಯಗಳನ್ನು ವಿರೋಧಿಸುತ್ತಿದ್ದ ಅವರ ತತ್ವಾದರ್ಶಗಳನ್ನು ಎಲ್ಲರೂ ಪಾಲಿಸಬೇಕು ಎಂದರು. ಈ ವೇಳೆ ತಹಸೀಲ್ದಾರ್ ಡಾ.ನಯನಾ, ಇಓ ಶಿವಕುಮಾರ್, ಬಿಇಓ ರೇವಣ್ಣ, ಉಪ ತಹಸೀಲ್ದಾರ್ ನರಸಿಂಹಯ್ಯ, ಶ್ರೀಪಾದ, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಸಿದ್ದರಾಜು, ಸಿಡಿಪಿಓ ಹರೀಶ್, ದಲಿತ ಮುಖಂಡರಾದ ಬಸವಲಿಂಗಯ್ಯ, ಕೆಂಪರಾಜು, ಸಣ್ಣಮಾದ, ದರ್ಶನ್, ದೇವರಾಜು ಇನ್ನಿತರರಿದ್ದರು.

ಸಿದ್ದರಾಮಯ್ಯ ಕೈ ಬಲಪಡಿಸಲು ನನಗೆ ಮತ ನೀಡಿ

ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮನವಿ

ನಂಜನಗೂಡು, ಏ.5– ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಮುಖ್ಯಮಂತ್ರಿಗಳ ಕ್ಷೇತ್ರವೂ ಸೇರುವುದರಿಂದ ಈ ಚುನಾವಣೆ ಪ್ರತಿಷ್ಠೆಯಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈ ಬಲಪಡಿಸಲು ಈ ಬಾರಿ ನನಗೆ ಅತ್ಯಧಿಕ ಮತ ನೀಡಿ ಗೆಲ್ಲಿಸಿ ಸಂಸತ್ತಿಗೆ ಕಳುಹಿಸುವಂತೆ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮನವಿ ಮಾಡಿದರು.

ತಾಲೂಕಿನ ಕೌಲಂದೆ ಗ್ರಾಮದಲ್ಲಿ ಬದನವಾಳು ಮತ್ತು ಕವಲಂದೆ ಜಿಪಂ ವ್ಯಾಪ್ತಿಯ ಕಾರ್ಯಕರ್ತರ ಚುನಾವಣಾ ಪ್ರಚಾರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ನಾನು 2008 ರಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡು 3 ಲೋಕಸಭಾ ಚುನಾವಣೆಯಲ್ಲಿ ಕೆಲಸ ಮಾಡಿದ್ದೇನೆ. ಇದು ನನಗೆ 4ನೇ ಚುನಾವಣೆ. ನನ್ನ ಪಕ್ಷ ಸಂಘಟನೆ ನೋಡಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು 8 ಆಕಾಂಕ್ಷಿಗಳ ಪೈಕಿ ನನಗೆ ಅವಕಾಶ ಕಲ್ಪಿಸಿದ್ದಾರೆ. ಅಲ್ಲದೆ ಈ ತಾಲೂಕಿನಲ್ಲಿ ಜನಿಸಿ ನನ್ನ ಬಾಲ್ಯವನ್ನೂ ಕಳೆದಿದ್ದೇನೆ. ಆದ್ದರಿಂದ ನನಗೆ ಅತ್ಯಧಿಕ ಮತಗಳನ್ನು ನೀಡಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಕಳೆದ 10 ವರ್ಷಗಳಿಂದ ಯಾವುದೇ ಭರವಸೆ ಈಡೇರಿಸಿಲ್ಲ. ಬೆಲೆ ಏರಿಕೆ, ನಿರುದ್ಯೋಗದಿಂದ ಜನರು ತತ್ತರಿಸುತ್ತಿದ್ದಾರೆ. ಜಾತಿ, ಧರ್ಮದ ಹೆಸರಿನಲ್ಲಿ ವಿಷಬೀಜ ಬಿತ್ತಿ ಸರ್ವಾಧಿಕಾರ ಹೇರುವ ಪ್ರಯತ್ನ ನಡೆಸಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 5 ಗ್ಯಾರಂಟಿಗಳನ್ನು ಜಾರಿಗೊಳಿಸುವ ಮೂಲಕ ನುಡಿದಂತೆ ನಡೆದಿದೆ. ಕಾಂಗ್ರೆಸ್ ಸರ್ಕಾರದ ಈ ಗ್ಯಾರಂಟಿ ಮುಂದುವರೆಯಲು, ಸಿದ್ದರಾಮಯ್ಯರ ಕೈ ಬಲಪಡಿಸಲು ಕಾಂಗ್ರೆಸ್ ಸರ್ಕಾರ ಸಾಧನೆಗಳನ್ನು ಜನರಿಗೆ ತಿಳಿಸಿ ಜನರ ಮನಪೊಲಿಸಿ ಎಂದರು.

ಶಾಸಕ ದರ್ಶನ್ ಮಾತನಾಡಿ, ನನ್ನ ತಂದೆ ಧ್ರುವನಾರಾಯಣ್ 2 ಬಾರಿ ಸಂಸದರಾಗಿ ಜನರೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡು ಚಾಮರಾಜನಗರ ಜಿಲ್ಲೆಗೆ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಕೇಂದ್ರಿಯ ವಿದ್ಯಾಲಯ, ಕವಲಂದೆ ಭಾಗಕ್ಕೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಸೇರಿದಂತೆ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಜೊತೆಗೆ ಕಾರ್ಯಾಧ್ಯಕ್ಷರಾಗಿ 9 ಜಿಲ್ಲೆಯಲ್ಲಿ ಪಕ್ಷ ಸಂಘಟನೆಗೊಳಿಸಿ ಪಕ್ಷಕ್ಕಾಗಿ ಪ್ರಾಣ ತ್ಯಾಗ ಮಾಡಿದ್ದಾರೆ. ಅವರ ಅಭಿವೃದ್ಧಿ ಕೆಲಸಗಳು ನಿಮ್ಮ ಕಣ್ಮುಂದಿವೆ. ಜೊತೆಗೆ ಸಿದ್ದರಾಮಯ್ಯ ಸರ್ಕಾರ ಕೂಡ ಕೌಲಂದೆ ಭಾಗಕ್ಕೆ ನೀರು ಒದಗಿಸಲು 90 ಕೋಟಿ ವೆಚ್ಚದಲ್ಲಿ ದೇವನೂರು ಏತ ನಿರಾವರಿ ಯೋಜನೆ, 40 ಕೋಟಿ ವೆಚ್ಚದಲ್ಲಿ ಬದನವಾಳು ಖಾದಿ ಗ್ರಾಮೋದ್ಯೋಗ ಚಟುವಟಿಕೆ ಉತ್ತೇಜನಕ್ಕೆ ಬಜೆಟ್‌ನಲ್ಲಿ ಅನುದಾನ ನೀಡಿದ್ದಾರೆ. ಈ ಅಭಿವೃದ್ಧಿ ಕಾರ್ಯಗಳು ಹೀಗೆ ಮುಂದುವರೆಯಲು ಕಾಂಗ್ರೆಸ್ ಪಕ್ಷಕ್ಕೆ ಶಕ್ತಿ ನೀಡುವ ಸಲುವಾಗಿ ಅಭ್ಯರ್ಥಿ ಸುನೀಲ್ ಬೋಸ್ ಅವರನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸಿ ಎಂದರು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಕೆ.ಬಿ.ಸ್ವಾಮಿ, ಚೋಳರಾಜು, ಲತಾ, ಕಾಡಾ ಅಧ್ಯಕ್ಷ ಮರಿಸ್ವಾಮಿ, ಮುಖಂಡರಾದ ಶ್ರೀನಿವಾಸ್‌ಮೂರ್ತಿ, ಇಂಧನ್ ಬಾಬು, ಬುಲೆಟ್ ಮಹದೇವಪ್ಪ, ಮುದ್ದುಮಾದಶೆಟ್ಟಿ, ಎನ್.ಟಿ.ಗಿರೀಶ್, ನಾಗರಾಜಯ್ಯ, ಶಿವಣ್ಣ, ರಾಜೇಶ್, ವಿಜಯ್ ಕುಮಾರ್, ಜಯಮಾಲ, ದೊರೆಸ್ವಾಮಿ ನಾಯಕ, ಕೆಪಿಸಿಸಿ ಕಾರ್ಯದರ್ಶಿ ಪ್ರದೀಪ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ತಾಪಂ ಮಾಜಿ ಸದಸ್ಯ ಎಚ್.ಎಸ್.ಮೂಗಶೆಟ್ಟಿ, ಮಹೇಂದ್ರ, ಸೇರಿದಂತೆ ಇತರರಿದ್ದರು.


ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಸುನೀಲ್ ಬೋಸ್ ಉದ್ಘಾಟಿಸಿದರು.

ಕುರುಬ ಸಮಾಜದ ಆಸ್ತಿ ರಕ್ಷಣೆಗೆ ಅಡಕ್ ಕಮಿಟಿ ರಚನೆ

ಹೆಚ್.ಡಿ.ಕೋಟೆ, ಏ.5– ಕುರುಬ ಸಮಾಜದ ಆಸ್ತಿಯಾರ ವೈಯಕ್ತಿಕ ಆಸ್ತಿಯಾಗಬಾರದು ಎಂದು ನೂತನ ಅಡಕ್ ಕಮಿಟಿ ರಚಿಸಲಾಗಿದೆ ಎಂದು ತಾಲೂಕು ಕುರುಬ ಸಮಾಜದ ಮಾಜಿ ಉಪಾಧ್ಯಕ್ಷ ವೀರೇಗೌಡ ತಿಳಿಸಿದರು.

ಪಟ್ಟಣದ ಕುರುಬ ಸಮಾಜದ ಕನಕ ಭವನದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸಂಘದ ಅಧ್ಯಕ್ಷ ಮೊಳಯೂರು ಆನಂದ್ ಅವರು ಕನಕ ಭವನದ ನಿರ್ವಹಣೆಯಲ್ಲಿ ಕೋಟಿ ರೂ.ಗೂ ಹೆಚ್ಚು ಹಣ ದುರುಪಯೋಗ ಪಡಿಸಿಕೊಂಡಿದ್ದಾರೆ. ವಾರ್ಷಿಕ ಮಹಾಸಭೆ ನಡೆಸದೇ ಸಭೆ ಸಮಾರಂಭಗಳ ಹಣವನ್ನು ಸಂಘದ ಖಾತೆಗೆ ಜಮಾ ಮಾಡಿಲ್ಲ. ಅಲ್ಲದೇ ಭವನದ ಶೌಚಾಲಯ ನಿರ್ಮಾಣಕ್ಕೆ ಸರ್ಕಾರದಿಂದ ಬಿಡುಗಡೆಯಾಗಿದ್ದ ಅನುದಾನವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಹೀಗಾಗಿ ಇಂತಹವರ ಆಡಳಿತದಲ್ಲಿ ನಾವು ನಿರ್ದೇಶಕರಾಗಿ ಕೆಲಸ ಮಾಡಲು ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅನೇಕ ಮುಖಂಡರು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 5 ಕೋಟಿ ಅನುದಾನ ನೀಡಿ ಹೈಟೆಕ್ ಕನಕ ಭವನ ನಿರ್ಮಿಸಿಕೊಟ್ಟಿದ್ದಾರೆ. ಇದು ಸಮಾಜಕ್ಕೆ ಹಾಗೂ ತಾಲೂಕಿಗೆ ಗೌರವ ತರುವ ವಿಚಾರ. ಈಗಿನ ಆಡಳಿತ ಮಂಡಳಿ ವಜಾಗೊಳಿಸಿ ಮುಂದಿನ ಚುನಾವಣೆ ನಡೆಯುವವರೆಗೂ ಅಡಕ್ ಕಮಿಟಿ ರಚನೆ ಮಾಡಿ ಭವನವನ್ನು ನಿರ್ವಹಣೆ ಮಾಡಲಾಗುವುದು. ನೂತನ ಕಮಿಟಿ ಸದಸ್ಯರಾಗಿ ಕ್ಯಾತನಹಳ್ಳಿ ಮಾಲೇಗೌಡ, ಬಿದರಳ್ಳಿ ಚಿಕ್ಕಣ್ಣ, ಅಕ್ಕಿ ಬಸವೇಗೌಡ, ಹೊಸಹೊಳಲು ಭೈರೇಗೌಡ, ರಾಜೇಗೌಡನಹುಂಡಿ ಸುರೇಶ್ ಅವರನ್ನು ನೇಮಕ ಮಾಡಿ ಭವನದ ಬೀಗವನ್ನು ಅವರಿಗೆ ಹಸ್ತಾಂತರಿಸಲಾಗಿದೆ ಎಂದರು.

ಈ ವೇಳೆ ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ಮುಖಂಡರಾದ ಯತೀಶ್ ಕುಮಾರ್, ಚಿಕ್ಕಣ್ಣ, ಪುಟ್ಟೇಗೌಡ, ರಾಜಪ್ಪ, ಕೃಷ್ಣೇಗೌಡ, ಮಂಜುನಾಥ್, ಶಿವರಾಜ್, ಕುಮಾರ್, ತಮ್ಮಣ್ಣ, ರವಿ, ಚಂದ್ರೇಗೌಡ, ಸೋಮೇಗೌಡ, ಬೀರೇಗೌಡ, ವೆಂಕಟರಾಜು, ಕರಿಗೌಡ, ಮಾದಪ್ಪ, ಕೃಷ್ಣೇಗೌಡ, ಕೃಷ್ಣಮೂರ್ತಿ, ಶಿವಮುದ್ದೇಗೌಡ, ವಿಜಯ್, ಕಾರ್ ಮಹದೇವ, ನಾಗೇಗೌಡ ಸೇರಿದಂತೆ ಇನ್ನಿತರರಿದ್ದರು.


ನೂತನ ಕಮಿಟಿ ಸದಸ್ಯರಿಗೆ ಕನಕ ಭವನದ ಬೀಗ ಹಸ್ತಾಂತರಿಸಲಾಯಿತು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮಾನ್ ಪಟೇಲ್ ವೈ.ಎಂ.ಭೋಜರಾಜುರವರು

ತಿ. ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ಯಾಚೇನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಪಟೇಲ್ ವೈ.ಕೆ. ಮರಿಸಿದ್ದೇಗೌಡರ ಮಗ ಲೇಟ್ ಪಟೇಲ್ ವೈ.ಎಂ. ಭೋಜರಾಜುರವರ ಧರ್ಮಪತ್ನಿ ಶ್ರೀಮತಿ ಪದ್ಮಮ್ಮನವರು ಮಾಡುವ ವಿಜ್ಞಾಪನೆಗಳು

ದಿನಾಂಕ: 30-3-2024ನೇ ಶನಿವಾರ ನನ್ನ ಪೂಜ್ಯ ಪತಿಯವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧವಾದ ಮೃತರ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 07-04-2024ನೇ ಭಾನುವಾರ ಬೆಳಗ್ಗೆ 11-30 ಗಂಟೆಗೆ ಯಾಚೇನಹಳ್ಳಿ ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುತ್ತೇವೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಪತ್ನಿ ಶ್ರೀಮತಿ ಪದ್ಮಮ್ಮ ಮತ್ತು ಗಂಡುಮಕ್ಕಳು, ಹೆಣ್ಣುಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಪಟೇಲ್ ವೈ.ಕೆ. ಮರಿಸಿದ್ದೇಗೌಡರ ಕುಟುಂಬ ವರ್ಗದವರು ಹಾಗೂ ಯಾಚೇನಹಳ್ಳಿ ಗ್ರಾಮಸ್ಥರು.

ಶ್ರದ್ಧಾಂಜಲಿ ಸಭೆ: ಬೆಳಗ್ಗೆ 9-00 ಗಂಟೆಗೆ
ಗೀತನಮನ ಕಾರ್ಯಕ್ರಮ : ಬೆಳಗ್ಗೆ : 10-00 ಗಂಟೆಗೆ ಕಲ್ಲಾಪುರ ಯೋಗೇಶ್ ಮತ್ತು ತಂಡದವರಿಂದ

8ನೇ ವರ್ಷದ ಸವಿನೆನಪು



ಶ್ರೀ.ಬಿ.ಬೋರೇಗೌಡ್ರು (ಗಂಡೈದ)

(ಶ್ರೀಮತಿ ನಿಂಗಮ್ಮ ಮತ್ತು ಲೇಟ್ ಕೆ.ಬೋರಯ್ಯನವರ ಮಗ, ಕೆ.ಜಿ.ಕೊಪ್ಪಲ್, ಮೈಸೂರು)
ಮಾಲೀಕರು: ಶ್ರೀ ಕಾಲಭೈರವೇಶ್ವರ ಕನ್ವೆನ್ಷನ್ ಹಾಲ್

ನಿಮ್ಮ ಅಗಲಿಕೆಯ ನೋವಿನ ಛಾಯೆ ನಮ್ಮಲ್ಲಿ ಶಾಶ್ವತ ನೋವನ್ನು ತಂದಿದೆ.
ನಿಮ್ಮ ನೆನಪಿನಲ್ಲೇ ಜೀವನವಿಡಿ ಇರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ.

ದುಃಖತಪ್ತರು:
ಮೃತರ ತಾಯಿ ಶ್ರೀಮತಿ ನಿಂಗಮ್ಮ ಮತ್ತು ಲೇಟ್ ಕೆ.ಬೋರಯ್ಯನವರ ಮಕ್ಕಳು, ಮೃತರ ಪತ್ನಿ ಶ್ರೀಮತಿ ಹೆಚ್.ಎಸ್. ಪುಷ್ಪಲತಾ ಮತ್ತು ಮಕ್ಕಳಾದ ಶ್ರೀಮತಿ ಚಂದನ ಪರಮೇಶ್, ಚಿ.ಶರತ್‌ಗೌಡ, ಅರವಿಂದನಗರ ಹಾಗೂ ಬಂಧು-ಮಿತ್ರರು